- ಓಂ -

- ಶ್ರೀಯತ್ಯೈ ನಮಃ -

ನಾಲಾಯಿರ ದಿವ್ಯ ಪ್ರಬಂಧಮ್

।

ನಾನ್ಗಾಯಿರಂ

।

ತಿರುವಾಯ್ ಮೊಳಿ

ನಮ್ಮಾಳ್ವಾರ್

(ತಿರುಕ್ಕುರುಗೂರ್ ಶಠಗೋಪನ್ ವಿರಚಿತ)

।

ನಾಲ್ಕನೆಯ ಸಾವಿರ

ತಮಿಳು ಪಾಶುರಗಳು, ಕನ್ನಡದಲ್ಲಿ ಪ್ರತಿಪದಾರ್ಥ ತಾತ್ಪರ್ಯ
ಮತ್ತು
ವಿವರಣೆಯೊಂದಿಗೆ

ಸಂಪುಟ - 16

ಭಾಗ - 3

Garani Srinivasan

విషయ సూచిక

సం.	వివరణ.	రుబాయీలు	పుట
1.	మంటి బొమ్మలబండాయస్ : మొదటి రుబాయీలు:	11	1
2.	మున్సిర్ జూల వృత్తి : రెండవది	11	21
3	జబిలీ కాలము : మూడవది	11	37
4.	పృథులు దల్లరు వన్ : నాల్గవది	11	51
5.	మెంయస్ మ్మామా వ్యాప్తులిల్ : ఐదవది	11	72
6.	శెయ్యి శాముర్త్రి స్నానాయస్ : ఆరవది	11	94
7.	పంయులంజుదశాలు : ఏడవది	11	114
8.	మంటియానే : ఎనిమిదవది	11	129
9.	శోన్నైల్ విరహోదమా : తొమ్మిదవది	11	144
10.	శన్నమా వలవల శేయు : పదవది	11	165 - 185
	మొత్తం రుబాయీలు	110	

—— o ——

25. 10. 83

ತಿರುವಾಯ್ಮೊಳಿ: ಮೂರನೆಯ ದಶಕ ಮೊದಲ ತಿರುವಾಯ್ಮೊಳಿ

திருவாய்மொழி : மூன்றாம் பத்து : முதல் திருவாய்மொழி

1. ಮುಡಿಚ್ಚೋದಿಯಾಯ್: முடிச்சோதியாய்

1. முடிச்சோதியாய் உனது முகச்சோதி மலர்ந்ததுவோ?
அடிச்சோதி நீ நின்ற தாமரையாய் அலர்ந்ததுவோ?,
படிச்சோதி ஆடையொடும் பல்கலனாய், நின் பைம்
பொன்
கடிச்சோதி கலந்ததுவோ திருமாலே! கட்டுரையே.

ಮುಡಿಚ್ಚೋದಿಯಾಯ್ ಉನದು ಮುಗಚ್ಚೋದಿ ಮಲರ್ನ್ದದುವೋ?,
ಅಡಿಚ್ಚೋದಿ ನೀ ನಿನ್ರ ತಾಮರೈಯಾಯಲರ್ನ್ದದುವೋ?,
ಪಡಿಚ್ಚೋದಿಯಾಡೈಯೊಡುಮ್ ಪಲ್ಗಲನಾಯ್, ನಿನ್ ಪೈಮ್ಬೊನ್
ಕಡಿಚ್ಚೋದಿ ಕಲನ್ದದುವೋ ತಿರುಮಾಲೇ! ಕಟ್ಟುರೈಯೇ.

ಮುಡಿ முடி =, ಕಿರೀಟವು, ಶೋದಿ ಆಯ್ சோதி ஆய் = ತೇಜಃಪೂರ್ಣವಾಗ, ಉನದು உனது = ನಿನ್ನ, ಮುಗಮ್ ಶೋದಿ முகம் சோதி = ಮುಖದ ತೇಜಸ್ಸು, ಮಲರ್ನ್ದದುವೋ மலர்ந்ததுவோ = ಅರಳಿತೋ, ಅಡಿ ಶೋದಿ அடி சோதி = ತಿರುವಡಿಗಳ ತೇಜಸ್ಸು, ~~[illegible]~~ ನೀ ನಿನ್ರ நீ நின்ற = ನೀನು ನಿಂತಿರುವ, ತಾಮರೈ ಆಯ್ தாமரை ஆய் = ತಾವರೆಯಾಗಿ, ಅಲರ್ನ್ದದುವೋ அலர்ந்ததுவோ = ಅರಳಿದೆಯೋ, ಪಡಿ ಶೋದಿ படி சோதி = ಸ್ವಭಾವಸಿದ್ಧವಾದ ತೇಜಸ್ಸಿನ, ಆಡೈಯೊಡುಮ್ ஆடையொடும் = ಉಡುಗೆಯೊಡನೆ, ಪಲ್ ಕಲನ್ ಆಯ್ பல் கலன் ஆய் = ಅನೇಕ ಆಭರಣಗಳಾಗಿ, ನಿನ್ நின் = ನಿನ್ನ, ಪೈ பை = ಸುಂದರವಾದ, ಪೊನ್ பொன் = ಚಿನ್ನದಂತೆ ಶೋಭಿಸುವ (ಚಿನ್ನದ), ಕಡಿ கடி = ಕಟಿಪ್ರದೇಶದ (ಸೊಂಟದ), ಶೋದಿ சோதி = ತೇಜಸ್ಸು, ಕಲನ್ದದುವೋ கலந்ததுவோ = ಕಲೆತುಕೊಂಡಿತೋ, ತಿರುಮಾಲೇ திருமாலே = ಸರ್ವೇಶ್ವರನೇ, ಕಟ್ಟುರೈಯೇ கட்டுரையே = ನಿಜವಾಗಿ ಹೇಳು.

ಸರ್ವೇಶ್ವರನೇ, ನಿನ್ನ ಮುಖದ ತೇಜಸ್ಸು ಕಿರೀಟದ ತೇಜಸ್ಸಾಗಿ ಅರಳಿತೋ, ನಿನ್ನ ತಿರುವಡಿಗಳ ತೇಜಸ್ಸು ನೀನು ನಿಂತಿರುವ ತಾವರೆಯಾಗಿ ಅರಳಿದೆಯೋ, ನಿನ್ನ ಸುಂದರವಾದ ಚಿನ್ನದ (ಚಿನ್ನದಂತೆ ಶೋಭಿಸುವ) ಸೊಂಟದ ತೇಜಸ್ಸು ಸ್ವಭಾವತಃ ತೇಜಸ್ಸಿನಿಂದ ಕೂಡಿದ (ಹಳದಿಬಣ್ಣದ) ಉಡುಗೆಯೊಡನೆ

Garani Srinivasan

ಅನೇಕ ಆಭರಣಗಳು ತಳೆದುಕೊಂಡವೋ, ನಿಜವಾಗಿ ಹೇಳು.

ಈ ಪಾಶುರದಲ್ಲಿ ಭಗವಂತನ ದಿವ್ಯಾಕೃತಿಯನ್ನು ಸೌಂದರ್ಯಪೂರ್ಣವಾಗಿ ವರ್ಣಿಸಿ ಹೇಳಲಾಗಿದೆ.

ಭಗವಂತನ ದೇಹವನ್ನು ಮೂರು ಭಾಗಗಳಾಗಿ ವಿಂಗಡಿಸಿ ಹೇಳಲಾಗಿದೆ: ತಲೆ, ದೇಹ, ಪಾದಗಳು ಎಂದು: ಮೂಲ, ಮಧ್ಯ, ಅಂತ್ಯ ಎಂಬಂತೆ. ತಲೆಯಲ್ಲಿ ಮುಖದ ಭಾಗ ಆಕರ್ಷಕವಾದದ್ದು. ದೇಹದಲ್ಲಿ ನಡುವಿನ ಭಾಗವೇ ಆಕರ್ಷಕ. ಕಾಲುಗಳಲ್ಲಿ ಪಾದಗಳು ಆಕರ್ಷಕ. ಭಗವಂತನನ್ನು ಅಪ್ರತಿಮ ತೇಜೋರಾಶಿಯೆಂದು ವರ್ಣಿಸಲಾಗುತ್ತದೆ. ಅವನ ದೇಹದ ಒಂದೊಂದು ಭಾಗವೂ ತೇಜೋಮಯವೇ!

ಭಗವಂತನು ರತ್ನಮಯವಾದ ಕಿರೀಟವನ್ನು ತಲೆಯಲ್ಲಿ ಧರಿಸಿದ್ದಾನೆ. ಅವನ ಸೊಂಟದಲ್ಲಿ (ನಡುವಿನಲ್ಲಿ) ವಿದ್ಯುತ್ ಪೀತಾಂಬರ ಶೋಭಿಸುತ್ತದೆ. ಜೊತೆಗೆ ನಾನಾ ದಿವ್ಯಾಭರಣಗಳು ಕೂಡಿಕೊಂಡಿವೆ. ಭಗವಂತನು ಸುಂದರವೂ ವಿಶಾಲವೂ ಆದ ಹೊಂದಾವರೆಯ (ಚಿನ್ನದ ತಾವರೆಯ) ಮೇಲೆ ನಿಂತಿದ್ದಾನೆ. ಹೀಗೆ, ತಲೆಯನ್ನು ಕಿರೀಟವೂ, ನಡುವನ್ನು ಪೀತಾಂಬರವೂ ಆಭರಣಗಳೂ, ಮತ್ತು ತಿರುವಡಿಯನ್ನು ತಾವರೆಯೂ ಆಶ್ರಯಿಸಿವೆ. ಒಂದೊಂದೂ ಅದರದರ ರೀತಿ ಬಣ್ಣ ಗುಣಗಳಿಂದ ತನ್ನಂತೆ ಹೊಳೆಯುತ್ತವೆ. ಅವುಗಳೆಲ್ಲಾ ಬಲು ದೊಡ್ಡ ತೇಜಸ್ಸನ್ನುಳ್ಳವನು ಭಗವಂತ. ಅವನ ಸಹಜ ಆಶ್ರಯವನ್ನು ಪಡೆದದ್ದರಿಂದ ಆ ವಸ್ತುಗಳ ತೇಜಸ್ಸು ಇನ್ನೂ ಹೆಚ್ಚಾಗಬಹುದಲ್ಲವೇ? ಇದು ಭ್ರಾಂತಿ. ವಾಸ್ತವಿಕ ವಿಷಯವೇ ಬೇರೆ.

ಒಂದೊಂದು ವಸ್ತುವಿಗೂ ಅದರದರ ಬಣ್ಣ, ರೂಪ, ಗುಣ, ಸ್ವಭಾವಗಳಿವೆ. ಅವುಗಳನ್ನು ಹಾಗೆ ಸೃಷ್ಟಿಸಿ, ಒಂದೊಂದರಲ್ಲೂ ಒಂದು ವಿಶಿಷ್ಟತೆಯನ್ನು ಇರಿಸಿದವನು ಎಲ್ಲಕ್ಕೂ ಆಧಾರನಾದ ಭಗವಂತನೇ! ಕಿರೀಟದ ಚಿನ್ನಕ್ಕೆ ಆಕರ್ಷಕವಾದ ಹಳದಿ ಬಣ್ಣವಿದೆ. ರತ್ನಗಳಿಗೆ ಬಗೆಬಗೆಯ ಹೊಳೆಯುವ ಕಿರಣಗಳನ್ನು ಪ್ರಸರಿಸುವ ಸ್ವಭಾವವಿದೆ. ವಿದ್ಯುತ್ ಪೀತಾಂಬರಕ್ಕೆ ಅದರ ಸ್ವಾಭಾವಿಕವಾದ ಮೃದುವ ಮತ್ತು ಹೊಳೆಯುವ ಹಳದಿಯ ಬಣ್ಣಗಳಿವೆ. ಆಭರಣಗಳ ಗಂಟು ರತ್ನ ಕಿರೀಟದಂತೆಯೇ ಅನರ್ಘ್ಯವಾದ ಹೊಳಪು. ಚಿನ್ನದ ತಾವರೆಗೆ ಚಿನ್ನದ ಹೊಳಪೂ ಕೋಮಲತೆಯೂ ಕೂಡಿಕೊಂಡು ಆಕರ್ಷಣೀಯವಾಗುತ್ತದೆ.

ಈಗ, ಪಾಶುರದಲ್ಲಿ ಹೇಳಿರುವಂತೆ, ರತ್ನಕಿರೀಟವು ಭಗವಂತನ ತಲೆಯ ಮೇಲೆ, ಅವನ ಮುಖವನ್ನು ಆಶ್ರಯಿಸಿದೆ. ವಿದ್ಯುತ್ ಪೀತಾಂಬರವು ಭಗವಂತನ ನಡುವನ್ನು ಆಶ್ರಯಿಸಿ, ಅವನ ಚಿನ್ನದ ದೇಹವನ್ನು ಹೊಂದಿಕೊಂಡಿದೆ. ಆಭರಣಗಳು ಹಾಗೆಯೇ ಸ್ವಾಮಿಯ ದೇಹಕ್ಕೆ ಹೊಂದಿಕೊಂಡಿವೆ. ಭಗವಂತನು ಚಿನ್ನದ ತಾವರೆಯ ಮೇಲೆ ನಿಂತಿದ್ದಾನಂತೆ! ಅವನ ತಿರುವಡಿಗಳನ್ನು ಆ ತಾವರೆ ಆಶ್ರಯಿಸಿದೆ. ಈ ವಸ್ತುಗಳಿಗೆ ಅವುಗಳ ರೂಪ, ಬಣ್ಣ, ಗುಣ,

ಸ್ವಭಾವಗಳು ಸಹಜವಾಗಿ ಬಂದಿವೆ, ಬಿಟು. ಆದರೆ, ಆಳ್ವಾರರು ಈ ಪರಸ್ಪರ ಸಂಬಂಧದ ಸ್ವಾರಸ್ಯವೇನು ಎಂಬುದನ್ನು ಇಲ್ಲಿ ತಿಳಿಸುತ್ತಾರೆ.

ಆಳ್ವಾರರು ಹೇಳುತ್ತಾರೆ: ಸರ್ವೇಶ್ವರ, ನಿನ್ನ ಮುಖವನ್ನು ಆಶ್ರಯಿಸಿರುವ ಕಿರೀಟದ ಹೊಳಪು ನಿನ್ನ ತೇಜಃಪುಂಜವಾದ ಮುಖಮಂಡಲದಿಂದಲೇ ಬಂದಿರಬೇಕಲ್ಲವೇ? ನಿನ್ನ ನಡುವನ್ನು (ದೇಹವನ್ನು) ಅಲಂಕರಿಸಿರುವ ವಸ್ತ್ರ-ಪೀತಾಂಬರವೂ ನಾನಾ ರತ್ನಾಭರಣಗಳೂ ಅವುಗಳ ದಿವ್ಯ ಕಾಂತಿಯನ್ನು ನಿನ್ನ ದೇಹದಿಂದಲೇ ಪಡೆದುಕೊಂಡಿವೆಯಲ್ಲವೇ? ನೀನು ನಿಂತಿರುವ ಚಿನ್ನದ ತಾವರೆಯೂ ನಿನ್ನ ಶ್ರೀಪಾದಗಳ ಕಾಂತಿಯಿಂದ ಅಷ್ಟು ಸುಂದರವಾಗಿ ಶೋಭಿಸುತ್ತಿದೆಯಲ್ಲವೇ? ಇಲ್ಲವೇ, ಈ ವಸ್ತುಗಳಿಗೆ ಸ್ವಭಾವತಃ ಅವುಗಳ ರೂಪ, ಬಣ್ಣ, ಗುಣಗಳು ಇರುವುವೇ? ಈ ನನ್ನ ಭ್ರಾಂತಿಯನ್ನು ದಯಮಾಡಿ ನೀಗಿಸು. ಸತ್ಯಾಂಶವೇನೆಂಬುದನ್ನು ನನಗೆ ತಿಳಿಸಿ ಕೃಪೆಮಾಡು.

ಭಗವಂತನನ್ನಾಶ್ರಯಿಸದ ವಸ್ತುವಿಲ್ಲ. ಅವನ ಹೊರತು ಅವಕ್ಕೆ ರೂಪವೂ ಇಲ್ಲ, ಬಣ್ಣವೂ ಇಲ್ಲ, ಸ್ವಭಾವವೂ ಇಲ್ಲ, ಗುಣವೂ ಇಲ್ಲ. ಅವುಗಳಿಗೆ ಅಸ್ತಿತ್ವವೇ ಇಲ್ಲ. ಅವನು ಎಲ್ಲಕ್ಕೂ ಆಧಾರ, ಎಲ್ಲಕ್ಕೂ ಮೂಲ.

2. கட்டுரைக்கில் தாமரை நின் கண் பாதம் கையொவ்வா,
சுட்டுரைத்த நன் பொன் உன் திருமேனி யொளி யொவ்வாது,
ஒட்டுரைத்திவ்வுலகுன்னைப் புகழ்வெல்லாம் பெரும்பாலும்,
பட்டுரையாய்ப் புற்கென்றே காட்டுமால் பரஞ்சோதீ

ಕಟ್ಟುರೈಕ್ಕಿಲ್ ತಾಮರೈ ನಿನ್ ಕಣ್ ಪಾದಮ್ ಕೈಯೊವ್ವಾ,
ಸುಟ್ಟುರೈತ್ತ ನನ್ ಪೊನ್ ಉನ್ ತಿರುಮೇನಿ ಒಳಿಯೊವ್ವಾದು,
ಒಟ್ಟುರೈತ್ತಿವ್ವುಲಗುನ್ನೈ ಪುಗಳ್ವೆಲ್ಲಾಮ್ ಪೆರುಮ್ಬಾಲುಮ್,
ಪಟ್ಟುರೈಯಾಯ್ಪುರ್ಕೆನ್ರೇ ಕಾಟ್ಟುಮಾಲ್ ಪರಞ್ಜೋದೀ!

ಕಟ್ಟುರೈಕ್ಕಿಲ್ கட்டுரைக்கில் = ದೃಷ್ಟಾಂತವಾಗಿ ಹೇಳಬಹುದಾದರೆ, ತಾಮರೈ தாமரை = ತಾವರೆಯು, ನಿನ್ நின் = ನಿನ್ನ, ಕಣ್, ಪಾದಮ್, ಕೈ கண், பாதம், கை = ಕಣ್ಣುಗಳಿಗೂ, ಪಾದಗಳಿಗೂ, ಕೈಗಳಿಗೂ, ಒವ್ವಾದು ஒவ்வாது = ಹೋಲಿಕೆಯು ಆಗುವುದಿಲ್ಲ (ಹೋಲುವುದಿಲ್ಲ), ಸುಟ್ಟು சுட்டு = [illegible], ಉರೈತ್ತ உரைத்த = ತಿಕ್ಕಿದ, ನನ್ ಪೊನ್ நன் பொன் = ಅಪರಂಜಿ ಚಿನ್ನವು, ಉನ್ உன் = ನಿನ್ನ, ತಿರುಮೇನಿ திருமேனி = ದಿವ್ಯ ದೇಹದ, ಒಳಿ ஒளி = ಕಾಂತಿಗೆ, ಒವ್ವಾದು ஒவ்வாது = ಹೋಲುವು[illegible] = ಒಪ್ಪುವಂತೆ, ಒಟ್ಟುರೈತ್ತು உரைத்து = ಹೇಳುವ,

ಇವ್ವುಲಗು இவ்வுலகு = ಈ ಲೋಕವು (ಲೋಕದ ಜನರು), ಉನ್ನೈ உன்னை
= ನಿನ್ನನ್ನು, ಪುಗಳ್ವು ಎಲ್ಲಾಮ್ புகழ்வெல்லாம் = ಹೊಗಳುವುದೆಲ್ಲ
ವೂ, ಪೆರುಮ್ಬಾಲುಮ್ பெரும்பாலும் = ಬಹುಮಟ್ಟಿಗೆ, ಪಟ್ಟುರೈ
ಆಯ್ பட்டுரையாய் = ಅರ್ಥವಿಲ್ಲದ ಮಾತಾಗಿ, ಪುಱ್ಕು புற்கு =
ಸುಳ್ಳು (ಅಸತ್ಯ), ಎನ್ರೇ என்றே = ಎಂದೇ, ಕಾಟ್ಟುಮಾಲ್
காட்டும் ஆல் = ತೋರಿಸುವುದು (ವ್ಯಕ್ತವಾಗುವುದು) ಆದ್ದರಿಂದ,
ಪರನ್ ಶೋದೀ பரஞ்சோதீ = (ನೀನು) ಪರಂಜ್ಯೋತಿ ಸ್ವರೂಪನೇ.

ಸತ್ಯವಾಗಿ ಹೇಳಬೇಕಾದರೆ, ನಿನ್ನ ಕಣ್ಣುಗಳಿಗಾಗಲೀ, ಪಾದಗಳಿಗಾಗಲೀ, ಕೈಗಳಿಗಾಗಲೀ ತಾವರೆಯೂ ಹೋಲುವುದಿಲ್ಲ. ಪುಟಕ್ಕೆ ಕರಗಿಸಿದ ಅಪರಂಜಿ ಚಿನ್ನವು ನಿನ್ನ ದಿವ್ಯವಾದ ದೇಹಕಾಂತಿಗೆ ಹೋಲುವುದಿಲ್ಲ. ಒಪ್ಪುವಂತೆ ಹೇಳುವ ಈ ಲೋಕದ ಜನರು ನಿನ್ನನ್ನು ಹೊಗಳಿ ಹೇಳುವುದೆಲ್ಲವೂ ಬಹುಮಟ್ಟಿಗೆ ಅರ್ಥವಿಲ್ಲದ ಮಾತಾಗಿ, ಅಸತ್ಯವೆಂದೇ ವ್ಯಕ್ತವಾಗುವುದು. ಆದ್ದರಿಂದ ನೀನು ಪರಂಜ್ಯೋತಿಸ್ವರೂಪನೇ! (2)

ಹಿಂದಿನ ಪಾಶುರದಲ್ಲಿ ಭಗವಂತನ ಮುಖದ ವರ್ಚಸ್ಸನ್ನು, ದೇಹಕಾಂತಿಯನ್ನು ಪಾದಗಳ ಕೋಮಲತೆಯನ್ನು. ~~ಇವುಗಳು~~ ಕುರಿತು ಹೇಳಲಾಯಿತು. ಅವುಗಳಲ್ಲಿ ಒಂದೊಂದಕ್ಕೂ ಒಂದೊಂದು ಉಪಮಾನ ~~...~~ ಕೊಟ್ಟು ವರ್ಣಿಸಲಾಯಿತು. ಆಳ್ವಾರರ್ ತಮ್ಮ ವಿವರಣೆ ಒಂದು ಬಗೆಯ ಭ್ರಾಂತಿಯನ್ನು ಕಂಡರೇನೋ! ಅವರು ಆಡಿದ ಮಾತಿನ, ಬಳಸಿದ ಉಪಮಾನಗಳ, ಅಸತ್ಯತೆಯನ್ನು ಕುರಿತ ತಮ್ಮ ಭ್ರಾಂತಿಯನ್ನು ನಿವಾರಿಸುವಂತೆ ಭಗವಂತನನ್ನು ಪ್ರಾರ್ಥಿಸಿದರು.

ಈ ಪಾಶುರದಲ್ಲಿ ಅದೇ ವಿಷಯವನ್ನು ಮತ್ತೊಂದು ರೀತಿಯಲ್ಲಿ ವಿವರಿಸಲಾಗುತ್ತದೆ.

ಭಗವಂತನ ಸೃಷ್ಟಿಯಲ್ಲಿ ಬಹಳ ಸುಂದರವಾದ ವಸ್ತುಗಳಿವೆ, ನಿಜ. ಅವುಗಳನ್ನು ಬಳಸಿಕೊಂಡು ಭಗವಂತನನ್ನು ಸ್ತುತಿಸಿ ಹಾಡುತ್ತಾರೆ ಲೋಕದ ಜನ. ಇದು ಸರಿಯೇ? ಭಗವಂತನಿಗೆ ಅವನ ಸೃಷ್ಟಿಯ ಯಾವ ವಸ್ತುವನ್ನು ಹೋಲಿಸಲು ಸಾಧ್ಯವಾಗುತ್ತದೆ? ಯಾವ ವಸ್ತುವಿನಿಂದ ಅವನ ದಿವ್ಯಸೌಂದರ್ಯ, ಪ್ರಕಾಶಗಳನ್ನು ಸೂಚಿಸಲು ಸಾಧ್ಯ? ಹಾಗಿಲ್ಲ ಹೇಳುವುದರಲ್ಲಿ ಸತ್ಯತೆ ಎಷ್ಟಿದೆ? ಈ ವಿಷಯದ ವಿಮರ್ಶನೆ ನಡೆಯಬೇಡವೇ?

ಭಗವಂತನನ್ನು 'ಪುಂಡರೀಕಾಕ್ಷ' ಎನ್ನುತ್ತಾರೆ. ಅವನ ಕಣ್ಣುಗಳು ತಾವರೆಯಂತೆ ವಿಶಾಲವೂ ಆಕರ್ಷಕವೂ ಆದವು ಎಂಬ ಕಾರಣದಿಂದ. ಅವನ ಕೈಗಳನ್ನೂ, ಪಾದಗಳನ್ನೂ ಕಮಲದ ಹೂವಿನ ಅಂದಕ್ಕೂ ಕೋಮಲತೆಗೂ ಹೋಲಿಸಿ ಹೇಳುತ್ತಾರೆ. ಅವನ ದೇಹ ಪುಟಕ್ಕಿ~~ಟ್ಟ~~ ಚಿನ್ನದಂತೆ ಪ್ರಕಾಶಿಸುತ್ತದೆ ಎನ್ನುತ್ತಾರೆ. ಇದು ಜನರ ಮಾತಿನ ವೈಶಿಷ್ಟ್ಯ.

Garani Srinivasan

ಭಗವಂತನ ಅತ್ಯತಿಶಯ ಸೌಂದರ್ಯ ತೇಜಸ್ಸುಗಳನ್ನು ಅವನ ಸೃಷ್ಟಿಯ ಯಾವ ವಸ್ತುವನ್ನೂ ಸರಿಸಾಟಿ ಹೇಳುವುದಕ್ಕಾಗುವುದಿಲ್ಲ. ಎಲ್ಲವನ್ನೂ ಮೀರಿ ಅವನನ್ನು "ಪರಂಜ್ಯೋತಿ ಎಂಬ ಒಂದು ಮಾತಿನಿಂದ ವಿವರಿಸಬಹುದಲ್ಲವೇ! 'ಪರಂಜ್ಯೋತಿ' ಎಂಬುದರಲ್ಲಿ ಎರಡು ಪದಗಳಿವೆ ಪರ ಮತ್ತು ಜ್ಯೋತಿ ತನ್ನ ಸೃಷ್ಟಿಯಾದ ಬ್ರಹ್ಮಾಂಡಕ್ಕಿಂತಲೂ ಆಚೆ ಇರುವವನಾದ್ದರಿಂದ ಅವನು 'ಪರ'. ಎಲ್ಲಾ ಬೆಳಗುವ ವಸ್ತುಗಳಿಗಿಂತ ಭಿನ್ನನಾಗಿ, ವಿಲಕ್ಷಣವಾದ ಪ್ರಕಾಶದಿಂದ ಕೂಡಿ ಬೆಳಗುವನಾದ್ದರಿಂದ ಅವನು 'ಜ್ಯೋತಿ' ಈ ಎರಡು ಪದಗಳ ಮೂಲಕ ಭಗವಂತನನ್ನು ಕುರಿತು ಹೇಳುವುದರಲ್ಲಿ ಪೂರ್ಣತೆಯನ್ನು ಕಾಣುತ್ತೇವೆ. ಆದ್ದರಿಂದಲೇ ಆಳ್ವಾರರು ಭಗವಂತನನ್ನು 'ಪರಂಜ್ಯೋತಿ' ಎಂದು ಕರೆದಿರಬಹುದು.

ಆಳ್ವಾರರು ಹೇಳುತ್ತಾರೆ: ಭಗವಂತ, ಈ ಲೋಕದ ಜನ ನಿನ್ನನ್ನು ನಾನಾ ರೀತಿಯಲ್ಲಿ ಹೊಗಳಿ ಹೇಳುತ್ತಾರೆ ನಿನ್ನ ಕೈ, ಕಾಲು ಕಣ್ಣುಗಳನ್ನು ಸುಂದರವಾದ ತಾವರೆ ಹೂವಿಗೆ ಹೋಲಿಸುತ್ತಾರೆ ನಿನ್ನ ದೇಹದ ಅದ್ಭುತವಾದ ಕಾಂತಿಯನ್ನು ಪುಟಕ್ಕಿಟ್ಟ ಚಿನ್ನಕ್ಕೆ ಹೋಲಿಸುತ್ತಾರೆ. ಅವರಾಡುವ ಮಾತುಗಳಲ್ಲಿ ನಿಜವಾಗಿಯೂ ಸತ್ಯತೆ ಇದೆಯೇ? ಅವರ ಮಾತುಗಳಿಗೆ ಅರ್ಥವಿದೆಯೇ? ತಾವರೆಯು ನಿನ್ನ ಕೈ ಕಾಲು ಕಣ್ಣುಗಳನ್ನು ಹೊಂದುವುದಿಲ್ಲ. ಅಪರಂಜಿ ಚಿನ್ನವೂ ನಿನ್ನ ಮೈಬಣ್ಣ ಕಾಂತಿಗಳನ್ನು ಹೊಂದಿಕೊಳ್ಳುವುದಿಲ್ಲ. ಇವೆಲ್ಲ ಸತ್ಯಕ್ಕೆ ದೂರವಾದ್ದರಿಂದ ನಿನ್ನನ್ನು "ಪರಂಜ್ಯೋತಿ" ಎಂದು ಕರೆಯುವುದು ಸರಿ ಎನ್ನಬಹುದೇ?

3. பரஞ்சோதிநீ பரமாய் நின்னிகழ்ந்துபின், மற்றோர்
பரஞ்சோதியின்மையின் படியோவிநிகழ்கின்ற,
பரஞ்சோதிநின்னுள்ளே படருலகம்படைத்த, எம்
பரஞ்சோதீ! கோவிந்தா! பண்புரைக்கமாட்டேனே.

ಪರಂಜೋದಿ ನೀ ಪರಮಾಯ್ ನಿನ್ನಿಗೞನ್ದು ಪಿನ್, ಮಱ್ಱೋರ್
ಪರಂಜೋದಿ ಇನ್ಮೈಯಿನ್ ಪಡಿಯೋವಿ ನಿಗೞ್ಗಿನ್ಱ,
ಪರಂಜೋದಿ ನಿನ್ನುಳ್ಳೇ ಪಡರುಲಗಂ ಪಡೈತ್ತ, ಎಮ್
ಪರಂಜೋದೀ! ಗೋವಿನ್ದಾ! ಪಣ್ಬುರೈಕ್ಕ ಮಾಟ್ಟೇನೇ

ಪರಮ್ ಜೋದಿ பரம் சோதி = ಅದ್ವಿತೀಯವಾದ ಜ್ಯೋತಿಸ್ವರೂಪನೇ, ನೀ நீ = ನೀನು, ಪರಮ್ ಆಯ್ பரம் ஆய = ಸರ್ವಶ್ರೇಷ್ಠನೆಂದು, (ಸರ್ವಶ್ರೇಷ್ಠನಾಗಿರುವನೆಂದು), ನಿನ್ நின் = ನಿನ್ನನ್ನು, ಇಗೞನ್ದು ಪಿನ್ இகழ்ந்து பின் = ಮರೆತ ಬಳಿಕ (ಅಲಕ್ಷಿಸಿದ ಬಳಿಕ), ಮಱ್ಱೋರ್ மற்று ஓர் = ಬೇರೆ ಒಂದು (ಮತ್ತೊಬ್ಬ), ಪರಂಜೋದಿ ಇನ್ಮೈಯಿನ್

பரஞ்சோதி இன்மையின் = ಸರ್ವೋತ್ಕೃಷ್ಟ ಜ್ಯೋತಿಯು ಇಲ್ಲ
ದಿರುವುದರಿಂದ, ಪಡಿ ಓವಿ படி ஓவி = (ನಿನಗೆ) ಪ್ರತಿಯಾದ ವಸ್ತು
ಇಲ್ಲದಿರುವುದರಿಂದ (ಇಲ್ಲದಂತೆ), ನಿಗೞ್ಕಿನ್ಱ நிகழ்கின்ற = ಇರುವ
ಪರಂಜೋದಿ பரஞ்சோதி = ಅದ್ವಿತೀಯವಾದ ಜ್ಯೋತಿಯೂ, ನಿನ್ ಉಳ್ಳೆ
நின் உள்ளே = ನಿನ್ನ ಅಂತರಂಗದಲ್ಲಿಯೇ (ಸಂಕಲ್ಪಮಾತ್ರದಿಂದಲೇ),
ಪಡರ್ ಉಲಗಮ್ படர் உலகம் = ವಿಸ್ತಾರವಾದ ಲೋಕಗಳನ್ನು,
ಪಡೈತ್ತ படைத்த = ಪಡೆದ, ಎಮ್ ಪರಂಜೋದಿ எம் பரஞ்சோ
தி = ನಮ್ಮ ಪರಮ ಜ್ಯೋತಿಸ್ವರೂಪನೇ, ಗೋವಿಂದ கோவிந்தா =
ಮಿತಿಯಿಲ್ಲದ ಸಹಜಸ್ವಭಾವಗಳುಳ್ಳವನೇ, (ಲೋಕಗಳನ್ನು ರಕ್ಷಿಸುವವನೇ),
ಪಣ್ಬು பண்பு = ನಿನ್ನ ಸ್ವರೂಪ ಸ್ವಭಾವಗಳನ್ನು, ಉರೈಕ್ಕ ಮಾಟ್ಟೇನೆ
உரைக்க மாட்டேனே = ವರ್ಣಿಸಲಾರೆನಲ್ಲ!

ಅದ್ವಿತೀಯವಾದ ಜ್ಯೋತಿಸ್ವರೂಪನೇ, ನೀನು ಸರ್ವಶ್ರೇಷ್ಠನೆಂದು ನಿನ್ನನ್ನು ಹೊರತು ಬಿಟ್ಟು, ಬೇರೊಬ್ಬ ಸರ್ವೋತ್ಕೃಷ್ಟ ಜ್ಯೋತಿಯು ಇಲ್ಲದಿರುವುದರಿಂದ, ಸಾಟಿಯಿಲ್ಲದ ಜ್ಯೋತಿಯೂ, ನಿನ್ನ ಸಂಕಲ್ಪಮಾತ್ರದಿಂದಲೇ ವಿಸ್ತಾರವಾದ ಲೋಕಗಳನ್ನು ~~ಪಡೆದ~~ ನಮ್ಮ ಪರಮ ಜ್ಯೋತಿಸ್ವರೂಪನೇ, ಮಿತಿಯಿಲ್ಲದ ಸಹಜಸ್ವಭಾವಗಳುಳ್ಳವನೇ, ಲೋಕಗಳನ್ನು ರಕ್ಷಿಸುವವನೇ, ನಿನ್ನ ಸ್ವರೂಪ ಸ್ವಭಾವಗಳನ್ನು ವರ್ಣಿಸಲಾರೆನಲ್ಲ! (3)

ಹಿಂದಿನ ಪಾಶುರದಲ್ಲಿ, ಲೋಕದ ರೀತಿಯಂತೆ, ತಮಗೆ ತೋರಿದ ಸುಂದರವಾದ ಪ್ರಕೃತಿಯ ವಸ್ತುಗಳಿಗೆ ಭಗವಂತನ ಅವಯವಗಳನ್ನು ಹೋಲಿಸಿ ಸ್ತುತಿಸುವುದೆಲ್ಲವೂ ಅರ್ಥವಿಲ್ಲದ ಹೊಗಳಿಕೆಯಂತಾಯ್ತು, ಆಶ್ಚರ್ಯಕರವೆಂದು ಹೇಳಲಾಯಿತು. ಆದ್ದರಿಂದ, ಅವನನ್ನು 'ಪರಂಜ್ಯೋತಿ' ಎಂಬ ಶಬ್ದದಿಂದ ಹೇಳಲಾಯಿತು. ಮಾತಿನಲ್ಲಿ ವರ್ಣಿಸುವುದು ಉಚಿತವಾದ ಬದ್ಧವೆಂದು ಹೇಳಲಾಯಿತು.

ಇಲ್ಲಿ, ಅದೇ ವಿಷಯವನ್ನು ಮುಂದುವರಿಸಿ ಹೇಳಲಾಗುತ್ತದೆ.

ಆಳ್ವಾರರು ಹೇಳುತ್ತಾರೆ: ಸ್ವಾಮೀ, ನೀನು 'ಪರ'ನೂ, 'ಜ್ಯೋತಿ'ಸ್ವರೂಪಿಯೂ ಆಗಿರುವೆ. ನಿನ್ನನ್ನು ಮರೆತು, ಅಲ್ಪನ ಬದ್ಧನೆಂದು ಭಾವಿಸಿದರೆ, ನಿನಗೆ ಸಾಟಿಯಾದ ಸರ್ವೋತ್ಕೃಷ್ಟವಾದ ಜ್ಯೋತಿ ಮತ್ತೊಂದಿಲ್ಲವಾಗಿದೆ. ನಿನ್ನ ಶಕ್ತಿಯೂ ಅಪಾರ. ನೀನು ಸಂಕಲ್ಪಿಸಿದ ಕೂಡಲೇ ಎಲ್ಲಾ ಲೋಕಗಳೂ ಸೃಷ್ಟಿಯಾಗಿಬಿಡುತ್ತವೆ. ಅವುಗಳನ್ನು ನೀನು ರಕ್ಷಿಸುತ್ತೀ. ನಿನ್ನ ಸ್ವರೂಪ ಸ್ವಭಾವಗಳಿಗೆ ಮಿತಿಯೇ ಇಲ್ಲ. ಸಾಮಾನ್ಯ ಮನುಷ್ಯನಾ, ಅವುಗಳನ್ನು

ವಿವರಿಸಿ ಹೇಳುವುದಕ್ಕೆ ನಾನು ಶಕ್ತನಲ್ಲವಲ್ಲ.

ಆಳ್ವಾರರು ಹೇಳುವ ಒಂದೊಂದು ವಾಕ್ಯವೂ ಭಗವಂತನನ್ನು ಸಾಕ್ಷಾತ್ಕಾರವಾಗಿ, ವಾಸ್ತವವಾಗಿ ವಿವರಿಸುವ ಮಾತೇ! ವೇದಗಳಲ್ಲಿ ಭಗವಂತನನ್ನು ಸ್ತುತಿಸುವ ರೀತಿಯಲ್ಲೇ ಇಲ್ಲಿ ನಡೆಯುವ ವಿವರಣೆ!

4. மாட்டாதேயாகிலும் இம்மலர் தலை மாஞாலம், நின்
மாட்டாய மலர் புரையும் திருவுருவம் மனம் வைக்க
மாட்டாத பலசமய மதி கொடுத்தாய், மலர்த்துழாய்
மாட்டே நீ மனம் வைத்தாய் மாஞாலம் வருத்தாதே?

ಮಾಟ್ಟಾದೇ ಆಯಾಗಿಲುಮ್ ಇಮ್ಮಲರ್ ತಲೈ ಮಾಞಾಲಮ್, ನಿನ್
ಮಾಟ್ಟಾಯ ಮಲರ್ ಪುರೈಯುಮ್ ತಿರುವುರುವಮ್ ಮನಮ್ ವೈಕ್ಕ,
ಮಾಟ್ಟಾದ ಪಲಸಮಯ ಮದಿ ಕೊಡುತ್ತಾಯ್, ಮಲರ್ತ್ತುೞಾಯ್
ಮಾಟ್ಟೇ ನೀ ಮನಮ್ ವೈತ್ತಾಯ್ ಮಾಞಾಲಮ್ ವರುತ್ತಾದೇ?

ಮಾಟ್ಟಾದೇ மாட்டாதே = ಸಾಧ್ಯವಾಗದೆ, ಆಗಿಲುಮ್ ஆகிலும் = ಆದರೂ, ಇಮಲರ್ ತಲೈ இ மலர் தலை = ಈ ಹೂವಿನ ಮೇಲಿರುವ, ಮಾಞಾಲಮ್ மாஞாலம் = ವಿಸ್ತಾರವಾದ ಲೋಕವು, ನಿನ್ நின் = ನಿನ್ನನ್ನು, ಮಾಟ್ಟು ಆಯ மாட்டு ஆய = ಹೊಂದಿಕೊಂಡಿರುವ, ಮಲರ್ ಪುರೈಯುಮ್ மலர் புரையும் = ಹೂವನ್ನು ಹೋಲುವ, ತಿರು ಉರುವಮ್ திரு உருவம் = ದಿವ್ಯಸುಂದರರೂಪದಲ್ಲಿ, ಮನಮ್ ವೈಕ್ಕ மனம் வைக்க = ಮನಸ್ಸನ್ನು ನಿಲ್ಲಿಸಲು, ಮಾಟ್ಟಾದ மாட்டாத = ಸಾಧ್ಯವಿಲ್ಲದ (ಆಗದೆ ಇರುವ), ಪಲಸಮಯಮ್ பலசமயம் = ಹಲವು ಮತಗಳಲ್ಲಿ, ಮದಿ ಕೊಡುತ್ತಾಯ್ மதி கொடுத்தாய் = ವ್ಯಾಮೋಹವನ್ನುಂಟುಮಾಡಿದವನೇ, ಮಲರ್ ತುೞಾಯ್ மலர் துழாய் = ಹೂವಿನಿಂದ ತುಂಬಿದ ತುಲಸಿಯನ್ನು, ಮಾಟ್ಟೇ மாட்டே = ಧರಿಸುವುದರಲ್ಲಿಯೇ, ನೀ நீ = ನೀನು, ಮನಮ್ ವೈತ್ತಾಯ್ மனம் வைத்தாய் = ಮನಸ್ಸನ್ನಿಟ್ಟಿರುವವನೇ (ಮಗ್ನನಾಗಿರುವವನೇ), ಮಾಞಾಲಮ್ மாஞாலம் = ವಿಸ್ತಾರವಾದ ಲೋಕವು, ವರುತ್ತಾದೇ வருத்தாதே = ವ್ಯಥೆಪಡುವುದಿಲ್ಲವೇ?

ಸಾಧ್ಯವಾಗದೆ ಆದರೂ, ಈ ಹೂವಿನ ಮೇಲಿರುವ ವಿಸ್ತಾರವಾದ ಲೋಕವು ನಿನ್ನನ್ನು ಹೊಂದಿಕೊಂಡಿರುವ ಹೂವನ್ನು ಹೋಲುವ ದಿವ್ಯಸುಂದರರೂಪದಲ್ಲಿ ಮನಸ್ಸನ್ನು ನಿಲ್ಲಿಸಲು ಆಗದೆ ಇರುವ ಹಲವು ಮತಗಳಲ್ಲಿ ವ್ಯಾಮೋಹವನ್ನುಂಟುಮಾಡಿದವನೇ, ಹೂವಿನಿಂದ ತುಂಬಿದ ತುಲಸಿಯನ್ನು ಧರಿಸುವುದರಲ್ಲಿಯೇ ನೀನು ಮಗ್ನನಾಗಿರುವವನೇ ವಿಸ್ತಾರವಾದ ಲೋಕವು ವ್ಯಥೆಪಡುವುದಿಲ್ಲವೇ?

Garani Srinivasan

ಭಗವಂತನನ್ನು ವಾಸ್ತವವಾದ ರೀತಿಯಲ್ಲಿ ವರ್ಣಿಸಲು ಸಾಧ್ಯವಿಲ್ಲವೆಂಬುದನ್ನು ಹಿಂದಿನ ಪಾಶುರದಲ್ಲಿ ಆಳ್ವಾರರು ಹೇಳಿದರು. ಅದಕ್ಕೆ ತಕ್ಕ ಹಾಗೆಯೇ ಭಗವಂತನ ದಿವ್ಯ ಸ್ವರೂಪವನ್ನಾಗಲಿ, ಅನುಪಮ ಸೌಂದರ್ಯವನ್ನಾಗಲಿ ಇಲ್ಲಿ ವರ್ಣಿಸಲು ಅವರು ಯತ್ನಿಸದೆ, ಭಗವಂತನ ಸ್ವಭಾವವನ್ನು ಎತ್ತಿತೋರಿಸುವುದು ಇಂದು ವಿಶೇಷವೆನಿಸುತ್ತದೆ.

ಇದು ಸ್ವಲ್ಪ ಕಠಿಣವಾದ ಪಾಶುರ. ಅರ್ಥವನ್ನು ಅನ್ವಯಕ್ರಮದಲ್ಲಿ ಹೇಳಿದಾಗ ಒಂದು ಬಗೆಯಾಗಿ, ಪ್ರತಿಪದಾರ್ಥದ ರೀತಿಯಲ್ಲಿ ಹೇಳಿದಾಗ ಸ್ವಲ್ಪ ವ್ಯತ್ಯಾಸವಾಗಿಯೂ ತೋರಿಬರುತ್ತದೆ. ಆದಾಗ್ಯೂ, ಇದರಲ್ಲಿ ತೋರಿಬರುವ ಮುಖ್ಯಾಂಶ ಎರಡಕ್ಕೂ ಒಂದೇ ಆಗಿರುವುದು: "ಈ ಲೋಕದ ಜನರು ನಿನ್ನ ಸ್ವರೂಪವನ್ನು ಸೌಂದರ್ಯವನ್ನು ಅರಿತುಕೊಳ್ಳದಿರುವಾಗ, ಅವರ ಮುಂದೆ ಹಲವಾರು ಅರ್ಥವಿಲ್ಲದ ಧರ್ಮಗಳನ್ನಿಟ್ಟು ಅವರನ್ನು ಭ್ರಮೆಗೊಳಿಸಿ, ಪಾಂಪ್ಯ ಪೂರ್ಣವಾದ ತುಳಸಿಯ ಹಾರವನ್ನು ಧರಿಸುವುದರಲ್ಲಿಯೇ ನೀನು ಮುನ್ನಾದರೆ, ಲೋಕದ ಜನ ವ್ಯಕ್ತಿಗೆಡುವುದಿಲ್ಲವೇ?".

ಭಗವಂತನು ಸೃಷ್ಟಿಯನ್ನು ನಡೆಸಿ, ಬಳಿಕ, ಅದರ ಅಭ್ಯುದಯದ ವಿಷಯದಲ್ಲಿ ಮನಸ್ಸು ಮಾಡದೆ, ನಿರ್ಲಿಪ್ತನಾಗಿ ಬಿಡಬಹುದೇ? ಸೃಷ್ಟಿ ಎಷ್ಟು ಮುಖ್ಯವೋ ಅದರ ರಕ್ಷಣೆಯೂ ಉದ್ಧಾರವೂ ಅಷ್ಟೇ ಮುಖ್ಯ ಎಂಬುದು ಇಲ್ಲಿಯ ಅಭಿಪ್ರಾಯವೆನ್ನಬಹುದು.

5. வருந்தாத வருந்தவத்த மலர்கதிரின் சுடருடம்பாய்,
வருந்தாதஞானமாய் வரம்பின்றிமுழுதியன்றாய்,
வருங்காலம் நிகழ்காலம் கழிகாலமாயுலகை,
ஒருங்காக வளிப்பாய்! சீர் எங்குலக்க வோதுவனே?

ವರುನ್ದಾದ ವರುನ್ದವತ್ತ ಮಲರ್‌ಕದಿರಿನ್ ಶುಡರುಡಮ್ಬಾಯ್,
ವರುನ್ದಾದ ಜ್ಞಾನಮಾಯ್ ವರಮ್ಬಿನ್ರಿ ಮುೞುದಿಯನ್ರಾಯ್,
ವರುಙ್ಗಾಲಮ್ ನಿಹೞ್‌ಕಾಲಮ್ ಕೞಿಕಾಲಮಾಯುಲಗೈ,
ಒರುಙ್ಗಾಗವಳಿಪ್ಪಾಯ್! ಶೀರ್ ಎಙ್ಗುಲಕ್ಕ ವೋದುವನೇ?

ವರುನ್ದಾದ வருந்தாத = ಪ್ರಯತ್ನವೇ ಪಡದ, ಸಂಕಟಪಡೋಗದ, (ಸಹಜವಾದ, ಸ್ವಾಭಾವಿಕವಾದ), ಅರುಮ அரும் = ಅಪರೂಪವಾದ, ತವತ್ತ தவத்த = ತಪಸ್ಸಿನ ಪರಿಣಾಮವಾದ, ಮಲರ್ ಕದಿರಿನ್ மலர் கதிரின் = ಪ್ರಸರಿಸುವ ಕಿರಣಗಳುಳ್ಳ, ಶುಡರ್ சுடர் = ತೇಜೋಮಯವಾದ, ಉಡಮ್ಬಾಯ್ உடம்பு ஆய் = ದೇಹವನ್ನುಳ್ಳವನೇ, ವರುನ್ದಾದ வருந்தாத = ಎಂದಿಗೂ ಕುಂಠಿತಗೊಳ್ಳದ, ಜ್ಞಾನಮಾ ಆಯ್ ஞானம் ஆய் = ಜ್ಞಾನ

Galani Srinivasan

ಸ್ವರೂಪಿಯೇ, ಪರಮ್ಮು ಇನ್ಸುಡರ್ ಉಡಂಬು ಅಣ್ಣಾಲ್ = ಎಂಶಿಯಲ್ಲದಂತೆ, ಮುಟ್ಟುದು ಮೂವುಲಗು = ಪರಿಪೂರ್ಣನಾಗಿ, ಇಯನ್ ಅನಾಯ್ ಅವಳಣಾಗ್ಗಯ್ = ವ್ಯಾಪಿಸಿರುವವನೇ, ಪೆರುಮಾ ಕಾಲಮಾ ವರುಂ ಕಾಲಂ = ಮುಂದೆ ಬರುವ ಕಾಲವೂ, ನಿಕಳ್ ಕಾಲಮಾ ನಿಕಳ್ ಕಾಲಂ = ಈಗ ನಡೆಯುತ್ತಿರುವ ಕಾಲವೂ, ಕಳಿ ಕಾಲಮುಮಾ ಕಳ್ಳಿ ಕಾಲಮುಂ = ಕಳೆದು ಹೋದ ಕಾಲವೂ, ಓಂಬ ಆಯ್ = ಆಗಿ, ಉಲಗ್ಗೆ ಉಲಾಗ = ಲೋಕಗಳನ್ನು, ಒರುಜ್ಞಾನ (ಒರುಜ್ಞ ಆದ) ಪುರುಕಾಕ್ಕ ಆಕ = ಒಟ್ಟಾಗಿ, ಅಳ್ಳಿಪ್ಪು ಅಣಿಪ್ಪಯ್ = ರಕ್ಷಿಸುವವನೇ, ಕೀರ್ತಿ = (ನಿನ್ನ) ಕಲ್ಯಾಣಗುಣಗಳನ್ನು, ಎಜ್ಞನಾಂ ಕುರುಕ್ಕ = ಎತ್ತಲಂದ, ಉಲಪ್ಪು ಉಳಂಕ = (ಪೂರ್ತಿಯಾಗಿ) ಮುಗಿಸಲು, ಶಿದುವನೇ ಸೊಲ್ಲುವನ್ = ಹೇಳಲಿ?

ಅಪ್ರಯತ್ನಪೂರ್ವಕವಾದ (ಸಹಜವಾದ) ಅತಿಶಯವಾದ ಕಪನ್ನ ಪರಿಣಾಮವಾದ ಪ್ರಕಾಶಿಸುವ ಕಿರಣಗಳುಳ್ಳ ತೇಜೋಮಯವಾದ ದೇಹವನ್ನುಳ್ಳವನೇ, ಎಂದೆಂದಿಗೂ ಕುಗ್ಗದ ಜ್ಞಾನಸ್ವರೂಪಿಯೇ, ಎಂಶಿಯಲ್ಲದಂತೆ ಪರಿಪೂರ್ಣನಾಗಿ ವ್ಯಾಪಿಸಿರುವವನೇ, ಮುಂದಿನ ಕಾಲ ಈಗಿನ ಕಾಲ ಮತ್ತು ಕಳೆದ ಕಾಲವೂ ಆಗಿ ಲೋಕಗಳನ್ನು ಒಟ್ಟಾಗಿ (ಎಲ್ಲ ಆತ್ಮಗಳನ್ನೂ) ರಕ್ಷಿಸುವವನೇ, ನಿನ್ನ ದಿವ್ಯ ಕಲ್ಯಾಣಗುಣಗಳನ್ನು ಎತ್ತಲಂದ ಮುಗಿಸಲು (ಪೂರ್ತಿಯಾಗಿ) ಪ್ರಯತ್ನಿಸಲಿ? (5)

ಹಿಂದಿನ ಮೂರನೆಯ ಪಾಶುರದಲ್ಲಿ ಆಳ್ವಾರರು "ನೀಳಿಂದಾ, ನಿನ್ನನ್ನು ನಾನು ವರ್ಣಿಸಲಾರೆನಲ್ಲ" ಎಂದು ಹೇಳಿದ್ದರಷ್ಟೆ. ಈ ಪಾಶುರ ಮತ್ತೆ ಗುಣಾತಿಶಯಕ್ಕೆ ಮುಗಿಯದಂತೆಯೇ.

ಆಳ್ವಾರರು ಹೇಳುತ್ತಾರೆ: ಸಹಜವೂ ಸ್ವಾಭಾವಿಕವೂ, ವಿಲಕ್ಷಣವೂ ಪರಿಶುದ್ಧವೂ ಆದ ಪ್ರಕಾಶಿಸುವ ಕಿರಣಗಳುಳ್ಳ ತೇಜೋಮಯವಾದ ರೂಪವುಳ್ಳವನೇ, ಎಂದೆಂದಿಗೂ ಕುಗ್ಗದ (ಕ್ಷೀಣಿಸದ) ಜ್ಞಾನಮಯನೇ, ಪರಿಪೂರ್ಣನಾಗಿ ಎಲ್ಲೆಲ್ಲಿಯೂ ವ್ಯಾಪಿಸಿರುವವನೇ, ಕಾಲಸ್ವಾಮಿಯಾಗಿ, ಭೂತ, ವರ್ತಮಾನ, ಭವಿಷ್ಯತ್ಕಾಲಗಳನ್ನು ನಿರ್ವಹಿಸುತ್ತಿರುವವನೇ, ಎಲ್ಲಾ ಲೋಕಗಳನ್ನೂ ಎಲ್ಲಾ ಆತ್ಮಗಳನ್ನೂ ರಕ್ಷಿಸುವವನೇ, ನಿನ್ನ ವಿಲಕ್ಷಣವಾದ ದಿವ್ಯಕಲ್ಯಾಣಗುಣಗಳನ್ನು ಪೂರ್ತಿಯಾಗಿ ವಿವರಿಸಿ ಹೇಳಲು ಎಲ್ಲಿಂದ ಮೊದಲು ಮಾಡಲಿ?

ಭಗವಂತನು ಅತಿಶಯ ತೇಜೋರೂಪಿ, ಪರಿಪೂರ್ಣ ಜ್ಞಾನಸ್ವರೂಪಿ, ಸರ್ವವ್ಯಾಪಿ, ಕಾಲಸ್ವಾಮಿ, ಸರ್ವರಕ್ಷಕ. ಅವನನ್ನು ಎಲ್ಲಿಂದ ಮೊದಲು ಮಾಡಿ ಪೂರ್ತಿಯಾಗಿ ವರ್ಣಿಸಿ ಹೇಳಲು ಪ್ರಯತ್ನಿಸುವುದು?

Garani Srinivasan

6. ஓதுவாரோத்தெல்லாம் எவ்வுலகத்தெவ்வெவையும்,
சாதுவாய் நின்புகழின் தகையல்லால் பிறிதில்லை,
போதுவாழ் புனந்துழாய் முடியினாய்! பூவின்மேல்,
மாதுவாழ் மார்பினாய்! என்சொல்லி யான் வாழ்த்துவனே?

ಓದುವಾರೋತ್ತೆಲ್ಲಾಮ್ ಎವ್ವುಲಗತ್ತೆವ್ವೆವೈಯುಮ್,
ಶಾದುವಾಯ್ ನಿನ್ಪುಗಳಿನ್ ತಗೈಯಲ್ಲಾಲ್ ಪಿಱಿದಿಲ್ಲೈ,
ಪೋದುವಾೞ್ ಪುನನ್ದುೞಾಯ್ ಮುಡಿಯಿನಾಯ್! ಪೂವಿನ್ಮೇಲ್,
ಮಾದುವಾೞ್ ಮಾರ್ಬಿನಾಯ್! ಎನ್ ಶೊಲ್ಲಿ ಯಾನ್ ವಾೞ್ತ್ತುವನೇ?

ಓದುವಾರ್ ஓதுவார் = ಅಧ್ಯಯನ ಮಾಡುವವರ, ಓತ್ತು ಎಲ್ಲಾಮ್ ஓத்து எல்லாம் = ಓದು ಎಲ್ಲವೂ (ವೇದಗಳೆಲ್ಲವೂ), ಎವ್ವುಲಗತ್ತು எவ்வுலகத்து = ಯಾವ ಲೋಕದ, ಎವ್ವೆವೈಯುಮ್ எவ் எவையும் = ಯಾವ ಯಾವುದಾದರೂ (ಶಾಸ್ತ್ರಾದಿಗಳಾದರೂ), ಶಾದು ಆಯ್ சாது ஆய் = ಯುಕ್ತವಾದವು (ಅವಶ್ಯ ಬೇರೆ ಇಲ್ಲದಂತೆ), ನಿನ್ ಪುಗಳಿನ್ நின் புகழின் = ನಿನ್ನ ಮಹಾಕೀರ್ತನೆಯ, ತಗೈ ಅಲ್ಲಾಲ್ தகை அல்லால் = ಕೊಳ್ಳುವಾದಲ್ಲದೆ, ಪಿಱಿದು ಇಲ್ಲೈ பிறிது இல்லை = ಬೇರೆಯಾವುದಿಲ್ಲ, ಪೋದು ವಾೞ್ போது வாழ் = ಹೂವು ಬೆಳೆಯುವ (ಬೆಳಗುವ), ಪುನಮ್ புனம் = ಕ್ಷೇತ್ರಗಳ, ತುೞಾಯ್ துழாய் = ತುಳಸಿಯನ್ನು (ಹಾರವನ್ನು), ಮುಡಿಯಿನಾಯ್ முடியினாய் = ತಲೆಯಲ್ಲಿ ಧರಿಸಿದವನೇ, ಪೂವಿನ್ ಮೇಲ್ பூவின் மேல் = ಹೂವಿನ ಮೇಲಿನ, ಮಾದು மாது = ಲಕ್ಷ್ಮೀಯು, ವಾೞ್ வாழ் = ನಿತ್ಯವಾಸ ಮಾಡುವ, ಮಾರ್ಬಿನಾಯ್ மார்பினாய் = ಎದೆಯುಳ್ಳವನೇ, ಎನ್ ಶೊಲ್ಲಿ என் சொல்லி = ಏನನ್ನು ಹೇಳಿ, ಯಾನ್ ವಾೞ್ತ್ತುವನೇ வாழ்த்துவனே = ಸ್ತುತಿಸಲಿ! யான் = ನಾನು, ವಾೞ್ತ್ತುವನೇ

ಅಧ್ಯಯನ ಮಾಡುವವರ ಓದೆಲ್ಲವೂ (ವೇದಗಳೆಲ್ಲವೂ), ಯಾವ ಲೋಕದ ಯಾವ ಯಾವುದಾದರೂ (ಶಾಸ್ತ್ರಾದಿಗಳಾದರೂ), ಅವಶ್ಯ ಬೇರೆ ಇಲ್ಲದಂತೆ ಯುಕ್ತವಾದವು ನಿನ್ನ ಮಹಾಕೀರ್ತನೆಯ ಕೊಳ್ಳುವಾದನಲ್ಲದುವುದಲ್ಲದೆ ಬೇರೇನೂ ಇಲ್ಲ. ಹೂ ಬೆಳೆಯುವ ಕ್ಷೇತ್ರಗಳ ತುಳಸಿಯಾದಾರವನ್ನು ತಲೆಯಲ್ಲಿ ಧರಿಸಿದವನೇ, ಹೂವಿನ ಮೇಲಿನ ಲಕ್ಷ್ಮೀಯು ನಿತ್ಯವಾಸ ಮಾಡುವ ಎದೆಯುಳ್ಳವನೇ, ನಾನು ಏನನ್ನು ಹೇಳಿ ನಿನ್ನನ್ನು ಸ್ತುತಿಸಲಿ! (6)

Garani Srinivasan

"ಓದುವಾರ್ ಓತ್ತು" — 'ಓತ್ತು' ಎಂದರೆ ಓದುವಿಕೆ, ಓದುವವನ್ನು, ~~[illegible]~~ ಬೋಧಕನನ್ನು ಉಚ್ಚರಿಸಿಕೊಳ್ಳತಕ್ಕ ಓದು - ವೇದಗಳು. ವೇದಗಳನ್ನು ಶ್ರದ್ಧಾಭಕ್ತಿಗಳಿಂದ ಅಧ್ಯಯನ ಮಾಡತಕ್ಕ ವೇದಾಧ್ಯಯನಕರ್ತರು - 'ಓದುವಾರ್'.

"ಎವ್ವುಲಗತ್ತು ಎವ್ವೆವ್ವೈಯುಮ್" - ಭೂಲೋಕದಲ್ಲಿರುವ ವೇದವೂ ಸ್ವರ್ಗಾದಿ ಬೇರೆ ಲೋಕಗಳಲ್ಲಿ ರೂಢಿಯಲ್ಲಿರುವ ಶಾಸ್ತ್ರ, ಇತಿಹಾಸ, ಪುರಾಣಾದಿಗಳನ್ನು ಕುರಿತ ಮಾತು.

"ಪೋದುವಾಳ್ ಪುನಂದುಳಾಯ್" - ಹುಲುಸಾಗಿ, ಸೊಬಗು ತುಂಬಿ ಹೂಗಳು ಬೆಳೆಯುವ ಕ್ಷೇತ್ರಗಳು ಫಲವತ್ತಾದವು. ಅವುಗಳಲ್ಲಿ ಬೆಳೆಯುವ ತುಳಸಿಯೂ ಸಹ ಬಹಳ ಸೊಂಪಾಗಿ ಬೆಳೆಯುತ್ತವೆ.

"ಪೂವಿನ್ ಮೇಲ್ ಮಾದು ವಾಳ್ ಮಾರ್ಬು" - ಸಮುದ್ರ ಮಥನ ಕಾಲದಲ್ಲಿ ದಿವ್ಯವಾದ ಕಮಲದ ಹೂವಿನಲ್ಲಿ ಕಾಣಿಸಿಕೊಂಡ ಹೆಣ್ಣು ಯೇ ಶ್ರೀಲಕ್ಷ್ಮೀದೇವಿ. ಅಲ್ಲಿ ನೆರೆದಿದ್ದ ಬ್ರಹ್ಮರುದ್ರಾದಿ ಎಲ್ಲ ದೇವತೆಗಳ ಪೈಕಿ ಎಲ್ಲರನ್ನು ಬಿಟ್ಟು ಶ್ರೀಮನ್ನಾರಾಯಣನನ್ನೇ ಆಕೆ ವರಿಸಿದಳು. ಆಕೆಯನ್ನು ಪ್ರೀತಿಯ ಅತ್ಯಾದರದಿಂದ ತನ್ನ ವಕ್ಷಸ್ಥಲದಲ್ಲಿಯೇ ಸದಾ ನೆಲೆಸಿರುವಂತೆ ಇರಿಸಿಕೊಂಡನು.

ಆಳ್ವಾರರು ಹೇಳುತ್ತಾರೆ: ಸ್ವಾಮೀ, ವೇದಗಳು ಮತ್ತು ಶಾಸ್ತ್ರಾದಿಗಳು ಎಲ್ಲವೂ ನಿನ್ನ ಗುಣಕೀರ್ತನೆಯ ತಬ್ಬು ಪಾಡಿನಲ್ಲಿಯೇ ಬೆಳೆದಿವೆಯಲ್ಲದೆ ಅವುಗಳಲ್ಲಿ ಬೇರೇನೂ ಇಲ್ಲ. ಫಲವತ್ತಾದ ಕ್ಷೇತ್ರದಲ್ಲಿ ಸೊಂಪಾಗಿ ಬೆಳೆದ ತುಳಸಿಯ ಹಾರವನ್ನು ಕಿರೀಟದಲ್ಲಿ ಧರಿಸಿರುವವನೇ, ಶ್ರೀದೇವಿಯನ್ನು ನಿನ್ನ ವಕ್ಷಸ್ಥಲವಾಸಿಯಾಗಿ ಮಾಡಿಕೊಂಡಿರುವವನೇ, ನಾನು ನಿನ್ನನ್ನು ಏನೆಂದು ವರ್ಣಿಸಬಲ್ಲೆ!

7. வாழ்த்துவார் பலராக நின்னுள்ளே நான்முகனை,
மூழ்த்த நீருலகெல்லாம் படையென்று முதல்படைத்தாய்!
கேழ்த்த சீரரன் முதலாக் கிளர்தெய்வமாய்க் கிளர்ந்து,
சூழ்த்தமரர் துதித்தால் உன்தொல் புகழ் மாசூணாதே?

ವಾಳ್ತ್ತುವಾರ್ ಪಲರಾಗ ನಿನ್ನುಳ್ಳೇ ನಾನ್ಮುಗನೈ,
ಮೂಳ್ತ್ತ ನೀರುಲಗೆಲ್ಲಾಮ್ ಪಡೈಯೆನ್ರು ಮುದಲ್ ಪಡೈತ್ತಾಯ್!,
ಕೇಳ್ತ್ತ ಶೀರರನ್ ಮುದಲಾಕ್ಕಿಳರ್ ದೆಯ್ವಮಾಯ್ಕ್ಕಿಳರ್ನ್ದು,
ಶೂಳ್ತ್ತಮರರ್ ತುದಿತ್ತಾಲ್ ಉನ ತೊಲ್ ಪುಗಳ್ ಮಾಶೂಣಾದೇ?

ಪೋಱ್ಱುವಾರ್ போற்றுவார் = ಸ್ತುತಿಸುವವರು, ಪಲರ್ பலர் = ಹಲವರು, ಆಹ ஆக = ಆಗಬೇಕೆಂದು, ನಿನ್ ಉಳ್ಳೇ நின் உள்ளே = ನಿನ್ನ ಅಂತರಂಗದಲ್ಲೇ (ಸಂಕಲ್ಪದಿಂದಲೇ), ನಾನ್ ಮುಹನೈ நான்முகனை = ಚತುರ್ಮುಖನನ್ನು, ಮೂೞ್ತ್ತ மூழ்த்த = ಮುಳುಗಿರುವ, ನೀರ್ நீர் = ನೀರಿನಿಂದ, ಉಲಹೆಲ್ಲಾಮ್ உலகெல்லாம் = ಎಲ್ಲಾ ಲೋಕಗಳನ್ನೂ, ಪಡೈ ಎನ್ಱು படை என்று = ಮತ್ತೆ ಪಡೆದುಕೋ (ಸೃಷ್ಟಿಸು) ಎಂದು, ಮುದಲ್ முதல் = ಪ್ರಾರಂಭದಲ್ಲಿಯೂ, ಪಡೈತ್ತಾಯ್ படைத்தாய் = ಸೃಷ್ಟಿಸಿದವನೇ, ಕೇೞ್ತ್ತ கேழ்த்த = ಪ್ರಸಿದ್ಧವಾದ, ಶೀರ್ சீர் = ಗುಣಗಳುಳ್ಳ, ಅರನ್ அரன் = ಹರನೇ, ಮುದಲಾ முதலா = ಮೊದಲಾದ, ಕಿಳರ್ ದೆಯ್ವಮಾಯ್ கிளர் தெய்வமாய் = ಶಕ್ತರಾದ ದೈವಗಳಾಗಿ, ಕಿಳರ್ನ್ದು கிளர்ந்து = ಅವತರಿಸಿ, ಶೂೞ್ನ್ದು சூழ்ந்து = ನಿನ್ನನ್ನು ಸುತ್ತಿಕೊಂಡು, ಅಮರರ್ அமரர் = ಅಮರರು (ದೇವತೆಗಳು), ತುದಿಕ್ಕಾಲ್ துதிக்கால் = ಸ್ತುತಿಸುವುದರಿಂದ, ಉನ್ உன் = ನಿನ್ನ, ತೊಲ್ ಪುಗೞ್ தொல் புகழ் = ಅನಾದಿಯಾದ ಕೀರ್ತಿಯು, ಮಾಶೂಣಾದೇ மாசூணாதே (ಮಾಶು+ಊಣಾದೇ) = ಕಳಂಕಗೊಳ್ಳುವುದಿಲ್ಲವೇ?

ಸ್ತುತಿಸುವವರು ಹಲವರು ಆಗಬೇಕೆಂದು ನಿನ್ನ ಸಂಕಲ್ಪದಿಂದಲೇ ಚತುರ್ಮುಖನನ್ನು, ನೀರಲ್ಲಿ ಮುಳುಗಿರುವ ಲೋಕಗಳನ್ನೆಲ್ಲಾ ಮತ್ತೆ ಸೃಷ್ಟಿಸು ಎಂದು, ಪ್ರಾರಂಭದಲ್ಲಿ ಸೃಷ್ಟಿಸಿದವನೇ, ಪ್ರಸಿದ್ಧವಾದ ಗುಣಗಳುಳ್ಳ ಹರನೇ ಮೊದಲಾದ ಶಕ್ತರಾದ ದೈವಗಳಾಗಿ ಅವತರಿಸಿ, ನಿನ್ನನ್ನು ಸುತ್ತಿಕೊಂಡು ಅಮರರು ಸ್ತುತಿಸುತ್ತಿರುವುದರಿಂದ, ನಿನ್ನ ಅನಾದಿಯಾದ ಕೀರ್ತಿಯು ಕಳಂಕಗೊಳ್ಳುವುದಿಲ್ಲವೇ? (7)

ವೇದ ಶಾಸ್ತ್ರಾದಿಗಳನ್ನು ನೋಡಿದರೆ, ಅವೆಲ್ಲವೂ ನಿನ್ನ ಗುಣಕೀರ್ತನನೆಗೇ ಮೀಸಲಾಗಿವೆ — ಎಂಬುದು ಒಂದನೆ ಭಾವ.

ನೀನು ಸೃಷ್ಟಿಸಿದ ಚತುರ್ಮುಖ, ಹರ, ದೇವತೆಗಳು ಮುಂತಾದವರೆಲ್ಲಾ ನಿನ್ನನ್ನು ಸುತ್ತುಗಟ್ಟಿಕೊಳ್ಳುತ್ತಲೇ (ನಿನ್ನ ಗುಣಕೀರ್ತನ ಮಾಡುತ್ತಲೇ) ಇರುವುದರಿಂದ, ನಿನ್ನ ನಿತ್ಯಸಿದ್ಧವಾದ ಕೀರ್ತನೆಗೆ ಯಾವ ಕೊರತೆಯುಂಟಾಗುವುದೋ! ಎಂಬುದು ಕೀ ಭಾವ.

ಆಳ್ವಾರರು ಹೇಳುತ್ತಾರೆ: ನಿನ್ನ ಗುಣಕೀರ್ತನಗಳನ್ನು ಪ್ರಚಾರ ಮಾಡುವುದಕ್ಕೆ ಹಲವರು ಇರಬೇಕು ಎಂಬುದು ನಿನ್ನ ಸೃಷ್ಟಿಯ ಉದ್ದೇಶವಾಗಿರಬೇಕು! ಆದ್ದರಿಂ, ನಿನ್ನ ಸಂಕಲ್ಪದಿಂದಲೇ ಚತುರ್ಮುಖನನ್ನು ಮೊದಲು ಪಡೆದೆ. ಪ್ರಳಯ ಜಲದಲ್ಲಿ ಮುಳುಗಿದ್ದ ಎಲ್ಲಾ ಲೋಕಗಳನ್ನೂ ಮತ್ತೆ ಸೃಷ್ಟಿಸು ಎಂದು ಅವನಿಗೆ ಆಜ್ಞೆಯಿತ್ತೆ. ಅವನು ಸೃಷ್ಟಿಕಾರ್ಯದಲ್ಲಿ ತೊಡಗಿ, ಪ್ರಸಿದ್ಧಗುಣಗಳುಳ್ಳ ಮತ್ತು

Garani Srinivasan

ಶಕ್ತರಾದ ಅರಸನೇ ಮುಂತಾದ ದೇವತೆಗಳನ್ನು ಸೃಷ್ಟಿಸಿದರು. ಅವರೆಲ್ಲಾ ನಿನ್ನ ಪುರುಷತ್ವವನ್ನು ನೀರದು ನಿನ್ನನ್ನು ಎಡೆ ಬಿಡದಂತೆ ಕೀರ್ತಿಸುತ್ತಿರುತ್ತಾರೆ. ಹೀಗೆ ನಡೆಯುವ ಅವರ ಸ್ತೋತ್ರಗಳಿಂದ ನಿನ್ನ ನಿತ್ಯಸಿದ್ಧವಾದ ಕೀರ್ತಿಗೆ ಎಲ್ಲಿ ಕಳಂಕ ಬರುವುದೋ! (ಕಳಂಕ ಬರುವುದಿಲ್ಲವೇ?)

ಒಂದು ವಿಷಯವನ್ನು ತಿಳಿಯಲು ಮೇಲಿಂದ ಮೇಲೆ ಹೇಳುತ್ತಲೇ ಬಂದರೆ, ಅದು ಬರಬರುತ್ತ ವ್ಯರ್ಥವಾಗುವುದು ಸಹಜವೇ. ಎಲ್ಲಾ ಅಂಶಗಳಿಗಾ ಪ್ರತಿಯೊಂದು ಫಲವೂ ಬರದೇ ಇರಬಹುದು. ಹೊಸವು ಮೂಡಿ ಬರಬಹುದು. ಕೆಲವು ಮರೆತು ಹೋಗಬಹುದು. ಅರ್ಥ, ಅಭಿಪ್ರಾಯ, ಆಧಾರಗಳಲ್ಲಿ ವ್ಯತ್ಯಾಸಗಳು ಬರಬಹುದು. ನಾನಾ ದೇವತೆಗಳು ಭಗವಂತನ ಗುಣ ಕೀರ್ತಿಗಳನ್ನು ಎಡೆಬಿಡದಂತೆ ಸ್ತುತಿಸುತ್ತಲೇ ಬರುವುದರಿಂದ, ಅವರು ಅವುಗಳಲ್ಲಿ ಕೆಲವನ್ನು ಮರೆತು ಬಿಡಬಹುದು. ಕೆಲವನ್ನು ಉತ್ಪ್ರೇಕ್ಷಿಸಬಹುದು. ಕೆಲವಕ್ಕೆ ಭಿನ್ನಾರ್ಥ ಕಲ್ಪಿಸಬಹುದು. ಕೆಲವು ಹೊಸವನ್ನು ಸೇರಿಸಬಹುದು. ಇವೆಲ್ಲವನ್ನೂ ನಿತ್ಯಪೂರ್ಣನಾದವನಿಗೆ, ಆದರ್ಶ ಧರ್ಮನಿಗೆ, ದೋಷರಹಿತನಿಗೆ ಹೇಗೆ ನಂಬುವುದು — ಇದು ಇಲ್ಲಿನ ಸ್ವಾರಸ್ಯವಾದ ವಿಷಯ.

8. மாசூணாச் சுடருடம்பாய் மலராது குவியாது,
மாசூணா ஞானமாய் முழுதுமாய் முழுதியன்றாய்,
மாசூணா வான் கோலத்து அமரர் கோன் வழிப்பட்டால்,
மாசூணா வுனபாத மலர்ச்சோதி மழுங்காதே?

ಮಾಶೂಣಾಚ್ಚುಡರುಡಮ್ಬಾಯ್ ಮಲರಾದು ಕುವಿಯಾದು,
ಮಾಶೂಣಾ ಞಾನಮಾಯ್ ಮುೞುದುಮಾಯ್ ಮುೞುದಿಯನ್ಱಾಯ್,
ಮಾಶೂಣಾ ವಾನ ಕೋಲತ್ತು ಅಮರರ್ ಕೋನ್ ವೞಿಪ್ಪಟ್ಟಾಲ್,
ಮಾಶೂಣಾ ವುನ ಪಾದ ಮಲರ್ಚ್ಚೋದಿ ಮೞುಙ್ಗಾದೇ?

ಮಾಶುಊಣಾ மாசு உணா = ಕಳಂಕವಿಲ್ಲದ, ಚುಡರ್ சுடர் = ತೇಜೋಮಯವಾದ, ಉಡಮ್ಬಾಯ್ உடம்பாய் = ರೂಪ (ದೇಹ) ವುಳ್ಳವನೇ, ಮಲರಾದು மலராது = ವಿಕಾಸಗೊಳ್ಳದ, ಕುವಿಯಾದು குவியாது = ಸಂಕೋಚಗೊಳ್ಳದ, ಇಂಗನ ಮಾಶುಊಣಾ மாசு உணா = ದೋಷವಿಲ್ಲದ (ಕೊರತೆಯಿಲ್ಲದ), ಞಾನಮ್ ಆಯ್ ஞானம் ஆய் = ಜ್ಞಾನಸ್ವರೂಪಿಯೂ, ಮುೞುದುಮ್ ಆಯ್ முழுதும் ஆய் = ಸಂಪೂರ್ಣನೇ, ಮುೞುದು ಇಯನ್ಱಾಯ್ முழுது இயன்றாய் = ಎಲ್ಲಕ್ಕೂ ಆಶ್ರಯವಾದವನೇ, ಮಾಶುಊಣಾ மாசு உணா = ಕಳಂಕರಹಿತವಾದ, ವಾನ್ வான் = ದಿವ್ಯವಾದ (ಅಪ್ರಾಕೃತವಾದ), ಕೋಲತ್ತು கோலத்து = ಆಭರಣಗಳನ್ನು ಧರಿಸಿ (ಸಿಂಗರಿಸಿಕೊಂಡವರು), ಅಮರರ್

Garani Srinivasan

ಕೋಲನ್ ಅಮರರ್ ಕೋನ್ = ದೇವತೆಗಳ ಒಡೆಯನು, ವಲೋವಿಟ್ಟಾಲ್ ಉಟ್ಟ
ಪಟ್ಟಾಕ್ಕು = ಸ್ತುತಿಸಿದರೆ (ಪೂಜಿಸಿದ್ದರಿಂದ), ಮಾಸು ಊಣಾ ಮಾಸೂಣಾ =
ವಿಶುದ್ಧವಾದ, ಉನ ಪಾದಮ್ ಮಲರ್ ಶೋದಿ ಉಣ ಪಾದಮ್ ಮಲರ್ ಕೋತಿ
= ನಿನ್ನ ಪಾದಕಮಲಗಳ ತೇಜಸ್ಸು, ಮಳುಂಗಾದೇ ಮ(ಳು)ಂಗಾದೇ = ಕುಂದ
ವುದಿಲ್ಲವೇ?

ಕಳಂಕವಿಲ್ಲದ ತೇಜೋಮಯವಾದ ದೇಹವುಳ್ಳವನೇ, ಎರಡನೆಯ ಸಂಕೋ
ಚವೂ ಇಲ್ಲದ ವಿಶುದ್ಧವಾದ ಜ್ಞಾನಸ್ವರೂಪಿಯೂ, ಪರಿಪೂರ್ಣನೇ, ಎಲ್ಲೆಲ್ಲೂ
ಆಶ್ರಯನಾಗಿರುವವನೇ, ಕಳಂಕವಿಲ್ಲದ ದಿವ್ಯವಾದ (ಅಪ್ರಾಕೃತವಾದ) ಸೌಂದರ್ಯ
ವಸ್ತ್ರ(ಆಭರಣಗಳುಳ್ಳ) ದೇವತೆಗಳ ಒಡೆಯನು ಪೂಜಿಸಿದ್ದರಿಂದ, ವಿಶುದ್ಧ (8)
ಪಾದ ನಿನ್ನ ಪಾದಕಮಲಗಳ ತೇಜಸ್ಸು ಕುಂದುವುದಿಲ್ಲವೇ?

ಬ್ರಹ್ಮರುದ್ರಾದಿಗಳೂ ದೇವತೆಗಳೂ ಭಗವಂತನನ್ನು ಎಡೆಬಿಡದಂತೆ ಸ್ತುತಿ
ಸುತ್ತಿದ್ದರೆ, ಅವನ ಕೀರ್ತಿಗೆ ಕಳಂಕ ಬರುವುದಿಲ್ಲವೇ — ಎಂಬುದು ಮೊದಲ
ಪ್ರಶ್ನೆ.

ತೇಜೋಮೂರ್ತಿಯಾದ ಭಗವಂತನನ್ನು ಪೂಜಿಸುವುದರಿಂದ, ಅವನ
ಅದ್ವಿತೀಯ ತೇಜಸ್ಸಿಗೆ ಮಾಸಲು ಶಕ್ಯವಿಲ್ಲವೇ — ಎರಡನೇ ಪ್ರಶ್ನೆ.

"ಅಮರರ್ ಕೋಲನ್ ವಲೋವಿಟ್ಟಾಲ್" — ಭಗವಂತನು ತ್ರಿವಿಕ್ರಮನಾ
ಬೆಳೆದು, ತನ್ನ ಒಂದು ಪಾದವನ್ನು ಎತ್ತರಿಸಿ, ಭೂಮಂಡಲವನ್ನೆಲ್ಲಾ ಆವರಿಸಿ,
ಮತ್ತೊಂದು ಪಾದವನ್ನು ಎತ್ತರಿಸಿ, ಮೇಲಣ ಎಲ್ಲಾ ಲೋಕಗಳನ್ನೂ ಅಳೆದು
ಕೊಂಡಾಗ, ಚತುರ್ಮುಖ ಬ್ರಹ್ಮನು ಭಗವಂತನ ಪಾದವನ್ನು ತನ್ನ ಕಮಂಡ
ಲು ಜಲದಿಂದ ತೊಳೆದು ಪೂಜಿಸಿದ್ದ.

ಆಳ್ವಾರರು ಹೇಳುತ್ತಾರೆ: ಭಗವಂತ, ನೀನು ಅಪ್ರತಿಮ ತೇಜೋಮಯ
ನ. ನಿನ್ನ ತೇಜಃಪೂರ್ಣವಾದ ರೂಪಕ್ಕೆ ಯಾವ ಕುಂದು ಕೊರತೆಯೂ ಇಲ್ಲ.
ನಿನ್ನದು ನಿತ್ಯಯೌವನ ಸೌಂದರ್ಯ. ಅದಕ್ಕೆ ಬೆಳವಣಿಗೆ ಇಲ್ಲ. ಮುಪ್ಪು ಇಲ್ಲ.
ಅದು ಕಂದುವುದೂ ಇಲ್ಲ, ಕುಂದುವುದೂ ಇಲ್ಲ. ನೀನು ಪರಿಪೂರ್ಣನು. ಎಲ್ಲ
ವಸ್ತುಗಳ ಒಳಗೂ ಹೊರಗೂ ಆವರಿಸಿಕೊಂಡಿರುವೆ. ನೀನೇ ಎಲ್ಲಾ ವಸ್ತುಗಳಿಗೂ
ಆಶ್ರಯನು. ಇಂತಹ ವಿಲಕ್ಷಣವಾದ, ವಿಶುದ್ಧವಾದ, ತೇಜೋಮೂರ್ತಿಯಾದ
ನಿನ್ನ ಪಾದಕಮಲಗಳನ್ನು (ಅಂದು) ಚತುರ್ಮುಖನು ತೊಳೆದು ಪೂಜಿಸಿ
ದನಷ್ಟೇ. ಅದರಿಂದ, ಸ್ವಯಂ ವಿಶುದ್ಧವಾದ ಅವುಗಳ ದಿವ್ಯ ತೇಜಸ್ಸು
ಮಾಸುವುದಿಲ್ಲವೇ?

ಹೇಳಿದ್ದನ್ನೇ ಮತ್ತೆ ಮತ್ತೆ ಹೇಳುತ್ತಾ ಹೊಗಳುತ್ತಿದ್ದರೆ, ಭಗವಂತನ
ಕೀರ್ತಿಗೆ ಮಾಸಲು ಬರುವುದಿಲ್ಲವೇ? ವಿಲಕ್ಷಣವಾದ ತೇಜೋಮಯ

ರೂಪಿಯಾದ ಅವನನ್ನು ಪೂಜಿಸುವುದರಿಂದ ಅವನ ಅದ್ಭುತಲೀಲೆಯು ಕೇಳಿಸುವುದಿ
ಮಾಡಲು ಶಕ್ಯವಿಲ್ಲವೇ? ಇರುವುದು ಏತಕ್ಕೆ? ಯಾರನ್ನು ಕೇಳುವುದು?
ಅದಕ್ಕಾಗಿಯೇ ಭಗವಂತನಲ್ಲಿಯೇ ಆಳ್ವಾರರ ಗಮನ!

9. மழுங்காத வைந்நுதிய சக்கர நல் வலத்தையாய்,
தொழுங்காதல் களிறளிப்பான் புள்ளூர்ந்து தோன்றினையே,
மழுங்காத ஞானமே படையாக மலருலகில்,
தொழும்பாயார்க்களித்தால் உன் சுடர்ச்சோதி மறையாதே?

ಮಳುಙ್ಗಾದ ವೈನ್ನುದಿಯ ಶಕ್ಕರ ನಲ್ ವಲತ್ತೈಯಾಯ್,
ತೊಳುಙ್ಗಾದಲ್ ಕಳಿಱಳಿಪ್ಪಾನ್ ಪುಳ್ಳೂರ್ನ್ದು ತೋನ್ಱಿನೈಯೇ,
ಮಳುಙ್ಗಾದ ಜ್ಞಾನಮೇ ಪಡೈಯಾಹ ಮಲರುಲಹಿಲ್,
ತೊಳುಮ್ಬಾಯಾರ್ಕ್ಕಳಿತ್ತಾಲ್ ಉನ್ ಶುಡರ್ ಚ್ಚೋದಿ ಮಱೈಯಾದೇ?

ಮಳುಙ್ಗಾದ மழுங்காத = ಹರಿತವನ್ನು ಕಳೆದುಕೊಳ್ಳದ, ವೈನ್ನುದಿಯ வைந்நுதிய = ಬಾಯನ್ನುಳ್ಳ, ಶಕ್ಕರ சக்கர = ಚಕ್ರವೆಂಬ, ನಲ್ நல் = ಉತ್ತಮವಾದ, ವಲತ್ತೈ ಆಯ್ வலத்தை ஆய் = ಬಲಿಷ್ಠ ಆಯುಧವನ್ನು ಹಿಡಿದು, ಕಾದಲ್ காதல் = ಆಸೆಯನ್ನು ತೊಳುಮ್ தொழும் = ಪೂಜಿಸಬೇಕೆಂಬ, ಕಾದಲ್ அளிப்ப, ಕಳಿಱು களிறு = ಆನೆಯನ್ನು (ಗಜೇಂದ್ರನನ್ನು), ಅಳಿಪ್ಪಾನ್ = ರಕ್ಷಿಸುವುದಕ್ಕಾಗಿ, ಪುಳ್ ಊರ್ನ್ದು புள் ஊர்ந்து = ಪಕ್ಷಿಯನ್ನೇರಿ ತೋನ್ಱಿನೈಯೇ தோன்றினையே = ಕಾಣಿಸಿಕೊಂಡವನೇ, ಮಳುಙ್ಗಾದ ಜ್ಞಾನಮೇ ஞானமே = ಜ್ಞಾನವನ್ನೇ, மழுங்காத = ಬದಲಿಸಲ್ಪಡದ, ಪಡೈ ಆಹ படை ஆக = ಆಯುಧವನ್ನಾಗಿ, ಮಲರ್ ಉಲಹಿಲ್ மலர் உலகில் = ವಿಸ್ತಾರವಾದ ಲೋಕದಲ್ಲಿ, ತೊಳುಮ್ಬು ಆಯಾರ್ಕ್ಕು தொழும்பு ஆயார்க்கு = ಸೇವೆಯನ್ನು ಮಾಡಬಯಸುವವರಿಗೆ (ಭಕ್ತರಿಗೆ), ಅಳಿತ್ತಾಲ್ அளித்தால் = ಕೃಪೆಮಾಡಿದರೆ (ಒದಗಿಬಂದರೆ), ಉನ್ உன் = ನಿನ್ನ, ಶುಡರ್ ಶೋದಿ சுடர் சோதி = ಬೆಳಗುವ ತೇಜಸ್ಸು, ಮಱೈಯಾದೇ மறையாதே = ಕುಂದಿತಗೊಳ್ಳುವುದಿಲ್ಲವೇ?

ಹರಿತವನ್ನು ಕಳೆದುಕೊಳ್ಳದ ಬಾಯನ್ನುಳ್ಳ ಚಕ್ರವೆಂಬ ಉತ್ತಮವಾದ ಬಲಿಷ್ಠ ಆಯುಧವನ್ನು ಹಿಡಿದು, ಪೂಜಿಸಬೇಕೆಂಬ ಆಸೆಯನ್ನುಳ್ಳ ಆನೆಯನ್ನು ರಕ್ಷಿಸುವುದಕ್ಕಾಗಿ, ಪಕ್ಷಿಯನ್ನೇರಿ ಕಾಣಿಸಿಕೊಂಡವನೇ, ಬದಲ

ಚಂದವಾದ ಜ್ಞಾನವನ್ನೇ ಆಯುಧವಾಗುಳ್ಳ ವಿಸ್ತಾರವಾದ ಲೋಕದಲ್ಲಿ ನೆಲೆಗೊಳ್ಳಬಯಸುವವರಿಗೆ ನೀನು ಬಿಡದೆ ಬಂದರೆ, ನಿನ್ನ ಬೆಳಗುವ ತೇಜಸ್ಸಿಗೆ ಕುಂದಕ ಬರಬಾರದೇ? (9)

ಎಡೆಬಿಡದೆ ಮಾಡುವ ಸ್ತುತಿಯಿಂದಲೋ, ಪೂಜೆಯಿಂದಲೋ ಭಗವಂತನ ದಿವ್ಯತೇಜಸ್ಸಿಗೆ ಕಳಂಕವುಂಟಾಗುವುದಿಲ್ಲವೇ? - ಎಂಬುದು ಹಿಂದಿನ ಎರಡು ಪಾಶುರಗಳಲ್ಲಿ ಮೂಡಿ ಬಂದ ಪ್ರಶ್ನೆ.

ಜ್ಞಾನವನ್ನೇ ಮುಖ್ಯ ಸಾಧನವಾಗಿ ಬಳಸುವ ಈ ವಿಸ್ತಾರವಾದ ಲೋಕದಲ್ಲಿ ನಿನ್ನ ಸೇವೆ ಮಾಡಬಯಸುವ ಭಕ್ತರಿಗೆ ನೀನು ಬಿಡದೆ ಬರುವುದರಿಂದ, ನಿನ್ನ ದಿವ್ಯ ತೇಜಸ್ಸು ಮರೆಯಾಗುವುದಿಲ್ಲವೇ? - ಎಂಬುದು ಈ ಪಾಶುರದ ಪ್ರಶ್ನೆ.

'ಸೋಲೈಯಿ ಜ್ಞಾಲಲ್ ಕಳ ಸಾಳಿಪ್ಪಾನ್…' — ಇದು ಗಜೇಂದ್ರ ಮೋಕ್ಷದ ವಿಷಯ. ಆಳವಾದ ಮಡುವಿನ ನಡುವೆ ಅರಳಿ ನಿಂತಿದ್ದ ತಾವರೆಯ ಹೂವನ್ನು ಕಿತ್ತು ಭಗವಂತನಿಗೆ ಅರ್ಪಿಸಿ ಎರಗಬೇಕೆಂದು ಆಶೆಯಿಂದ, ಸಲಗವೊಂದು ನೀರಿನಲ್ಲಿಳಿಯಿತು. ಆ ಹೊತ್ತಿನಲ್ಲೇ ಮಡುವಿನಲ್ಲಿ ಹೊಂಚುತ್ತಿದ್ದ ಕ್ರೂರವಾದ ಮೊಸಳೆ ಅದರ ಕಾಲನ್ನು ಬಲವಾಗಿ ಹಿಡಿಯಿತು. ಅದು ಬಹಳ ಬಲಿಷ್ಠ ಸಲಗವೇ! ಮೊಸಳೆಯಿಂದ ಬಿಡಿಸಿಕೊಳ್ಳಲು ಸರ್ವಪ್ರಯತ್ನ ಮಾಡಿತು. ಎಲ್ಲವೂ ವಿಫಲವಾದ ಬಳಿಕ ಅದು ತನ್ನ ಸೊಂಡಿಲನ್ನು ಮೇಲಕ್ಕೆತ್ತಿ "ಆದಿಮೂಲಾ" ಎಂದು ಅಬ್ಬರಿಸಿತು. ಹೀಗೆ ಭಗವಂತನಿಗೆ ಮೊರೆಯಿಟ್ಟಿತು. ಆ ಕೂಡಲೇ ಭಗವಂತನು ಗರುಡಾರೂಢನಾಗಿ ಅಲ್ಲಿಗೆ ಧಾವಿಸಿ ಬಂದು, ತನ್ನ ಚಕ್ರಾಯುಧದಿಂದ ಮೊಸಳೆಯನ್ನು ಕೊಂದನು, ಸಲಗವನ್ನು ಸಂಕಟದಿಂದ ಪಾರುಮಾಡಿದನು.

ಆಳ್ವಾರರು ಹೇಳುತ್ತಾರೆ: ಭಗವಂತ, ನಿನ್ನನ್ನು ಪೂಜಿಸಬೇಕೆಂದು ಆಶಿಸಿದ ಸಲಗಕ್ಕೆ ಸಂಕಟ ಬಂದಾಗ, ನೀನು ಗರುಡನನ್ನೇರಿ ಬಂದು ಅದರ ಸಂಕಟವನ್ನು ನೀಗಿಸಿದೆ. ನೀನು ಇಷ್ಟು ಸುಲಭನೆಂದು ತಿಳಿಯದ ಈ ಲೋಕದ ಜನ ನಿನ್ನನ್ನು ಜ್ಞಾನಮಾರ್ಗದಿಂದಲೇ ಪಡೆಯಬೇಕೆಂದು ಕಷ್ಟಪಡುತ್ತಾರೆ. ಜ್ಞಾನಿಗೆ ಸುಲಭನಾಗಿ ಸಿಕ್ಕದ ನೀನು ನಿನ್ನ ದಾಸ್ಯದ ಆಶೆಯಿಂದಿರುವ ಭಕ್ತರಿಗೆ ಸುಲಭನಾಗಿ ಬಿಡದೆ ಬರುವುದರಿಂದ, ನಿನ್ನ ಬೆಳಗುವ ತೇಜಸ್ಸಿಗೆ ಕುಂದಕ ಬರುವುದಿಲ್ಲವೇ? ನಿನ್ನ ಬೆಳಗುವ ತೇಜಸ್ಸು ಹಾಗೆ ಮರೆಯಾಗುವುದಿಲ್ಲವೇ?

ಭಕ್ತಜನರ ಸಂಕಟವನ್ನು ನೀಗಿಸುವುದಕ್ಕೆ ಭಗವಂತನು ಅತಿ ಸುಲಭನಾಗಿ ಬಿಡದೆ ಬಂದರೆ ಅವನ ದಿವ್ಯ ತೇಜಸ್ಸಿಗೆ ತೊಂದರೆಯಿಲ್ಲವೇ?

ಗಜೇಂದ್ರನ ಸಂಕಟವನ್ನು ಪರಿಹರಿಸುವುದಕ್ಕೆ ಭಗವಂತನು ದಿವ್ಯಾಯುಧವನ್ನು ಧರಿಸಿ ಅದರ ಬಳಿಗೆ ಧಾವಿಸಿಬಂದನು. ಹಾಗೆಯೇ ಭೂಲೋಕದಲ್ಲಿ ಭಕ್ತರಿಗೆ ಬಂದ ಸಂಕಟಗಳನ್ನು ನಿವಾರಿಸುವುದಕ್ಕಾಗಿ ಭಗವಂತನು, ಆಯಾ ಸಂದರ್ಭಕ್ಕೆ ಅನುಸಾರವಾಗಿ ನಾನಾ ಅವತಾರಗಳನ್ನೆತ್ತಿದನು. ಪ್ರತಿಯೊಂದು ಅವತಾರದಲ್ಲಿಯೂ ಸೌಶೀಲ್ಯ, ಸೌಲಭ್ಯ, ಮಾರ್ದವ, ಬಲ, ವೀರ್ಯ, ಕಾರುಣ್ಯ, ಮುಂತಾದ ತನ್ನ ಕಲ್ಯಾಣಗುಣಗಳನ್ನು ವ್ಯಕ್ತಪಡಿಸಿದನು. ಸಾಧುಗಳನ್ನು, ಭಕ್ತರನ್ನು, ಕಾಪಾಡುವುದಕ್ಕಾಗಿ, ದುಷ್ಟರನ್ನು ನಿಗ್ರಹಿಸುವುದಕ್ಕಾಗಿ, ಧರ್ಮಸಂರಕ್ಷಣೆಗಾಗಿ ಭಗವಂತನ ಈ ಅವತಾರಗಳು. ಮನುಷ್ಯರಲ್ಲಿ ಮನುಷ್ಯನಾಗಿ, ಅವರಂತೆಯೇ ಆಚಾರ ವಿಚಾರಗಳಲ್ಲಿ ತೊಡಗಿ, ತನ್ನ ಮಾನುಷ ಕರ್ತವ್ಯಗಳನ್ನು ನಡೆಸುತ್ತ, ಅವತಾರ ಸ್ವಭಾವವನ್ನು ನಡೆಸಿ ಮುಗಿಸಿಕೊಂಡನಷ್ಟೆ, ಆದಲ್ಲಿ ಸ್ವಾಮಿಯು ತನ್ನ ಅಪ್ರತಿಮ ಶೀಲಗುಣಗಳನ್ನು ಮರೆಮಾಡಿಕೊಂಡದ್ದು ಇದೆ. ವಾಸ್ತವವನ್ನು ಮತ್ತು ಸುಂದರ ನಾನೇನು ಬಣ್ಣಿಸಲಾರೆ!

10. மறையாய நால்வேதத்துள் நின்ற மலர்ச்சுடரே,
முறையாலிவ்வுலகெல்லாம் படைத்திடந்துண்டுமிழ்ந்தாய்,
பிறையேறு சடையானும் நான்முகனுமிந்திரனும்,
இறையாதலறிந்தேத்த வீற்றிருத்தலிது வியப்பே.

ಮಱೈಯಾಯ ನಾಲ್ ವೇದತ್ತುಳ್ ನಿನ್ಱ ಮಲರ್ ಚ್ಚುಡರೇ,
ಮುಱೈಯಾಲ್ ಇವ್ವುಲಗೆಲ್ಲಾಮ್ ಪಡೈತ್ತಿಡನ್ದುಣ್ಡುಮಿೞ್ನ್ದಾಯ್,
ಪಿಱೈಯೇಱು ಶಡೈಯಾನುಮ್ ನಾನ್ಮುಗನುಮಿನ್ದಿರನುಮ್,
ಇಱೈಯಾದಲಱಿನ್ದೇತ್ತ ವೀಱ್ಱಿರುತ್ತಲಿದು ವಿಯಪ್ಪೇ.

ಮಱೈಯಾಯ (ರಹಸ್ಯ) மறையாய = ಗುಹ್ಯವಿಷಯಗಳನ್ನುಳ್ಳ, ನಾಲ್ ವೇದತ್ತುಳ್ நால் வேதத்துள் = ನಾಲ್ಕು ವೇದಗಳಲ್ಲಿ, ನಿನ್ಱ நின்ற = ಇರುವ, ಮಲರ್ சுடரே = ವ್ಯಾಪಕವಾದ ಜ್ಯೋತಿಸ್ವರೂಪಿಯೇ, ಮುಱೈಯಾಲ್ முறையால் = ಕ್ರಮವಾಗಿ, ಇ ಉಲಗು ಎಲ್ಲಾಮ್ உலகெல்லாம் = ಈ ಲೋಕಗಳನ್ನೆಲ್ಲಾ, ಪಡೈತ್ತು படைத்து = ಸೃಷ್ಟಿಸಿ, ಇಡನ್ದು இடந்து = ಗಡ್ಡೆ ಮೇಲಕ್ಕೆತ್ತಿ, ಉಣ್ಡು உண்டு = ನುಂಗಿ, ಉಮಿೞನ್ದು உமிழ்ந்து = ಹೊರಹಾಕಿ, ಆಳ್ನ್ದಾಯ್ ஆளந்தாய் = ಆಳುತ್ತಿರುವವನೇ, ಪಿಱೈ ಏಱುಮ್ ಶಡೈಯಾನುಮ್ பிறை ஏறும் சடையானும்.

ಬಾಲಚಂದ್ರನನ್ನು ಜಡೆಯಲ್ಲಿ ಇಟ್ಟುಕೊಂಡವನೂ, ನಾಲ್ಮುಖನೂ ಮೂ [illegible] ಹ್ಯಾಂ = ಚತುರ್ಮುಖನೂ, ಇದಿರನು ಮೂ [illegible] ಹ್ಯಾಂ = ದೇವೇಂದ್ರನೂ, ಇಟ್ಸ್ ಆದರ್ [illegible] ಆಕ್ಟ್ಸ್ = (ದೇವ) ಸರ್ವೇಶ್ವರನಾಗಿರುವುದನ್ನು, ಅದನ್ನು ಅಗ್ರಿಗ್ರಾಹ್ = ಅರಿತುಕೊಂಡು, ಮತ್ತ [illegible] = ಸ್ತುತಿಸುವುದರಲ್ಲಿ, ಮೇಲ್ತರ [illegible] ಇದು, ವಿಯಿಸ್ತೇ ತ್ರಿ ಇದು [illegible] = [illegible] ಇದು, ವಿಯಿಸ್ತೇ [illegible] = ಆಶ್ಚರ್ಯಕರವೇ.

ರಹಸ್ಯ ವಿಷಯಗಳನ್ನುಳ್ಳ ನಾಲ್ಕು ವೇದಗಳಲ್ಲಿರುವ ವ್ಯಾಪಕವಾದ ಜ್ಞಾನ [illegible] ಸೃಷ್ಟಿಸಿ, ಗತಿದು ಉದ್ಧರಿಸಿ, ಸ್ಥಾಪಿಸಿ, ಕ್ರಮವಾಗಿ ಈ ಲೋಕಗಳನ್ನೆಲ್ಲಾ ತಿಳಿಸಿ, ಮತ್ತೆ ಹೊರಡಾಕಿ, ಅಳಿದು ಕೊಂಡವನೇ, ಬಾಲಚಂದ್ರನನ್ನು ಜಡೆಯಲ್ಲಿಟ್ಟುಕೊಂಡವನೂ, ನಾಲ್ಮುಖನೂ, ದೇವೇಂದ್ರನೂ ನೀನು ಸರ್ವೇಶ್ವರನಾಗಿರುವುದನ್ನು ಅರಿತುಕೊಂಡು (ನಿನ್ನನ್ನು) ಸ್ತುತಿಸಲು ಎಂದು ಸದ್ದುಗೆಯ್ಯಲು ಸಾಧ್ಯವೇ [illegible] ತಿರುವ ಇದು ಆಶ್ಚರ್ಯಕರವೇ! (10)

"ಮುಟ್ಟೈಯಾಲ್ - . . . . . . ಅಳನ್ದಾಯ್" - ನನ್ನ ಸಂಕಲ್ಪಮಾತ್ರದಿಂದ ಯಾವ ಯಾವ ಕಾಲಕ್ಕೆ ಏನೇನು ಬೇಕೋ, ನೀನು ಎಲ್ಲ ಕೆಲಸಗಳನ್ನು ನಡೆಸಿಕೊಳ್ಳುವವನು. ಅದರಂತೆ ಆಯಾ ಕೆಲಸಗಳನ್ನು ನಡೆಯಬೇಕೋ ಅದನ್ನು ನೀನು ಬಲ್ಲವನು. ಅದರಂತೆ ಸೃಷ್ಟಿ ಮುಂತಾದ ಕಾರ್ಯ, 'ಇದನ್ದು' - ಭೂ ನೆಲವನ್ನು ನಡೆಸುತ್ತೆ. 'ಪಿನ್ದ್ರೆಡುತ್ತು' - ಎಂದರೆ, ಸೃಷ್ಟಿಯ ಆದಿಯಲ್ಲಿ ಕೊಂಡದ್ದು ಕಾಲದಲ್ಲಿ, ಭೂಮಿಯನ್ನು ಹಿರಣ್ಯಾಕ್ಷನು ಪ್ರಳಯ ಜಲದಲ್ಲಿ ಅಡಗಿಸಿಟ್ಟುಕೊಂಡದ್ದು ಕಾಲದಲ್ಲಿ, ನೀನು ಮಹಾವರಾಹನಾಗಿ ಅವತರಿಸಿ, ಹಿರಣ್ಯಾಕ್ಷನನ್ನು ಕೊಂದು, ತನ್ನ ಕೋರೆಹಲ್ಲಿನಿಂದ ಭೂಮಿಯನ್ನು ಗಿಡದು ಮೇಲಕ್ಕೆತ್ತಿ, ಅದರ ಸ್ಥಾನದಲ್ಲಿರಿಸಿದ ವಿಷಯ. 'ಉಣ್ಣು' - ಎಂಬುದು, ಪ್ರಳಯಕಾಲ ಬಂದಾಗ ನೀನು ಸೃಷ್ಟಿಸಿದ ಎಲ್ಲಾ ಲೋಕಗಳನ್ನು ತಿಬಳಿಸಿ, ನಿನ್ನ ಹೊಟ್ಟೆಯಲ್ಲಿ ಸುಭದ್ರವಾಗಿ ರಕ್ಷಿಸಿದ ವಿಷಯ. 'ಉಮಿಳನ್ದು' - ಎಂಬುದು, ಮತ್ತೆ ಆ ಕಾಲದಲ್ಲಿ (ಮರು ಸೃಷ್ಟಿಯ ಕಾಲದಲ್ಲಿ) ಅದನ್ನೆಲ್ಲಾ ಹಾಗೆಯೇ ಹೊರಹಾಕಿದ ವಿಷಯ. 'ಅಳನ್ದಾಯ್' - ಎಂಬ ಬಲಿಚಕ್ರವರ್ತಿ ದು ಭಗವಂತನ ವಾಮನ-ತ್ರಿವಿಕ್ರಮಾವತಾರಗಳನ್ನು ತಿಳಿಸುತ್ತದೆ. ಬಲಿಚಕ್ರವರ್ತಿ ದು ಭಗವಂತನ ವಾಮನ-ತ್ರಿವಿಕ್ರಮಾವತಾರಗಳನ್ನು ತಿಳಿಸುತ್ತದೆ. ವಾಮನ ವಟುವಿಯನ್ನು ಅನುಗ್ರಹಿಸುವುದಕ್ಕಾಗಿ, ಅವನ ಯಾಗಶಾಲೆಗೆ ವಾಮನ ವಟುವಾಗಿ ಬಂದು, ಮೂರು ಹೆಜ್ಜೆಗಳ ನೆಲವನ್ನು ಯಾಚಿಸಿ, ಪಡೆದು ಬೆಳೆದು ತ್ರಿವಿಕ್ರಮನಾಗಿ ಬೆಳೆದು, ಒಂದೇ ಹೆಜ್ಜೆಯನ್ನು ವಿಸ್ತರಿಸಿ, ಭೂಮಂಡಲವನ್ನೆಲ್ಲಾ ವ್ಯಾಪಿಸಿ, ಅಳೆದು, ಮತ್ತೊಂದು ಹೆಜ್ಜೆಯಿಂದ ಮೇಲಣ ಎಲ್ಲಾ ಲೋಕಗಳನ್ನು ವ್ಯಾಪಿಸಿ ಅಳೆದು, ಮೂರನೆಯ ಹೆಜ್ಜೆಯನ್ನು ಬಲಿಚಕ್ರವರ್ತಿಯ ತಲೆಯ ಮೇಲಿರಿಸಿ, ಅವನನ್ನು ಹರಸಿದ ವಿಷಯ.

'ಪಿಱೈ ಏಱು ಶಡೈಯಾನ್' - ಎಂದರೆ ಶಿವನು. ಬಾಲಚಂದ್ರನನ್ನು ತನ್ನ ಜಡೆಯಲ್ಲಿ ಧರಿಸಿರುವವನು

Garani Srinivasan

ಆಳ್ವಾರರು ಹೇಳುತ್ತಾರೆ: ಭಗವಂತ, ನಾಲ್ಕು ವೇದಗಳಲ್ಲೂ ಅಡಗಿ-
ರುವ ವ್ಯಾಪಕನಾದ ದಿವ್ಯಜ್ಞಾನ ಸ್ವರೂಪನೇನು. ಕ್ರಮವಂತರು ಕಾಲಕಾಲಕ್ಕೆ
ಈ ಲೋಕಗಳನ್ನೆಲ್ಲಾ ಸೃಷ್ಟಿಸಿದವನೂ, ಉದ್ಧರಿಸಿದವನೂ, ಲಯಗೊಳಿಸಿ-
ದವನೂ, ಎಲ್ಲವನ್ನೂ ನಿನ್ನ ಉದರದಲ್ಲಿ ಉಳಿಸಿಕೊಂಡು ರಕ್ಷಿಸಿದವನೂ,
ಮತ್ತೆ ಸಮಯ ಬಂದಾಗ ಅವನ್ನೆಲ್ಲಾ ಹೊರಗೆ ತರುವವನೂ, ನೀನೇ. ಈ ಲೋಕ-
ಗಳನ್ನೆಲ್ಲಾ ಎರಡೇ ಹೆಜ್ಜೆಯಿಂದ ಅಳೆದುಬಿಟ್ಟವನು ನೀನು. ಮಹಾಮಹಿಮ-
ನಾದ ನೀನು ಸಣ್ಣನೆಯ ಸ್ತೋತ್ರ ಕುಳಿತರು ಪ್ರದೇಶಕ್ಕೆ? ನಾಲ್ಕುಮುಖನೂ, ಶಿವನೂ,
ದೇವೇಂದ್ರನೂ ನಿನ್ನನ್ನು ಸರ್ವಲೋಕ ಮಹೇಶ್ವರನೆಂದು ಅಂಗೀಕರಿಸುವುದು
ಮತ್ತು ನಿನ್ನನ್ನು ಸ್ತುತಿಸಲು ಎಂತಲೇ? ಇದೇನಾಶ್ಚರ್ಯ! ಇದು ಹಾಸ್ಯ-
ದವಲ್ಲವೇ?

11. வியப்பாய வியப்பில்லா மெய்ஞ்ஞான வேதியனை,
சயப்புகழார் பலர்வாழும் தடங்குருகூர்ச் சடகோபன்,
துயக்கின்றித் தொழுதுரைத்த ஆயிரத்துள் இப்பத்தும்,
உயக்கொண்டு பிறப்பறுக்கும் ஒலிமுந்நீர் ஞாலத்தே.

ವಿಯಪ್ಪಾಯ ವಿಯಪ್ಪಿಲ್ಲಾ ಮೆಯ್ ಜ್ಞಾನ ವೇದಿಯನ್ಯೆ,
ಶಯಪ್ಪುಗಳಾರ್ ಪಲರ್ ವಾಳುಮ್ ತಡಙ್ಗುರುಹೂರ್ಚ್ಚಡಗೋಪನ್,
ತುಯಕ್ಕಿನ್ರಿತ್ತೊಳುದುರೈತ್ತ ಆಯಿರತ್ತುಳ್ ಇಪ್ಪತ್ತುಮ್,
ಉಯಕ್ಕೊಂಡು ಪಿರಪ್ಪರುಕ್ಕುಮ್ ಒಲಿಮುನ್ನೀರ್ ಞಾಲತ್ತೇ.

ವಿಯಪ್ಪು ಆಯ வியப்பு ஆய = ವಿಸ್ಮಯಕರನಾದ, ವಿಯಪ್ಪು ಇಲ್ಲಾ
வியப்பு இல்லா = ಅಳತೆಗೆ ಮೀರಿದ, ಮೆಯ್ ಜ್ಞಾನಮ್ ಮெய்
ஞானம் = ಸತ್ಯಸ್ವರೂಪನಾದ ಜ್ಞಾನದ, ವೇದಿಯನ್ಯೆ வேதியனை = ವೇ-
ದಗಳಿಂದ ಪ್ರತಿಪಾದ್ಯನಾದವನನ್ನು, ಶಯಮ್ ಜயம் = ಜಯವನ್ನು/ ಪುಗಳಾರ್
புகழார் = ಕೀರ್ತಿಸುವವರು, ಪಲರ್ ಪலர் = ಹಲವರು, ವಾಳುಮ್ வாழும்
= ಬಾಳುವ, ತಡಮ್ ಕುರುಹೂರ್ தடம் குருகூர் = ವಿಶಾಲವಾದ ತಿರುಕುರು
ಹೂರಿನ, ಶಡಗೋಪನ್ சடகோபன் = ಶಠಕೋಪನು, ತುಯಕ್ಕು ಇನ್
ರಿ துயக்கு இன்றி = ದೋಷವಿಲ್ಲದ, ತೊಳುದು தொழுது = ಸೇವಿಸಿಕೊಂಡು,
ಪೂಜಿಸಿ, ಉರೈತ್ತ உரைத்த = ಹೇಳಿದ, ಆಯಿರತ್ತು ஆயிரத்து =
ಒಂದು ಸಾವಿರ ಪಾಶುರಗಳಲ್ಲಿ, ಇ ಪತ್ತುಮ್ இபத்தும் = ಈ ಹತ್ತು ಪಾಶುರಗಳು
ಉಯಕ್ಕೊಂಡು உய்கொண்டு = ಉಜ್ಜೀವನಗೊಳಿಸಿ, ಪಿರಪ್ಪು பிறப்பு
= ಹುಟ್ಟುವಿಕೆಯನ್ನು, ಅರುಕ್ಕುಮ್ அறுக்கும் = ಕತ್ತರಿಸುವಂತಹದ್ದು
ಒಲಿ ಮುನ್ನೀರ್ ஒலிமுந்நீர் = ಅಬ್ಬರಿಸುವ ಸಮುದ್ರ, ಞಾಲತ್ತೇ ஞாலத்தே =
ಸಮುದ್ರದಿಂದ ಸುತ್ತುವರಿದ ಲೋಕದಲ್ಲಿಯೇ.

ವಿಸ್ಮಯಕರವಾದ (ಆಶ್ಚರ್ಯಕರವಾದ) ಅಲ್ಲದೆ ಎಂದಿನ ಸತ್ಯಪೂರ್ಣವಾದ ಜ್ಞಾನದ ವೇದಗಳಿಂದ ಪ್ರತಿಪಾದ್ಯವಾದವನ್ನು, ಸ್ವಪ್ರೇರಣೆಯಿಂದ (ಗೀತಾ) ಕಲಿತು ನುಡಿವವರು ಹಲವಾರು ಜನ ಬಾಳುವ ಪ್ರಸಿದ್ಧವಾದ ತಿರುಪ್ಪೂರು ಹೂರಾನ ಕರನೇಂದ್ರನ ದೇವೆಷ್ಟರುಹಿತವಾದ ಪೂಜಿಸುವವರ ಹೇಳಿದ ಹಿಂದುಸ್ತಾನಿ ಪ್ರಕಾರಗಳಲ್ಲಿ ಈ ~~[illegible]~~ ಕಾವ್ಯ ಪ್ರಕಾರಗಳು ಅಭ್ಯಾಸವ ಕಲನ ಈ ಭೂಮಂಡಲದಲ್ಲಿಯೇ ಪ್ರಜ್ಞಾವಿಶೇಷವನ್ನು ಕರ್ತೃಗಳು ದೊರಕಿತ್ತು. (11)

ಈ ಕಾವ್ಯ ಪ್ರಕಾರಗಳಿಗೆ ಇದು ವಿಚಿತ್ರಯಾ ಪ್ರಕಾರ. ~~ಇದು~~. ಇತರ ರಚನೆಗಳಿಗೆ ಬರುವ ಹಾಗೆ ಇದರಲ್ಲಿರದೆ, ಕೇವಲ ಕಲ್ಪನೆ ಮಾತುಗಳಿಂದ ಸತ್ಯವಾದ ಅನುಭವಯಲ್ಲಿ 'ಫಲಶ್ರುತಿ' ಎಂಬುದಿದೆ. ಎಂದರೆ, ಈ ಕಾವ್ಯ ಪ್ರಕಾರಗಳನ್ನು ಅಧ್ಯಯನ ಮಾಡುವುದರಿಂದ ಬರುವ ಫಲವೇನು ಎಂದು ಹೇಳುವುದೇ ಈ ಪ್ರಕಾರದ ಮುಖ್ಯವಿಷಯ. ಯಾರು ಈ ಕಾವ್ಯ ಪ್ರಕಾರಗಳನ್ನು ರಚಿಸಿದ್ದಾರೆ ಎಂಬುದನ್ನು ಮಾತ್ರ ಹೇಳಬಾರದೆ. ಅದೂ ಯಾದೃಚ್ಛಿಕವಾಗಿಯೇ! ತಿರುಪ್ಪೂರು ಎಂಬುದು ಭಗವಂತನನ್ನು ಸ್ವಪ್ರೇರಣೆಯಿಂದ ಕಲಿತ ನುಡಿ ಕಲಿಯುವ ಭಕ್ತಜನರಿಗೆ ಆಶ್ರಯಸ್ಥಾನ. ಅವರ ನಡುವೆ ಕರನೇಂದ್ರನಾ ಒಬ್ಬ. ಸತ್ಯಪೂರ್ಣವಾದ ವೇದಗಳಿಂದ ಪ್ರತಿಪಾದ್ಯವಾದ ಭಗವಂತನನ್ನು ಯಾವ ಬಗೆ ಯ ಆಡಂಬರದ ಮಾತುಗಳಿಗೆ ಅವಕಾಶವಿಲ್ಲದ, ದೇವೆಷ್ಟರುಹಿತವಾದ ಮಾತುಗಳಿಂದ ಅವರು ಈ ಪ್ರಕಾರಗಳನ್ನು ರಚಿಸಿ, ಸ್ವಾಮಿಯನ್ನು ಸ್ತುತಿಸಿದ್ದಾರೆ. ಅವರ ರಚನೆಯಾದ ಹಿಂದುಸ್ತಾನಿ ಪ್ರಕಾರಗಳಲ್ಲಿ ಈ ಕಾವ್ಯ ಪ್ರಕಾರಗಳನ್ನು ಓದಿ ಅರಿತುಕೊಂಡು ಅನುಭವಿಸುವವರು ಕರ್ಮಭೂಮಿಯಲ್ಲಿ ರಗಳನ್ನು ಒದ್ದು ಅರಿತುಕೊಂಡು ~~[illegible]~~ 'ಪ್ರಜ್ಞಾವಂತ' ಎಂಬ ನಾಮವಾದ ಈ ಲೋಕದಲ್ಲಿಯೇ ಲೀಯನ್ನು ಕಳೆದು ದಾಟಿ, ಉಜ್ಜೀವನಗೊಳ್ಳುತ್ತಾರೆ. ಇದೇ ಇದರ ಫಲಶ್ರುತಿ!

—— • ——

ತಿರುವಾಯ್ಮೊಳಿ - ಮೂರನೆಯ ದಶ - ಎರಡನೆಯ ತಿರುವಾಯ್ಮೊಳಿ

திருவாய்மொழி - மூன்றாம் பத்து - இரண்டாந் திருவாய்மொழி

2. ಮುನ್ನೀರ್ ಞಾಲಪ್ಪಡೈತ್ತ - முந்நீர் ஞாலப்படைத்த

1. முந்நீர் ஞாலப்படைத்த எம் முகில் வண்ணனே,
அந்நாள் நீ தந்த ஆக்கையின் வழியுழல்வேன்,
வெந்நாள் நோய் வீய வினைகளை வேரறப் பாய்ந்து,
எந்நாள் யானுன்னை இனி வந்து கூடுவனே.

ಮುನ್ನೀರ್ ಞಾಲಪ್ಪಡೈತ್ತ ಎಮ್ಮುಹಿಲ್ ವಣ್ಣನೇ,
ಅನ್ನಾಳ್ ನೀ ತನ್ದ ಆಕ್ಕೈಯಿನ ವಳಿಯುಳಲ್ವೇನ್,
ವೆನ್ನಾಳ್ ನೋಯ್ ವೀಯ ವಿನೈಗಳೈ ವೇರಱಪ್ಪಾಯ್ನ್ದು,
ಎನ್ನಾಳ್ ಯಾನುನ್ನೈ ಇನಿ ವನ್ದು ಕೂಡುವನೇ.

ಮುನ್ನೀರ್ முந்நீர் = ಕಡಲಿನಿಂದ ಸುತ್ತುವರಿದ, ಞಾಲಮ್ ஞாலம் = ಈ ಲೋಕವನ್ನು, ಪಡೈತ್ತ படைத்த = ಸೃಷ್ಟಿಸಿದ, ಎಮ್ ಮುಹಿಲ್ ವಣ್ಣನೇ எம் முகில் வண்ணனே = ನಮ್ಮ ಕಾರ್ಮುಗಿಲ ಬಣ್ಣದವನೇ, ಅನ್ನಾಳ್ அந்நாள் = ಆ ಕಾಲದಲ್ಲಿ, ನೀ நீ = ನೀನು, ತನ್ದ தந்த = ಒದಗಿಸಿದ (ಕೊಟ್ಟ), ಆಕ್ಕೈಯಿನ್ ஆக்கையின் = ಶರೀರದ, ವಳಿ வழி = ದಾರಿಯಲ್ಲಿಯೇ, (ಆಶೆಯಲ್ಲಿಯೇ), ಉಳಲ್ವೇನ್ உழல்வேன் = ಅಲೆದಾಡುತ್ತಿದ್ದೇನೆ, ವೆನ್ನಾಳ್ வெந்நாள் = ಕ್ರೂರ ಕಾಲದ, ನೋಯ್ நோய் = ದಂಡನೆಯು, ವೀಯ வீய = ತೀರುವಂತೆ, ವಿನೈಗಳೈ வினைகளை = ಪಾಪಕರ್ಮಗಳ, ವೇರ್ ಅಱ வேர் அற = ಬೇರನ್ನು ಕತ್ತರಿಸುವಂತೆ, ಪಾಯ್ನ್ದು பாய்ந்து = ಹಾಯುದ ತೊಲಗಿಸಲ್ಪಟ್ಟು, ಎನ್ನಾಳ್ எந்நாள் = ಎಂದಿನಾದರೂ, ಯಾನ್ யான் = ನಾನು, ಉನ್ನೈ உன்னை = ನಿನ್ನನ್ನು, ಇನಿ இனி = ಇನ್ನು, ವನ್ದು வந்து = ಬಂದು, ಕೂಡುವನೇ கூடுவனே = ಸೇರಿಹೋಗುತ್ತೇನೆ.

ಕಡಲಿನಿಂದ ಸುತ್ತುವರಿದಿರುವ ಈ ಲೋಕವನ್ನು ಸೃಷ್ಟಿಸಿದ ಕಾರ್ಮುಗಿಲ ಬಣ್ಣದವನೇ, ಆ ಕಾಲದಲ್ಲಿ ನೀನು ಕೊಟ್ಟ ಶರೀರದ ದಾರಿಯಲ್ಲೇ (ಆಶೆಯಲ್ಲೇ) ಅಲೆದಾಡುತ್ತಿರುವೆನು. ಕ್ರೂರಕಾಲದ ದಂಡನೆ ತೀರುವಂತೆ ಪಾಪಕರ್ಮಗಳ ಬೇರನ್ನು ಕತ್ತರಿಸುವಂತೆ ಹಾಯ್ದು ತೊಲಗಿಸಲ್ಪಟ್ಟುದರಿಂದ, ಇನ್ನು ಎಂದಿನಾದರೂ ನಾನು ಬಂದು ನಿನ್ನನ್ನು ಕೂಡಿಕೊಳ್ಳುವೆನು.

(1)

ಭಗವಂತನನ್ನು ಕಾರ್ಮುಗಿಲಿನ ಬಣ್ಣ ಸ್ವಭಾವಗಳಿಗೆ ಹೋಲಿಸುವುದು

ಸಹಜವಾದದ್ದು. ಕಾರ್ಮುಗಿಲು ಅಂಧಕಾರವಾದ ಸಂಸಾರವಾದ ಬೆಟ್ಟದಂಥ ಮೋಡಗಳು ತ್ತವೆ. ಅವು ಸಮುದ್ರದಿಂದ (ವಿಸ್ತಾರವಾದ ಜಲಭಾಗಗಳಿಂದ) ನೀರನ್ನು ಹೀರಿಕೊಂಡು, ಆಕಾಶದಲ್ಲಿ ಮೆಲ್ಲಮೆಲ್ಲನೆ ಚಲಿಸುತ್ತ, ನೆಲದ ಮೇಲಕ್ಕೆ ಸಮೃದ್ಧಿಯಾಗಿ ನೀರನ್ನು ಮಳೆಯ ರೂಪದಲ್ಲಿ ಎರೆಯುತ್ತವೆ. ಅಷ್ಟು ಔದಾರ್ಯ ಅದಕ್ಕೆ! ಹಾಗೆಯೇ, ಭಗವಂತನೂ. ತನ್ನ ಅತ್ಯಾಶ್ಚರ್ಯಕರವಾದ ತೇಜಸ್ಸಿನಿಂದ (ರೂಪದಿಂದ)ಲೂ ಪರಮೌದಾರ್ಯದಿಂದಲೂ ಇರುವುದೇ ಕಾರ್ಮುಗಿಲಿನ ಸಾಮ್ಯವಾಗಿ ತೋರುವುದು

"ಅನ್ನಾಳ್" – ಎಂದರೆ, ಭಗವಂತನು ಎಲ್ಲಾ ಲೋಕಗಳನ್ನು ಮೊದಲು ಸೃಷ್ಟಿಸಿದನಷ್ಟೆ. ಆಗಲೇ, ಎಲ್ಲಾ ಚೇತನ ಅಚೇತನ ವಸ್ತುಗಳನ್ನು ಸೃಷ್ಟಿಸಿದನು. ಆದ್ದರಿಂದ, ಅದು ಆ ಸೃಷ್ಟಿಕಾಲವೇ.

"ನೀ ತಂದ ಆಕ್ಕೈಯಿನ್ ವழி' – ಭಗವಂತನು ಸೃಷ್ಟಿಸಿದ ವಸ್ತುಗಳಿಗೆ ಅವುಗಳಿಗೆ ತಕ್ಕ ದೇಹವನ್ನು ಕೊಟ್ಟನು. ಮಾನವದೇಹದೊಡನೆ ಇಂದ್ರಿಯಗಳನ್ನು ನೀಡಿದನು. ಇಂದ್ರಿಯಗಳಿಗೆ ಎರಡು ದಾರಿ: ಭಗವಂತನನ್ನು ಆಶ್ರಯಿಸಿ, ಅವನ ಗುಣಕೀರ್ತನಗಳಲ್ಲಿ ತೊಡಗಿ ಉಜ್ಜೀವನ ಹೊಂದುವುದು ಒಂದು ದಾರಿ. ಅದನ್ನು ಬಿಟ್ಟು ಪ್ರಪಂಚಕ್ಕೆ ಅಂಟಿಕೊಂಡು ದುಃಖ ಸಂಕಟಗಳಲ್ಲಿ ಬಿದ್ದು ಹೊರಳುತ್ತಾ, ಪಾಪಮಾಡುತ್ತ, ಜನ್ಮಗಳನ್ನು ಪಡೆಯುತ್ತ ಇರುವುದು ಇನ್ನೊಂದು ದಾರಿ. ಸಾಮಾನ್ಯವಾಗಿ ಎಲ್ಲ ಚೇತನರೂ ಪ್ರಾಪಂಚಿಕ ಮಾರ್ಗವನ್ನೇ ಹಿಡಿದು ಹೊರಳುವುದು. ಭಗವತ್ಕೃಪೆಗೆ ಪಾತ್ರರಾದವರು ಮಾತ್ರ ಅವರು ಪ್ರಾಪಂಚಿಕದಿಂದ ದೂರರಾಗಿ, ಭಗವಂತನ ಕಡೆಗೆ ತಮ್ಮ ಗಮನವನ್ನು ಹರಿಸುವುದು.

ಆಳ್ವಾರರು ಹೇಳುತ್ತಾರೆ! ಭಗವಂತ, ಕಾರ್ಮುಗಿಲ ಗುಣಸ್ವಭಾವಗಳನ್ನುಳ್ಳವನೇ, ನೀನು ಅಂದೇ (ಸೃಷ್ಟಿ ಸಮಯದಲ್ಲಿ) ತಿಳಿಯಂದ ನಿರುತ್ತವೆಂಬುದು ಈ ಲೋಕವನ್ನು ಸೃಷ್ಟಿಸಿದೆ. ಆಗಲೇ ನನಗೆ ಈ ದೇಹವನ್ನು ನೀಡಿದೆ. ನಾನು ಬಹು ಕಾಲ (ಇದುವರೆಗೂ) ದೇಹದ ಜಾಡನ್ನು ಹಿಡಿದು ಕಷ್ಟ ಸಂಕಟಗಳಲ್ಲಿ ಸಿಕ್ಕಿಕೊಂಡು, ಪಾಪಗಳನ್ನು ಮಾಡುತ್ತ, ಜನ್ಮಗಳನ್ನು ಪಡೆಯುತ್ತ ಹೊರಳಿದೆ. ನಿನ್ನ ಕೃಪೆ ನನ್ನ ಮೇಲೆ ಬಿತ್ತು. ಆದ್ದರಿಂದ, ಆ ದುಃಖ ಸಂಕಟಗಳೆಲ್ಲವೂ ಬೇರುಸಹಿತ ಕಡಿದು ಹೋದವು. ಅವುಗಳಿಂದ ಮುಕ್ತನಾದ ನಾನು ಇನ್ನು ಮೇಲೆ ನಿನ್ನನ್ನು ಕಾಣುವ ಮಾರ್ಗವನ್ನು ಹಿಡಿಯುತ್ತೇನೆ.

2. வண்மாவையமளந்த எம் வாமனா, நின்
பண்மா மாயப்பல் பிறவியில் படிகின்றயான்,
தொன்மாவல்வினைத் தொடர்களை முதலரிந்து,
நின்மாதாள் சேர்ந்து நிற்பதெஞ்ஞான்று
கொலோ.

Garani Srinivasan

ವನ್ ಮಾ ವೈಯಮ್ ಅಳನ್ದ ಎಮ್ಮಾ ವಾಮನಾ, ನಿನ್
ಪನ್ ಮಾ ಮಾಯಪ್ಪಿಱವಿಯಿಲ್ ಪಡಿಗಿನ್ಱ ಯಾನ್,
ತೊನ್ ಮಾ ವಲ್ ವಿನೈತ್ ತೊಡರ್ಗಳೈ ಮುದಲರಿನ್ದು,
ನಿನ್ ಮಾ ತಾಳ್ ಸೇರ್ನ್ದು ನಿಱ್ಪದು ಎಞ್ಞಾನ್ಱು ಕೊಲೋ.

ವಲ್ ವನ್ = ಬಲಿಷ್ಠವಾದ, ಮಾ மா = ವಿಸ್ತಾರವಾದ, ವೈಯಮ್ வையகம் = ಭೂಮಿಯನ್ನು, ಅಳನ್ದ அளந்த = ಅಳೆದುಕೊಂಡ, ಎಮ್ಮಾ ವಾಮನಾ எம்மான் = ನಮ್ಮ ವಾಮನನೇ, ನಿನ್ நின் = ನಿನ್ನ, ಪಲ್ பல = ಹಲವಾರು, ಮಾ மா = ಅದ್ಭುತವಾದ, ಮಾಯಮ್ மாயம் = ಮಾಯದ, ಪಿಱವಿಯಿಲ್ பிறவியில் = ಜನ್ಮಗಳಲ್ಲಿ, ಪಡಿಗಿನ್ಱ படிகின்ற = ಬಿದ್ದುಕೊಳ್ಳುತ್ತಿರುವ, ಯಾನ್ யான் = ನಾನು, ತೊಲ್ தொல் = ಅನಾದಿಕಾಲದ, ಮಾ மா = ಅಗಾಧವಾದ, ವಲ್ வல் = ಕ್ರೂರವಾದ, ವಿನೈ வினை = ಪಾಪಗಳ, ತೊಡರ್ಗಳೈ தொடர்களை = ಅನುಭವಗಳನ್ನು, ಮುದಲ್ முதல் = ಮೊದಲಿಂದಲೇ, ಅಱಿನ್ದು அறிந்து = ಅರಿತುಕೊಂಡು, ನಿನ್ நின் = ನಿನ್ನ, ಮಾ ತಾಳ್ மா தாள் = ಶ್ರೇಷ್ಠವಾದ ತಿರುವಡಿಯನ್ನು, ಸೇರ್ನ್ದು சேர்ந்து = ಸೇರಿ, ನಿಱ್ಪದು நிற்பது = (ನಿನ್ನ ಬಳಿಯಲ್ಲೇ) ನೆಲೆಸುವುದು, ಎಞ್ಞಾನ್ಱು [illegible] ಕೊಲೋ கொலோ = ಅದೆಂದಿಗೋ ಕಾಣೆ!

ಬಲಿಷ್ಠವಾದ ಮತ್ತು ವಿಸ್ತಾರವಾದ ಭೂಮಿಯನ್ನು ಅಳೆದುಕೊಂಡ ನಮ್ಮ ವಾಮನನೇ, ನಿನ್ನ ಅದ್ಭುತವಾದ ಮಾಯದ ಜನ್ಮಗಳಲ್ಲಿ ಬಿದ್ದುಕೊಳ್ಳುತ್ತಿರುವ ನಾನು ಅನಾದಿಕಾಲದ, ಅಗಾಧವಾದ, ಕ್ರೂರವಾದ, ಪಾಪಗಳ ಅನುಭವವನ್ನು ಮೊದಲಿಂದಲೇ (ಮುಂದೆಯಾದರೂ) ಅರಿತುಕೊಂಡು, ನಿನ್ನ ಶ್ರೇಷ್ಠವಾದ ತಿರುವಡಿಯನ್ನು ಸೇರಿ (ನಿನ್ನ ಬಳಿಯಲ್ಲೇ) ನೆಲೆಸುವುದು ಅದೆಂದಿಗೋ ಕಾಣೆನಲ್ಲ! (2)

ಹಿಂದಿನ ಪಾಶುರದಲ್ಲಿ ಭಗವಂತನು ಆಳ್ವಾರರನ್ನು (ಮಾನವನನ್ನು) ಸೃಷ್ಟಿಸಿದ ಕಾಲದಿಂದಲೂ ಅವರಿಗೆ ಕೊಟ್ಟಿದ್ದ ಜ್ಞಾನವನ್ನು ಅವರು ಬಿಟ್ಟು ಪಾಪರಾಶಿಯನ್ನು ಕಟ್ಟಿಕೊಂಡರೆಂದೂ, ಸ್ವಾಮಿಯ ಕೃಪೆಯಿಂದ ತಮ್ಮ ತಪ್ಪನ್ನು ತಾವು ಅರಿತುಕೊಳ್ಳುವ ಜ್ಞಾನವುಂಟಾಯಿತೆಂದೂ, ಇನ್ನು ಮುಂದೆ ಭಗವಂತನನ್ನು ಸೇರಲು ದಾರಿ ಯಾವುದೆಂದು ಹೇಳಲಾಯಿತು.

ಈ ಪಾಶುರದಲ್ಲಿ, ಭಗವಂತನನ್ನು ಸೇರಿ, ಅವನ ತಿರುವಡಿಗಳ ಬಳಿಯಲ್ಲೇ ನಿತ್ಯವಾಸ ಮಾಡುತ್ತಾ ಕೈಂಕರ್ಯದಲ್ಲಿ ತೊಡಗುವ ಕಾಲ ಅದೆಂದಿಗೆ ಬರುವುದೋ ಎಂದು ಆಳ್ವಾರರು ಚಿಂತಿಸುತ್ತಾರೆ. ಈ ಸ್ಥಿತಿಯು ಅದೆಷ್ಟು ಬೇಗನೆ ಬರುವುದೋ ಎಂದು, ತಮ್ಮ ಹಿಂದಿನ ಜನ್ಮಗಳ ಅನುಭವ ಮತ್ತೆ ಬಾರದಿರಲೆಂದು ಅವರ ಆಶಯವಾಗಿರುತ್ತದೆ.

Garani Srinivasan

ಆಳ್ವಾರರು ಹೇಳುತ್ತಾರೆ: ಭಗವಂತ, ನೀನು ಕರುಣಾಸಾಗರನೆಂಬ. ನನ್ನನ್ನು ಸೃಷ್ಟಿಸಿದ ಕಾಲದಿಂದಲೂ ಇಲ್ಲಿಯವರೆಗೆ ನನಗೆ ವಿಷ್ಣುಲೋಕ ನಿನ್ನ ಬಳಿ ಸೇರುವ ಅವಕಾಶವನ್ನು ಕಲ್ಪಿಸಿದ್ದೀಯೆ. ಭೂಮಿಯ ಮೇಲೆ ನೀನಾಗಿಯೇ ನಾನಾ ಅವತಾರಗಳನ್ನು ಎತ್ತಿದೆ. ಬಲಿಚಕ್ರವರ್ತಿಯನ್ನು ಬಗ್ಗಿಸಲೆಂದು ವಾಮನನಾಗಿ ನಾನಾ ಅವತರಿಸಿದೆ. ನಿನ್ನ ದಿವ್ಯ ತಿರುವಡಿಯನ್ನು ಅವನ ತಲೆಯ ಮೇಲಿಟ್ಟು ಅವನನ್ನು ಅನುಗ್ರಹಿಸಿದೆ. ಹಾಗೆಯೇ ನಿನ್ನ ತಿರುವಡಿಯನ್ನು ಸಕಲ ಲೋಕದವರೆಲ್ಲ ಅನುಗ್ರಹಿಸಿದೆ. ನಾನು ಇದ ನಾನಾ ಜನ್ಮಗಳನ್ನೆತ್ತಿದೆ. ಆದರೆ ಅವ್ಯಾವುಗಳಲ್ಲೂ ಕೇಳುತ್ತೇನೆ ನಾವಿಯಾದೆ, ಅಷ್ಟೆ. ನಿನ್ನ ತಿರುವಡಿಯನ್ನು ಆಶ್ರಯಿಸಬೇಕೆಂದು, ಬದ್ಧರಾಗಿಲ್ಲ ಬೇಕೆಂದು ನನಗೆ ಜ್ಞಾನವುಂಟಾಗಲಿಲ್ಲ (ನಾನು ಅಂತಹವನಾಗಲಿಲ್ಲ). ಈಗ, ನಿನ್ನ ಕೃಪೆಯಿಂದ, ನಿನ್ನ ತಿರುವಡಿಗಳ ಬಳಿಯಲ್ಲಿ ನಿತ್ಯವಾಸವಾಗಬೇಕೆಂದು ಆಶೆಯನ್ನು ಹೊತ್ತಿದ್ದೇನೆ. ಅದು ಕೈಗೂಡುವುದು ಎಂದೆಂದಿಗೂ ನನಗೆ ತಿಳಿಯದಲ್ಲ!

3. கொல்லா மாக்கோல் கொலை செய்து பாரதப்போர்,
எல்லாச் சேனையும் இருநிலத்தவித்த எந்தாய்,
பொல்லா ஆக்கையின் புணர்வினை அறுக்கலறா,
சொல்லாய் யானுன்னைச் சார்வதோர் ~~சூழ்ச்சியே~~ சூழ்ச்சியே.

ಕೊಲ್ಲಾ ಮಾಕ್ಕೋಲ್ ಕೊಲೈಶೆಯ್ದು ಪಾರದಪ್ಪೋರ್,
ಎಲ್ಲಾಚ್ಚೇನೈಯುಮ್ ಇರುನಿಲತ್ತವಿತ್ತ ಎನ್ದಾಯ್,
ಪೊಲ್ಲಾ ವಾಕ್ಕೈಯಿನ್ ಪುಣರ್ವಿನೈಯಱುಕ್ಕಲಱಾ,
ಶೊಲ್ಲಾಯ್ ಯಾನುನ್ನೈ ಚ್ಚಾರ್ವದೋರ್ ಶೂೞ್ಚ್ಚಿಯೇ.

ಕೊಲ್ಲಾ கொல்லா = ಕೊಲ್ಲಲಾರದ (ಯಾವ ತೊಂದರೆಯೂ ಇಲ್ಲದ), ಮಾ மா = ಕುದುರೆಯ, ಕೋಲ್ கோல் = ಛಾಟಿಯಿಂದ, ಕೊಲೈ ಶೆಯ್ದು கொலை செய்து = ಕೊಲೆಯನ್ನು ಮಾಡಿ, ಪಾರದಪ್ಪೋರ್ பாரதப் போர் = ಭಾರತ ಯುದ್ಧದಲ್ಲಿ, ಎಲ್ಲಾ ಚ್ಚೇನೈಯುಮ್ எல்லாச் சேனையும் = ಎಲ್ಲಾ ಸೇನೆಯನ್ನೂ, ಇರುನಿಲತ್ತು இருநிலத்து = ವಿಸ್ತಾರವಾದ ಭೂಮಿಯ ಮೇಲೆ, ಅವಿತ್ತ அவித்த = ಹೊಡೆದು ಹಾಕಿದ, ಎನ್ದಾಯ್ எந்தாய் = ನನ್ನ ತಂದೆಯೇ, (ಸ್ವಾಮಿಯೇ), ಪೊಲ್ಲಾ பொல்லா = ದುಃಖಪೂರ್ಣವಾದ, ಆಕ್ಕೈಯಿನ್ ஆக்கையின் = ದೇಹದ, ಪುಣರ್ವಿನೈ புணர்வினை = ಸಂಬಂಧದ ಕರ್ಮವನ್ನು, ಅಱುಕ್ಕಲ್ அறுக்கல் = ಕಡಿದು ಹಾಕುವುದಕ್ಕೆ, ಅಱಾ அறா = ಸಾಧ್ಯವಿಲ್ಲದೆ ಇದೆ, ಶೊಲ್ಲಾಯ್ சொல்லாய் = ಹೇಳು, ಯಾನ್ யான் = ನಾನು, ಉನ್ನೈ உன்னை = ನಿನ್ನನ್ನು, ಚಾರ್ವದು சார்வது = ಸೇರುವುದು, ಓರ್

ಕೂಡಿಕೊಂಡು ಕ್ಷೀರಸಮುದ್ರಕ್ಕೆ ಬಂದು ಬಿನ್ನಹವನ್ನು.

ಕೊಲ್ಲಲಾರದ (ಯಾವ ಬಾಧ್ಯತೆಯೂ ಇಲ್ಲದ) ಕುದುರೆಯ ಚಾಟಿ ~~ಯನ್ನು~~ ಹಿಡಿದ, ವಿಸ್ತಾರವಾದ ಭೂಮಿಯ ಮೇಲೆ, ಭಾರತಯುದ್ಧದಲ್ಲಿ ಎಲ್ಲಾ ಸೇನೆಯನ್ನು ಕೊಲೆಮಾಡಿ, (ಭೂಭಾರವನ್ನು) ತೆಗೆದುಹಾಕಿದ ನನ್ನ ತಂದೆಯೇ, ದುಃಖಪೂರ್ಣವಾದ ದೇಹಸಂಬಂಧದ ಕರ್ಮವನ್ನು (ಕರ್ಮಬಂಧನವನ್ನು) ತೆಗೆದುಹಾಕುವುದಕ್ಕೆ ಸಾಧ್ಯವಿಲ್ಲವಾದ್ದ; ನಾನು ನಿನ್ನನ್ನು ಸೇರುವುದಕ್ಕೆ ಬಂದು ಬಿನ್ನಹವನ್ನು ಹೇಳು (3)
(ಹೇಳಿಕೊಳ್ಳುತ್ತೇನೆ).

ಭಗವಂತನ ತಿರುವಡಿಗಳ ಬಳಿಯಲ್ಲಿ ನಿತ್ಯವಾಸ ಮಾಡುವ ಆಸೆಯನ್ನು ಹೊತ್ತಿರುವುದಾಗಿ ಆಳ್ವಾರರು ಹಿಂದಿನ ಪಾಶುರದಲ್ಲಿ ಹೇಳಿದರು. ಸ್ವಾಮಿಯ ತಿರು-ವಡಿಗಳ ಆಶ್ರಯದಿಂದ ಒಳ್ಳೆಯದಾಗುವುದು ಎಂಬುದಕ್ಕೆ ಒಂದು ಒಳ್ಳೆಯ ನಿದ-ರ್ಶನವನ್ನು ಇಲ್ಲಿ ಕೊಡಲಾಗುತ್ತದೆ.

"ಕೊಲ್ಲಮಾ ಕೋಲ್ ಕೊಲೈ ಸೆಯ್ದು .... ಅಪ್ಪ" – ಮಹಾಭಾರತ ಯುದ್ಧ ಒದಗಿ ಬರುವ ಸಂದರ್ಭವುಂಟಾಯಿತಷ್ಟೆ. ಆಗ ಶ್ರೀಕೃಷ್ಣನು ಪಾಂ-ಡವ ಕೌರವರ ನಡುವೆ ಸಂಧಿ ಮಾಡಿಸಲು ಯತ್ನಿಸಿದನು. ಸಂಧಿದೂತನಾದನು. ಅದು ಫಲಿಸಲಿಲ್ಲ. ಬಳಿಕ, ಯುದ್ಧಕ್ಕೆ ಮುಂಚೆ ಶ್ರೀಕೃಷ್ಣನ ಸಹಾಯವನ್ನು ಕೇಳಲು ಪಾಂಡವರ ಅರ್ಜುನನೂ, ಕೌರವರ ದುರ್ಯೋಧನನೂ ಏಕಕಾಲದಲ್ಲಿ ಶ್ರೀಕೃಷ್ಣನ ಬಳಿಗೆ ಬಂದರು. ಆಗ, ಶ್ರೀಕೃಷ್ಣನು ನಿದ್ರಿಸುತ್ತಿದ್ದ. ಅರ್ಜುನನು ಅವನ ಕಾಲ ಬಳಿಯಲ್ಲೂ, ದುರ್ಯೋಧನನು ತಲೆಯ ಬಳಿಯಲ್ಲೂ ಕುಳಿತರು. ಶ್ರೀಕೃಷ್ಣ-ನು ಎಚ್ಚರಗೊಂಡು, ಮೊದಲು ಅರ್ಜುನನನ್ನು ಕಟಾಕ್ಷಿಸಿದನು. ಬಳಿಕ ದುರ್ಯೋ-ಧನನನ್ನು ನೋಡಿ, ಅವನೊಡನೆ ಮಾತನಾಡಿದನು. ಅವರು ಬಂದ ಕಾರ್ಯವೇನೆಂ-ದು ತಿಳಿಯಲು ಶ್ರೀಕೃಷ್ಣನು "ನಾನು ಯುದ್ಧ ಮಾಡುವುದಿಲ್ಲ. ನಿಃಶಸ್ತ್ರನು. ನಿಮಗೆ ನಾನು ಬೇಕೇ? ನನ್ನ ಸೈನ್ಯವೆಲ್ಲಾ ಬೇಕೇ? ಯಾವುದು ಬೇಕು ಆರಿಸಿಕೊಳ್ಳಿ" ಎಂದು ಕೇಳಿದನು. ದುರ್ಯೋಧನನಿಗೆ ಸೈನ್ಯದ ಬೆಂಬಲ ಬಂತು. ಅರ್ಜುನನಿಗೆ ಶ್ರೀಕೃಷ್ಣನೊಬ್ಬ ನೆರವಾದನು. ಮಹಾಭಾರತಯುದ್ಧ ತೊಡಗಿತು. ಶ್ರೀಕೃಷ್ಣನು ಅರ್ಜುನನ ಸಾರಥಿಯಾಗಿ ನಿಂತನು. ಕೈಯಲ್ಲಿ ಕುದುರೆಯ ಚಾಟಿಯನ್ನು ಹಿಡಿದು, ಯುದ್ಧವನ್ನು ನಡೆಸಿ, ಶ್ರೀಕೃಷ್ಣನು ಪಾಂಡವರ ಏಳು ಅಕ್ಷೋಹಿಣಿ-ಯನ್ನೂ, ಕೌರವರ ಹನ್ನೊಂದು ಅಕ್ಷೋಹಿಣಿಯನ್ನೂ ನಾಶಗೊಳಿಸಿ, ಭೂಮಿ-ಯ ಮೇಲಿನ ಭಾರವನ್ನು ಇಳಿಸಿದನು. ಇದು ಕಥೆ.

ಆಳ್ವಾರರು ಹೇಳುತ್ತಾರೆ: ಭಗವಂತ, ದುಷ್ಟನಿಗ್ರಹಕ್ಕಾಗಿಯೂ, ಧರ್ಮರಕ್ಷಣೆಗಾಗಿಯೂ, ಭೂಭಾರವನ್ನಿಳಿಸುವುದಕ್ಕಾಗಿಯೂ ನೀನು ಮಹಾಭಾರತಯುದ್ಧವನ್ನು, ಕೈಯಲ್ಲಿ ಕುದುರೆಯ [illegible] ಹಿಡಿಯುವುದರಿಂದ

ನಿವರ್ತಿಸಿದೆ. ನಿನ್ನ ತಿರುವಡಿಗಳನ್ನು ನಾನು ಆಶ್ರಯಿಸಿದ್ದೇನೆ. ದುಃಖಮಯವಾದ ದೇಹದ ಸಂಬಂಧದ ಕರ್ಮ ಪಾಶದಿಂದ ಬಿಡುಗಡೆಯಿಂದಲು ನನಗೆ ಒಂದು ಉಪಾಯವನ್ನು ದಯೆಯಿಂದ ನನ್ನನ್ನು ಉದ್ಧರಿಸು.

4. சூழ்ச்சி ஞானச் சுடரொளியாகி, என்றும்
ஏழ்ச்சிக் கேடின்றி யெங்கணும் நிறைந்த வெந்தாய்,
தாழ்ச்சி மற்றெங்குந் தவிர்ந்து நின் தாளிணைக் கீழ்
வாழ்ச்சி, யான் சேரும் வகையருளாய் வந்தே.

ಸೂೞ್ಚ್ಚಿ ಜ್ಞಾನಚ್ಚುಡರೊಳಿಯಾಗಿ, ಎನ್ಱುಮ್
ಏೞ್ಚ್ಚಿಕ್ಕೇಡಿನ್ಱಿ ಯೆಙ್ಗಣುಮ್ ನಿಱೈನ್ದ ವೆನ್ದಾಯ್,
ತಾೞ್ಚ್ಚಿ ಮಱ್ಱೆಙ್ಗುಮ್ ತವಿರ್ನ್ದು ನಿನ್ ತಾಳಿಣೈಕ್ಕೀೞ್
ವಾೞ್ಚ್ಚಿ, ಯಾನ್ ಸೇರುಮ್ ವಗೈಯರುಳಾಯ್ ವನ್ದೇ.

ಸೂೞ್ಚ್ಚಿ சூழ்ச்சி = (ಎಲ್ಲೆಡೆಯಲ್ಲೂ, ಎಲ್ಲ ಬಗೆಯಲ್ಲೂ) ಆವರಿಸಿಕೊಂಡಿರುವ, ಒಳಿ ಆಗಿ ஒளியாகி ಜ್ಞಾನಮ್ ಸುಡರ್ ஞானம் சுடர் = ಜ್ಞಾನಜ್ಯೋತಿಯು, ಎನ್ಱುಮ್ என்றும் = ಎಲ್ಲೆ = ಪ್ರಕಾಶವಾಗಿ (ಅಸಾಧಾರಣ ತೇಜಸ್ಸಾಗಿ)ರುವವನೇ, ಕೇಡು கேடு = ನಾಶವು, ಇನ್ ಯಾವ ಕಾಲಕ್ಕೂ ~~ಎಂದೆಂದೂ~~, ಏೞ್ಚ್ಚಿ ஏழ்ச்சி = ಅಭ್ಯುದಯವು, ಎಙ್ಗಣುಮ್ எங்கணும் = ಎಲ್ಲಾ ಕಡೆಯಲ್ಲೂ, ಇನ್ಱಿ இன்றி = ಇಲ್ಲದಂತೆ, ಎಙ್ಗುಮ್ ಎನ್ದಾಯ್ எந்தாய் = ನನ್ನ ನಿಱೈನ್ದ நிறைந்த = ತುಂಬಿಕೊಂಡಿರುವ, ಎನ್ದಾಯ್ ತಂದೆಯೇ (ಸ್ವಾಮಿಯೇ), ತಾೞ್ಚ್ಚಿ தாழ்ச்சி = ಅಧಃ ಬೀಳುವಿಕೆಯನ್ನು, ಮಱ್ಱು மற்று = ಬೇರೆ, ಎಙ್ಗುಮ್ எங்கும் = ಎಲ್ಲೂ, ತವಿರ್ನ್ದು தவிர்ந்து = ಬಿಟ್ಟು, ನಿನ್ நின் = ನಿನ್ನ, ತಾಳಿಣೈಕ್ಕೀೞ್ தாளிணைக் கீழ் = ಎರಡು ತಿರುವಡಿಗಳ ಬಳಿಯಲ್ಲಿ, ವಾೞ್ಚ್ಚಿ வாழ்ச்சி = ಬಾಳುವಿಕೆ ಆಗ, ಯಾನ್ யான் = ನಾನು, ಸೇರುಮ್ சேரும் = ಸೇರುವ, ವಗೈ வகை = ರೀತಿಯನ್ನು (ಬಗೆಯನ್ನು), ಅರುಳಾಯ್ அருளாய் = ಕೃಪೆಮಾಡು, ವನ್ದೇ வந்தே = ನನ್ನ ಬಳಿಗೇ ಬಂದು.

ಆವರಿಸಿಕೊಂಡಿರುವ ಜ್ಞಾನಜ್ಯೋತಿಯು ಅಸಾಧಾರಣ ತೇಜಸ್ಸಾಗಿರುವವನೇ, ಯಾವ ಕಾಲಕ್ಕೂ ~~ಎಲ್ಲೆಡೆಯಲ್ಲಿ~~ ಅಭ್ಯುದಯವೂ ನಾಶವೂ ಇಲ್ಲದಂತೆ ಎಲ್ಲೆಡೆಯಲ್ಲೂ ತುಂಬಿಕೊಂಡಿರುವ ನನ್ನ ತಂದೆಯೇ, ಬೇರೆಲ್ಲಿಯೂ ~~ಎರಡನೆ~~ ಪತನವುದನ್ನು ಬಿಟ್ಟು ನಿನ್ನ ಎರಡು ತಿರುವಡಿಗಳ ಬಳಿಯಲ್ಲಿ ಬಾಳುವುದಕ್ಕಾಗಿ ನಾನು ಸೇರುವ ಬಗೆಯನ್ನು ನನ್ನ ಬಳಿಗೆ ಬಂದು ಕೃಪೆಮಾಡು.

ಬಂದಿನ ಪಾಶುರದಲ್ಲಿ ದೇಹಸಂಬಂಧವಾದ ಕರ್ಮಪಾಶದಿಂದ ಬಿಡುಗಡೆ

Galani Srinivasan

ಯಾವುದಕ್ಕೆ ಉಪಾಯವನ್ನು ಹೇಳಲಾಯಿತು. ಅದರ ಮುಂದಿನ ಶ್ಲೋಕದ ಭಗವಂತನ ಬಳಿಯಲ್ಲಿ ನಿಶ್ಚಾಸಮಾಡುವುದಕ್ಕೆ ಮಾರ್ಗವನ್ನು ಕೃಪೆಮಾಡೆಂದು ಇಲ್ಲಿ ಹೇಳಲಾಗುತ್ತದೆ.

ಆಳ್ವಾರರು ಹೇಳುತ್ತಾರೆ: ಭಗವಂತ, ನೀನು ಅಸಾಧಾರಣವಾದ, ಎಲ್ಲ ವಿಷಯಗಳನ್ನೂ ಅರಿಯುವ ಜ್ಞಾನಸ್ವರೂಪಿ. ಎಲ್ಲೆಲ್ಲೂ ಹಬ್ಬಿಕೊಂಡಿರುವೆ. ನಾನು ಶಕ್ತಿಗಳಿಲ್ಲದೆ, ಯಾವ ಬಗೆಯ ಮಾರ್ಗವನ್ನು ಹೊಂದದೆ ಎಲ್ಲೋ ವ್ಯಾಕುಲಿಸುತ್ತಿರುವೆ. ಜ್ಞಾನಮಯನೂ, ಸರ್ವವ್ಯಾಪಿಯೂ ಆದ ನಿನ್ನನ್ನು ನಾನು ಇದ್ದ ಆಶ್ರಯಿಸುವಂತೆಯೂ, ನಿನ್ನ ಶ್ರೀಪಾದಗಳ ಬಳಿಯಲ್ಲಿ ನಿಶ್ಚಾಸಮಾಡುವಂತೆಯೂ, ನಿನ್ನ ಬಳಿ ಸೇರುವುದಕ್ಕೆ, ನನ್ನಲ್ಲಿಗೆ ಬಂದು, ಶಕ್ತಿ ಮಾರ್ಗವನ್ನು ಕೃಪೆಮಾಡು.

5\. வந்தாய் போலே வந்துஎன் மனத்தினை நீ,
சிந்தாமல் செய்யாய் இதுவே யிதுவாகில்,
கொந்தார் காயாவின் கொழுமலர் திருநிறத்த
எந்தாய், யானுன்னை யெங்குவந் தணுகிற்பனே.

ವನ್ದಾಯ್ ಪೋಲೇ ವನ್ದುಎನ್ ಮನತ್ತಿನ್ನೈ ನೀ,
ಶಿನ್ದಾಮಲ್ ಶೆಯ್ಯಾಯ್ ಇದುವೇ ಇದುವಾಗಿಲ್,
ಕೊನ್ದಾರ್ ಕಾಯಾವಿನ್ ಕೊೞು ಮಲರ್ ತಿರುನಿಱತ್ತ
ಎನ್ದಾಯ್, ಯಾನುನ್ನೈ ಎಙ್ಗುವನ್ದಣುಗಿಱ್ಪನೇ.

ವನ್ದಾಯ್ ಪೋಲೇ வந்தாய் போலே = ಬಂದಹಾಗೆ, ವನ್ದುಮ್ வந்தும் = ಬಂದು, ಎನ್ என் = ನನ್ನ, ಮನತ್ತಿನ್ನೈ மனத்தினை = ಮನಸ್ಸನ್ನು, ನೀ நீ = ನೀನು, ಶಿನ್ದಾಮಲ್ சிந்தாமல் = ಚದುರದಂತೆ, (ಚದುರಿಹೋಗದಂತೆ), ಶೆಯ್ಯಾಯ್ செய்யாய் = ಕೃಪೆಮಾಡು, ಇದುವೇ இதுவே = ಇದೇಯೇ, ಇದು ಆಗಿಲ್ இதுவாகில் = ಇದು ಆದರೆ, (ಹೀಗೆಯೇ ನಡೆಯುವುದಾದರೆ), ಕೊನ್ದು ಆರ್ கொந்து ஆர் = ಗೊಂಚಲು ತುಂಬಿರುವ (ಗೊಂಚಲುಗೊಂಚಲಾಗಿರುವ), ಕಾಯಾವಿನ್ காயாவின் = ಅಗಸೆಯ, ಕೊೞು கொழு = ಸುಂದರವಾದ, ಮಲರ್ மலர் = ಹೂವಿನ, ತಿರುನಿಱತ್ತ திருநிறத்த = ದಿವ್ಯವಾದ ಬಣ್ಣದ, ಎನ್ದಾಯ್ எந்தாய் = ನನ್ನ ತಂದೆಯೇ, ಯಾನ್ யான் = ನಾನು, ಉನ್ನೈ உன்னை = ನಿನ್ನನ್ನು, ಎಙ್ಗು ವನ್ದು எங்கு வந்து = ಎಲ್ಲಿ ಬಂದು, ಅಣುಗಿಱ್ಪನೇ அணுகிற்பனே = ಹತ್ತಿರ ಸೇರಲಿ?

ಬಂದಹಾಗೆಯೇ ಬಂದು, ನನ್ನ ಮನಸ್ಸನ್ನು ಚದುರಿಹೋಗದಂತೆ ಕೃಪೆಮಾಡು. ಹೀಗೆಯೇ ನಡೆಯುವುದಾದರೆ, ಗೊಂಚಲು ಗೊಂಚಲಾಗಿರುವ ಸುಂದರವಾದ

ಆನೆಯ ದುಃಖವ ದಿವ್ಯವಾದ [redacted] ಬಣ್ಣದ ನನ್ನ ತಂದೆಯೇ, ನಾನು ನಿನ್ನನ್ನು ಎಲ್ಲಿ ಬಂದು ಹತ್ತಿರ ಸೇರಲಿ? (5)

ಆಳ್ವಾರರು ಹೇಳುತ್ತಾರೆ: ಸುಂದರವಾದ ಅನೇಕ ರೂಪಗಳ ಆಕರ್ಷಕವಾದ ಬಣ್ಣವುಳ್ಳ ಭಗವಂತ, ನನ್ನ ಆತ್ಮೀಯನಾದ ಭಕ್ತನಿಗೆ ನೀನು ಬೇಗ ಬಂದು ಅವರನ್ನು ರಕ್ಷಿಸಿದಂತೆಯೇ ನನ್ನ ಬಳಿಗೂ ಬಂದು, ನನ್ನ ಮನಸ್ಸಿನ ಅಲೆದಾಟವನ್ನು ನೀಗಿಸಿ ಅದನ್ನು ನಿಶ್ಚಲಗೊಳಿಸು. ಅದಕ್ಕಾಗಿ ನೀನು ಅತ್ಯಲ್ಪಕಾಲ ಬಿಡದೆ ಮರೆಯಾದರೂ ನಿಂತಿರು. ಅದೇ ಇಲ್ಲದೆ, ನಿನ್ನನ್ನು ನಾನು ಶಾಶ್ವತವಾಗಿ ಸೇರುವುದಕ್ಕೆ ನಾನು ನಿನ್ನನ್ನು ಎಲ್ಲಿಗೆ ಬರಲಿ? ಎಲ್ಲಿ ಹುಡುಕಲಿ?

ಮನಸ್ಸಿನ ಚಂಚಲತೆ ಹೋಗದೆ ಭಗವದ್ಭಕ್ತಿ ಸ್ಥಿರವಾಗುವುದಿಲ್ಲ. ಆ ಚಂಚಲತೆ ಹೋಗುವುದಕ್ಕೆ ಭಗವಂತನ ಕೃಪೆಯೇ ಅವಶ್ಯ ಎಂದರ್ಥವಾಯಿತು.

6. கிற்பன் கில்லேன் என்றிலன் முன நாளால்,
அற்ப சாரங்களவை சுவைத்தகன்றொழிந்தேன்,
பற்பல்லாயிரம் உயிர்செய்த பரமா, நின்
நற்பொற் சோதித் தாள் நணுகுவதென்றுகொலோ.

ಕಿಱ್ಪನ್ ಕಿಲ್ಲೇನ್ ಎನ್ಱಿಲನ್ ಮುನ ನಾಳಾಲ್,
ಅಱ್ಪ ಸಾರಙ್ಗಳವೈ ಸುವೈತ್ತಗನ್ಱೊೞಿನ್ದೇನ್,
ಪಱ್ಪಲ್ಲಾಯಿರಮ್ ಉಯಿರ್ ಶೆಯ್ದ ಪರಮಾ, ನಿನ್
ನಱ್ಪೊಱ್ ಶೋದಿತ್ತಾಳ್ ನಣುಗುವದೆನ್ಱುಕೊಲೋ.

ಕಿಱ್ಪನ್ கிற்பன் = ಒಳ್ಳೆಯದನ್ನು ಮಾಡುವೆ (ಪುಣ್ಯ ಮಾಡುವೆ), ಕಿಲ್ಲೇನ್ கில்லேன் = ಕೆಟ್ಟದ್ದನ್ನು ಮಾಡುವೆ (ಪಾಪ ಮಾಡುವೆ), ಎನ್ಱಿಲನ್ (ನಾಳಾಲ್) நாளால் (நாளாய்) ~~இன்று~~ இலன் = ಎಂದು ಇಲ್ಲ, ಮುನ ನಾಳ್ (முன நாள்) = ಹಿಂದಿನ ಕಾಲದಲ್ಲಿ, ಅಱ್ಪಮ್ அற்பம் = ಅಲ್ಪವಾದ, ಸಾರಙ್ಗಳ್ சாரங்கள் = ವಿಷಯಗಳು, ಅವೈ அவை = ಅವು, ಸುವೈತ್ತು சுவைத்து = ಅನುಭವಿಸಿ, ಅಗನ್ಱು அகன்று = ಅಗಲಿ, ಒೞಿನ್ದೇನ್ ஒழிந்தேன் = ಹೋಲಾಗಿದೆ, ಉಯಿರ್ ಪಱ್ ಪಲ್ ಆಯಿರಮ್ பல்பல் ஆயிரம் = ಹಲಹಲವು ಸಾವಿರ, ಪರಮಾ பரமா = ಉಯಿರ್ உயிர் = ಜೀವಗಳನ್ನು, ಶೆಯ್ದ செய்த = ಸೃಷ್ಟಿಸಿದ, ಪರಮ ಪವಿತ್ರನೇ (ಪರಮಪುರುಷನೇ), ನಿನ್ நின் = ನಿನ್ನ, ನಲ್ ಪೊನ್ ಶೋದಿ நல் பொன் சோதி = ಉತ್ತಮ ಚಿನ್ನದ (ಶುದ್ಧ ಚಿನ್ನದ) ಪ್ರಕಾಶವುಳ್ಳ, ತಾಳ್ தாள் = ಅಡಿಯನ್ನು, ನಣುಗುವದು நணுகுவது = ಸೇರುವುದು, ಎನ್ಱುಕೊಲೋ என்றுகொலோ = ಎಂದಿಗೋ.

Garani Srinivasan

ಹಿಂದಿನ ಕಾಲದಲ್ಲಿ (ನಾನು) ಪುಣ್ಯವನ್ನು ಮಾಡುವೆನು ಎಂದಿಲ್ಲ, ಪಾಪವನ್ನು ಮಾಡುವೆನು ಎಂದಿಲ್ಲ. ಅಲ್ಪವಾದ ವಿಷಯಗಳನ್ನು ಅನುಭವಿಸಿ ಅವುಗಳನ್ನು ಬಿಟ್ಟು ಕಳೆಲಾಗಿದೆ, ಹಲಹಲವು ಸಾವಿರ ಜೀವಗಳನ್ನು ಸೃಷ್ಟಿಸಿದ ಪರಮಪುರುಷನೇ, ನಿನ್ನ ಶುದ್ಧ (6)
ಚಿನ್ನದ ಕೋಳ್ಕೆಯ ಕಿರುವಡಿಯನ್ನು ಸೇರುವುದು ಅದೆಂದಿಗೋ!

"ಕಿಣಾವಿನ್ ಕಿಲ್ಲೇನ್ ಎನ್ಱಿಲನ್ ಮುನನಾಳಾಲ್" — ಹಿಂದಿನ ಕಾಲದಿಂದಲೂ ಕೇಳಿದ ಹಿರಿಯರು ಬೋಧಿಸಿದ 'ಒಳ್ಳೆಯನ್ನು ಮಾಡುವುದು, ಕೆಟ್ಟದ್ದನ್ನು ಬಿಡುವುದು' ಎಂಬುದನ್ನು ನಾನು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಆದ್ದರಿಂದ, ನಾನು ಪಾಪಮಾಡಿದೆನೋ, ಪುಣ್ಯಮಾಡಿದೆನೋ ನನಗೆ ಅರಿವಿಲ್ಲ.

"ಅಱಾವ ಕಾರಣ್ಗಳ್ವೈ ಕುವ್ವಿತ್ತು ಅದನಾಲ್ ಒೞಿನ್ದೇನ್" — ಅಲ್ಪವೂ ಸಾರವಿಲ್ಲದ ವಿಷಯಗಳು ಆದ ಪ್ರಾಪಂಚಿಕ ವಿಷಯಗಳಲ್ಲಿ ಬಿದ್ದು, ಅವುಗಳನ್ನು ರುಚಿ ನೋಡಿ, ಅನುಭವಿಸಿ, ಬೇಜಾರು ಬಿಟ್ಟುಕೊಂಡು, ಅವುಗಳನ್ನು ಕಳಲಗಿಸಿಕೊಂಡಿದ್ದೇನೆ.

ಆಳ್ವಾರರು ಹೇಳುತ್ತಾರೆ! ಪರಮಪುರುಷನೇ, ನೀನು ಅನೇಕ ಕೋಟಿ ಜೀವರಾಶಿಗಳನ್ನು ಸೃಷ್ಟಿಸಿದ್ದೀ. ಅವುಗಳಲ್ಲಿ ನಾನೊಬ್ಬ. ನನ್ನನ್ನು ಸೃಷ್ಟಿಸಿದ ಕಾಲದಿಂದಲೂ ನಾನು ಒಳ್ಳೆಯದನ್ನು ಮಾಡಿದ್ದೇನೋ ಕೆಟ್ಟದ್ದನ್ನು ಮಾಡಿದ್ದೇನೋ ನನಗೆ ಅರಿವಿಲ್ಲ. ಆದರೆ, ಅಲ್ಪವಿಷಯಗಳಾದ ಪ್ರಾಪಂಚಿಕ ವಿಷಯಗಳಲ್ಲಿ ಸಿಕ್ಕಿಬಿದ್ದು, ಅವುಗಳನ್ನು ಅನುಭವಿಸುತ್ತ, ಬೇಸರಗೊಳ್ಳುತ್ತಾ ಬಂದೆ. ನಿನ್ನ ಕಿರುವಡಿಗಳನ್ನು ಕುರಿತು ಸ್ವಲ್ಪವಾದರೂ ಯೋಚಿಸಲಿಲ್ಲ; ಅವುಗಳನ್ನು ಪಡೆದುಕೊಳ್ಳಬೇಕೆಂದು ಆಸೆಯೂ ಇಲ್ಲ. ಈಗಲಾದರೋ, ನಿನ್ನ ಕೃಪೆಯಿಂದ, ನಿನ್ನ ಕಿರುವಡಿಗಳನ್ನು ಸೇರಬೇಕೆಂಬ ಉತ್ಕಟವಾದ ಆಸೆಯುಂಟಾಗಿದೆ. ಆದ್ದರಿಂದ ನಿನ್ನಲ್ಲೀಗ ಬೇಡುತ್ತಿರುವುದು. ನನಗೆ ನಿನ್ನ ಶುದ್ಧ ಚಿನ್ನದಂತೆ ಹೊಳೆಯುವ ದಿವ್ಯ ಕಿರುವಡಿಗಳನ್ನು ಪಡೆದುಕೊಳ್ಳುವ ಭಾಗ್ಯ ಅದೆಂದಿಗೆ ಬರುವುದೋ?

7. எஞ்ஞான்று நாமிருந்திருந்து இரங்கிநெஞ்சே,
மெய்ஞ்ஞானமின்றி வினையியல் பிறப்பழுந்தி,
எஞ்ஞான்றுமெங்கும் ஒழிவறநிறைந்துநின்ற,
மெய்ஞ்ஞானச் சோதிக் கண்ணனை மேவுதுமே.

ಎಜ್ಞಾನ್ಱು ನಾಮಿರುನ್ದಿರುನ್ದು ಇರಙ್ಗಿನೆಂಜೇ,
ಮೆಯ್ಞಾನಮಿನ್ಱಿ ವಿನೈಯಿಯಲ್ ಪಿಱಪ್ಪೞುನ್ದಿ,
ಎಜ್ಞಾನ್ಱುಮೆಙ್ಗುಮ್ ಒೞಿವಱನಿಱೈನ್ದುನಿನ್ಱ,
ಮೆಯ್ಞಾನಚ್ಚೋದಿಕ್ ಕಣ್ಣನೈ ಮೇವುದುಮೇ.

ಎಞ್ಞಾನ್ಱು எஞ்ஞான்று = ಎಷ್ಟು ಕಾಲ, ನಾಮ್ நாம் = ನಾವು,
ಇರುನ್ದು ಇರುನ್ದು இருந்து இருந்து = ಹೀಗೆಯೇ ಇದ್ದುಕೊಂಡು, ಇರಙ್ಗಿ இரங்கி = ವ್ಯಥೆಪಡುತ್ತಾ, ನೆಞ್ಜೇ நெஞ்சே = ಮನಸ್ಸೇ, ಮೆಯ್ ಞಾನಮ್ ಇನ್ಱಿ மெய்ஞ்ஞானம் இன்றி = ನಿಜವಾದ ಜ್ಞಾನವಿಲ್ಲದೆ, ವಿನೈ ಇಯಲ್ வினையியல் = ಪಾಪಸ್ವಭಾವದ, ಪಿಱಪ್ಪು பிறப்பு = ಜನ್ಮಗಳಲ್ಲಿ, ಅೞುನ್ದಿ அழுந்தி = ಮುಳುಗಿ, ಎಞ್ಞಾನ್ಱುಮ್ எஞ்ஞான்றும் = ~~ಎಲ್ಲ ಕಾಲ~~ ಎಲ್ಲ ಕಾಲಗಳಲ್ಲಿ, ಎಙ್ಗುಮ್ எங்கும் = ಎಲ್ಲೆಲ್ಲಿಯೂ, ಒೞಿವು ಅಱ ஒழிவு அற = ಅವಕಾಶಕ್ಕೆ ~~ಎಡೆ~~ ಎಡೆಯಿಲ್ಲದಂತೆ (ಪರಿಪೂರ್ಣವಾಗಿ), ನಿಱೈನ್ದು ನಿನ್ಱ நிறைந்து நின்ற = ತುಂಬಿಕೊಂಡು ಇರುವ, ಮೆಯ್ ಞಾನಚ್ ಚೋದಿ மெய்ஞ்ஞானச் சோதி = ಸತ್ಯಜ್ಞಾನಜ್ಯೋತಿಯಾದ, ಕಣ್ಣನೈ கண்ணனை = ಆಕರ್ಷಕಸ್ವಾಮಿಯನ್ನು, ಮೇವುದುಮೇ மேவுதுமே = ಸೇರಬಲ್ಲೆವು?

ಮನಸ್ಸೇ, ಎಷ್ಟು ಕಾಲ ನಾವು ಹೀಗೆಯೇ ಇದ್ದುಕೊಂಡು ವ್ಯಥೆಪಡುತ್ತಾ, ನಿಜವಾದ ಜ್ಞಾನವಿಲ್ಲದ, ಪಾಪಸ್ವಭಾವದ ಜನ್ಮಗಳಲ್ಲಿ ಮುಳುಗಿ, ಎಲ್ಲ ಕಾಲದಲ್ಲಿ ಎಲ್ಲೆಡೆಯಲ್ಲಿ ಪರಿಪೂರ್ಣವಾಗಿ ತುಂಬಿಕೊಂಡು ಇರುವ ಸತ್ಯಜ್ಞಾನಜ್ಯೋತಿಯಾದ ಆಕರ್ಷಣೆಯಾದ ಭಗವಂತನನ್ನು ಸೇರುವುದು? (7)

ಹಿಂದಿನ ಪಾಶುರಗಳಲ್ಲಿ ಭಗವಂತನ ತಿರುವಡಿಗಳನ್ನು ಸೇರುವುದು ಎಂದಿಗೆ ಎಂಬ ಹಂಬಲವನ್ನು ಹೇಳಿಕೊಳ್ಳಲಾಯಿತು. ಈಗ, ಅದೇ ವಿಷಯವನ್ನು ಇನ್ನಷ್ಟು ವಿಶದಪಡಿಸಲಾಗುತ್ತದೆ.

ಆಳ್ವಾರರು ಹೇಳುತ್ತಾರೆ: ಮನಸ್ಸೇ, ಎಷ್ಟು ಕಾಲ ನಾವು ಹೀಗೆಲ್ಲಾ ಪಾಪಮಾಡುವ ಅಜ್ಞಾನಿಗಳಾಗಿ, ನಿಜವಾದ ಜ್ಞಾನವನ್ನು ತಿಳಿದುಕೊಳ್ಳದವರಾಗಿ, ಪಾಪಸ್ವಭಾವದ ಜನ್ಮಗಳನ್ನೆತ್ತುತ್ತಾ, ಬಿದ್ದು ಹೊರಳುತ್ತಿರುವುದು? ಸತ್ಯಜ್ಞಾನಸ್ವರೂಪಿಯೂ, ತೇಜೋಮಯನೂ, ಸರ್ವವ್ಯಾಪಿಯೂ, ಅತ್ಯಾಕರ್ಷಕನೂ, ಆದ ಭಗವಂತನ ಸಾನ್ನಿಧ್ಯವನ್ನು ಪಡೆದುಕೊಳ್ಳಬೇಡವೇ? ಅದು ಎಂದಿಗೆ ಲಭಿಸುವುದೋ!

ಇಡೀ ಜನ್ಮಜೀವನ ಪಾಪಪೂರ್ಣವಾದರೂ, ಅಜ್ಞಾನವೇ ಇದಕ್ಕೆ ಕಾರಣವಾದರೂ, ~~ನಿಜವಾದ ಜ್ಞಾನವಾದ~~ ಭಗವಂತನನ್ನು ಆದಷ್ಟು ಬೇಗ ಪಡೆದುಕೊಳ್ಳಬೇಕೆಂದು, ಅದಕ್ಕೆ ತಕ್ಕ ಸಾಧನೆಗಳನ್ನು ನಡೆಸಬೇಕೆಂದು ತಿಳಿಯುವುದು ಒಳಿತು. ಮನುಷ್ಯನಿಗೆ ಈ ಜ್ಞಾನೋದಯವು ಉಂಟಾದರೆ, ಅವನ ಮುಂದಿನ ಬಾಳ್ವೆಯು ಮಾರ್ಗ ಪ್ರಯತ್ನದಿಂದ ಸುಗಮವಾಗುತ್ತದೆ ಎಂದು ಹೇಳಿದ್ದಾರೆ.

8. மேவுதுன்பவினைகளை விடுத்துமிலேன்,
ஓவுதலின்றி உன் கழல் வணங்கிற்றிலேன்,
பாவுதொல் சீர்க்கண்ணா என் பரஞ்சுடரே,
கூவுகின்றேன் காண்பான் எங்கெய்தக்கூவுவனே.

ಮೇವು ತುನ್ಬವಿನೈಗಳೈ ವಿಡುತ್ತುಮಿಲೇನ್,
ಓವುದಲಿನ್ರಿ ಉನ್ ಕಳಲ್ ವಣಙ್ಗಿತ್ರಿಲೇನ್,
ಪಾವುದೊಲ್ ಶೀರ್ ಕ್ಕಣ್ಣಾ ಎನ್ ಪರಂಜುಡರೇ,
ಕೂವುಗಿನ್ರೇನ್ ಕಾಣ್ಬಾನ್ ಎಙ್ಗೆಯ್ದುಕ್ಕೂವುವನೇ.

ಮೇವು மேவு = ಅಂಟಿಕೊಂಡಿರುವ, ತುನ್ಬಮ್ துன்பம் = ದುಃಖಗಳನ್ನು, ವಿನೈಗಳೈ வினைகளை = (~~[illegible]~~) ಕರ್ಮಗಳನ್ನು, ವಿಡುತ್ತುಮ್ ಇಲೇನ್ விடுக்கும் இலேன் = ಬಿಟ್ಟು ಇಲ್ಲ, ಓವುದಲ್ ಇನ್ರಿ ஓவுதல் இன்றி = ಎಡೆಬಿಡದೆ, ಉನ್ ಕಳಲ್ உன் கழல் = ನಿನ್ನ ಪಾದಗಳನ್ನು, ವಣಙ್ಗಿತ್ರು ಇಲೇನ್ வணங்கிற்று இலேன் = ನಮಸ್ಕರಿಸಲಿಲ್ಲ, ಪಾವು பாவு = ಎಲ್ಲೆಡೆಯೂ ವ್ಯಾಪಿಸಿರುವ, ತೊಲ್ தொல் = ಸಹಜವಾದ (ಸ್ವಾಭಾವಿಕವಾದ), ಶೀರ್ சீர் = ಶ್ರೇಷ್ಠಗುಣಗಳುಳ್ಳ, ಕಣ್ಣಾ கண்ணா = ಶ್ರೀಕೃಷ್ಣನೇ, ಎನ್ ಪರಂಜುಡರೇ என் பரஞ்சுடரே = ನನ್ನ ಪರಂಜ್ಯೋತಿಯೇ, ಕೂವುಗಿನ್ರೇನ್ கூவுகின்றேன் = ಕೂಗಿ ಕರೆಯುತ್ತಿದ್ದೇನೆ, ಕಾಣ್ಬಾನ್ காண்பான் = (ನಿನ್ನನ್ನು) ನೋಡುವುದಕ್ಕಾಗಿ, ಎಙ್ಗು எங்கு = ಎಲ್ಲಿ, ಎಯ್ದ எய்த = ಬಂದು ಸೇರುವುದಕ್ಕಾಗಿ, ಕೂವುವನೇ கூவுவனே = ಕೂಗಲಿ!

ಅಂಟಿಕೊಂಡಿರುವ ದುಃಖಗಳನ್ನು ಕರ್ಮಗಳನ್ನು ಬಿಟ್ಟು ಇಲ್ಲ. ಎಡೆಬಿಡದೆ ನಿನ್ನ ತಿರುವಡಿಗಳನ್ನು ನಮಸ್ಕರಿಸಲೂ ಇಲ್ಲ. ಎಲ್ಲೆಲ್ಲಿಯೂ ವ್ಯಾಪಿಸಿರುವ ಸ್ವಾಭಾವಿಕವಾದ ಶ್ರೇಷ್ಠಗುಣಗಳನ್ನುಳ್ಳ ಶ್ರೀಕೃಷ್ಣನೇ, ನನ್ನ ಪರಂಜ್ಯೋತಿಯೇ, ನಿನ್ನನ್ನು ನೋಡುವುದಕ್ಕಾಗಿ, ಸೇರುವುದಕ್ಕಾಗಿ ಎಲ್ಲಿ ಬಂದು ಕೂಗಿ ಕರೆಯುತ್ತಿದ್ದೇನೆ. ... ಕೂಗಲಿ! (8)

ಭಗವಂತನನ್ನು ಸೇರಲು ತನ್ನ ಪ್ರಯತ್ನಗಳು ಅವಶ್ಯಕ ಎಂದು ಹಿಂದಿನ ಪಾಶುರದಲ್ಲಿ ಹೇಳಲಾಯಿತು. ಇಲ್ಲಿ ತಮ್ಮಿಂದ ಅಂಥ ಪ್ರಯತ್ನಗಳು ನಡೆಯಲಿಲ್ಲ ಎಂದು ಆಳ್ವಾರರು ಹೇಳುತ್ತಿದ್ದಾರೆ.

ಆಳ್ವಾರರು ಹೇಳುತ್ತಾರೆ: ಭಗವಂತ, ~~[illegible]~~ ಜನ್ಮಜನ್ಮಕ್ಕೂ ನನ್ನನ್ನು ಅಂಟಿಬಂದಿರುವ ದುಃಖಕೊಟ್ಟಗಳನ್ನು, ಪಾಪಕರ್ಮಗಳನ್ನು ನಾನು ಬಿಟ್ಟಿಲ್ಲ. ನಿನ್ನನ್ನು ಎಡೆಬಿಡದಂತೆ ಭಜಿಸಿ ಪೂಜಿಸಲೂ ಇಲ್ಲ. ಆದ್ದರಿಂದ ನನಗೆ ಸಂಜ್ಞಾನವೂ, ಸಾಧನೆಯ ಅನುಷ್ಠಾನವೂ ಇಲ್ಲ. ನೀನಾದರೋ ದಿವ್ಯಕಲ್ಯಾಣಗುಣಗಳಿಂದ ತುಂಬಿದವನು

Garani Srinivasan

ಕರುಣಾಮಯನಾದ ನಿನ್ನ ಶ್ರೇಷ್ಠ ಗುಣಗಳು ಎಲ್ಲೆಲ್ಲೂ ವ್ಯಾಪಿಸಿರುತ್ತವೆ. ನೀನು ಪರಿಪೂರ್ಣನಾದ ಜ್ಞಾನದಿಂದ ಕೂಡಿ ಬೆಳಗುವವನು. ಪರಮ ನೀಚನಾದ, ಅಯೋಗ್ಯನಾದ ನನ್ನನ್ನು ಉದ್ಧರಿಸೆಂದು ನಿನ್ನನ್ನು 'ಅರ್ಚಾವತಾರನೇ', 'ಪರಂಜ್ಯೋತಿಸ್ವರೂಪಿಯೇ' ಎಂದು ಕೂಗಿ ಕರೆಯುತ್ತಿದ್ದೇನೆ. ನಿನ್ನೊಡನೆ ನಾನು ಕೂಡಿಕೊಳ್ಳಬೇಕು. ನಿನ್ನನ್ನು ಕಣ್ಣಾರ ನೋಡಬೇಕು. ಇದಕ್ಕಾಗಿ ನಾನು ಎಲ್ಲಿ ಬಂದು, ನಿನ್ನನ್ನು ಕಾಣಲಿ? ನೀನೇ ನನಗೆ ದಾರಿಯನ್ನು ತೋರಿಸಿಕೊಡಬೇಕು.

ಜಪ, ತಪ, ಧ್ಯಾನ ಅನುಷ್ಠಾನಗಳೆಲ್ಲ ಕಷ್ಟದಿಂದ ಸಾಧಿಸತಕ್ಕವು. ಜ್ಞಾನವನ್ನು ಮನಸ್ಸಿಂ ... ಆ ಮಾರ್ಗದಲ್ಲೇ ಜ್ಞಾನವಂತನನ್ನು ಕೇಳಿ ತಿಳಿದುಕೊಂಡು ಸುಲಭವೂ ಸರಳವೂ ಆದದ್ದು ನೋಡಬೇಕೆಂಬುದು ಇಲ್ಲಿಯ ಧ್ವನಿ ಎನಿಸುತ್ತದೆ.

9. கூவிக்கூவிக் கொடுவினைத் தூற்றுள் நின்று,
பாவியேன் பலகாலம் வழிதிகைத்தலமருகின்றேன்,
மேவியன்றாநிரை காத்தவன் உலகமெல்லாம்,
தாவியவம்மானை எங்கினித் தலைப்பெய்வனே.

ಕೂವಿಕ್ಕೂವಿಕ್ ಕೊಡುವಿನೈತ್ ತೂಱ್ಱುಳ್ ನಿನ್ಱು,
ಪಾವಿಯೇನ್ ಪಲಕಾಲಮ್ ವಳಿತಿಗೈತ್ತಲಮರುಗಿನ್ಱೇನ್,
ಮೇವಿಯನ್ಱಾನಿರೈ ಕಾತ್ತವನ್ ಉಲಗಮೆಲ್ಲಾಮ್,
ತಾವಿಯವಮ್ಮಾನೈ ಎಙ್ಗಿನಿತ್ ತಲೈಪ್ಪೆಯ್ವನೇ.

ಕೂವಿ ಕೂವಿ கூவி கூவி = ಕೂಗಿ ಕೂಗಿ, ಕೊಡುವಿನೈ கொடுவினை = ಕ್ರೂರ ಪಾಪಗಳ, ತೂಱ್ಱುಳ್ தூற்றுள் = ಕೂಪದಲ್ಲಿ (ರಂಧ್ರದಲ್ಲಿ). ನಿನ್ಱು நின்று = ಇರುವ, ಪಾವಿಯೇನ್ பாவியேன் = ಪಾಪಿಯಾದ ನಾನು, ಪಲಕಾಲಮ್ பலகாலம் = ಅನೇಕ ವರ್ಷಗಳು, (ಬಹುಕಾಲ), ವಳಿ ತಿಗೈತ್ತು வழிதிகைத்து = ದಾರಿ ಕಾಣದೆ ಅಲೆದಾಡಿ, ಅಲಮರುಗಿನ್ಱೇನ್ அலமருகின்றேன் = ವ್ಯಥೆ (ಸಂಕಟ) ಪಡುತ್ತಿದ್ದೇನೆ, ಮೇವಿ மேவி = ಸೇರಿಯೂ, ಅನ್ಱು அன்று = ಅಂದು, ಆನಿರೈ ಕಾತ್ತವನ್ ஆநிரை காத்தவன் = ಹಸುಗಳ ಮಂದೆಗಳನ್ನು ಕಾಪಾಡಿದವನೂ, ಉಲಗಮ್ ಎಲ್ಲಾಮ್ உலகம் எல்லாம் = ಲೋಕಗಳೆಲ್ಲವನ್ನು, ತಾವಿಯ தாவிய = ಅಳೆದುಕೊಂಡವನೂ ಆದ, ಅಮ್ಮಾನೈ அம்மானை = ಸ್ವಾಮಿಯನ್ನು, ಎಙ್ಗು எங்கு = ಎಲ್ಲಿ, ಇನಿ இனி = ಇನ್ನು, ತಲೈಪ್ಪೆಯ್ವನೇ தலைப்பெய்வனே = ಬಳಿಸಾರುವೆನೋ!

ಕೂಗಿ ಕೂಗಿ, ಕ್ರೂರ ಪಾಪಗಳ ಕೂಪದಲ್ಲಿ ಬಿದ್ದಿರುವ ಪಾಪಿಯಾದ ನಾನು ಬಹುಕಾಲದಿಂದಲೂ ದಾರಿ ಕಾಣದೆ ಅಲೆದಾಡುತ್ತಾ ಸಂಕಟಪಡುತ್ತಿದ್ದೇನೆ.

ಅಂದು ಆಶೆಯಿಂದ ಆಶ್ರಿತಮಂದಿಗಳನ್ನು ರಕ್ಷಿಸಿದವನೂ, ಎಲ್ಲಾ ಲೋಕಗಳನ್ನು ಅಳೆದುಕೊಂಡವನೂ ಆದ ಸ್ವಾಮಿಯನ್ನು ಇನ್ನು ಎಲ್ಲಿ (ಹೇಗೆ ಹೇಗೆ) ಬಿಡಬಲ್ಲೆನು? (9)

ದಾಸನಾದ ಆಳ್ವಾರು ಅಳುತ್ತಿರುವ ಕರ್ಮಕ್ಕೆ ಆ ಸ್ವಾಮಿಯೇ ದಾರಿಯನ್ನು ತೋರಿ ಬಿಡಿಸೆಂದು ಅಂಗಲಾಚಿದ್ದು ಹಿಂದಿನ ಪಾಶುರದಲ್ಲಿ. ಅದೇ ಅಂಗಲಾಚಿಕೆ ಕಾಲಾಯ ಕದಲ್ಲೂ ಮುಂದುವರಿಯುತ್ತದೆ.

ಆಳ್ವಾರರು ಹೇಳುತ್ತಾರೆ: ನಾನು ಈ ಸಂಸಾರವೆಂಬ ಪಾಪಕೂಪದಲ್ಲಿ ಬಿದ್ದು ಎಷ್ಟೋ ಕಾಲದಿಂದಲೂ ಕಂಗಾಲಾಗುತ್ತಿದ್ದೇನೆ. ಮಹಾಪಾಪಿಯಾಗಿದ್ದೇನೆ. ಹಿಂದೆ ಆಪತ್ತಿನಲ್ಲಿ ಸಿಕ್ಕಿಬಿದ್ದ ಆಶ್ರಿತಮಂದಿಗಳನ್ನು ಸ್ವಾಮಿಯು ರಕ್ಷಿಸಿದ ಕಾಲದಲ್ಲೂ (ಶ್ರೀಕೃಷ್ಣಾವತಾರ ಕಾಲದಲ್ಲೂ), ಮತ್ತು ಭೂಮಿಯನ್ನು ಇತರ ಮೇಲಿನ ಲೋಕಗಳನ್ನು ಸ್ವಾಮಿಯು ಅಳೆದುಕೊಂಡ ಕಾಲದಲ್ಲೂ (ವಾಮನ-ತ್ರಿವಿಕ್ರಮಾವತಾರಗಳ ಕಾಲದಲ್ಲೂ) ನಾನು ಸ್ವಾಮಿಯನ್ನು ಕಂಡುಕೊಂಡು ಅವನ ಶ್ರೀಪಾದಗಳನ್ನು ಆಶ್ರಯಿಸಲಿಲ್ಲ. ಈಗ ನಾನು ಅವನಿಗಾಗಿ ಎಷ್ಟೆಂದು ಕೂಗಲಿ? ಎಲ್ಲೆಲ್ಲಿ ಹುಡುಕಲಿ? ಎಲ್ಲಿ ಹೋಗಲಿ? ಅವನನ್ನು ನಾನು ಸೇರಿಕೊಳ್ಳಬಲ್ಲೆ?

ಶ್ರೀಕೃಷ್ಣಾವತಾರದಲ್ಲಿ ಸ್ವಾಮಿಯು ತೋರಿದ ಪ್ರೇಮ (ವಾತ್ಸಲ್ಯ) ವನ್ನೂ, ವಾಮನ-ತ್ರಿವಿಕ್ರಮಾವತಾರಗಳಲ್ಲಿ ಅವನು ತೋರಿದ ಕೃಪಾನುಗ್ರಹವನ್ನೂ ಇಲ್ಲಿ ಜ್ಞಾಪಿಸಲಾಗಿದೆ ಎನ್ನಬಹುದು.

10. களைப்பெய் காலம் நமன்தமர் பாசம் விட்டால்,
அலைப்பூணுண்ணும் அவ்வல்லலெல்லாமகல,
கலைப்பல்ஞானத்து என் கண்ணனைக் கண்டுகொண்டு,
நிலைப்பெற்றென் நெஞ்சம் பெற்றது நீடுயிரே.

ಕಳೈಪ್ಪೆಯ್ ಕಾಲಮ್ ನಮನ್‌ತಮರ್ ಪಾಶಮ್ ವಿಟ್ಟಾಲ್,
ಅಲೈಪ್ಪೂಣುಣ್ಣುಮ್ ಅವ್ವಲ್ಲಲೆಲ್ಲಾಮ್ ಅಹಲ,
ಕಲೈಪ್ಪಲ್ ಜ್ಞಾನತ್ತು ಎನ್ ಕಣ್ಣನೈಕ್ ಕಣ್ಡುಕೊಣ್ಡು,
ನಿಲೈಪ್ಪೆತ್ರೆನ್ ನೆಂಜಮ್ ಪೆತ್ರದು ನೀಡುಯಿರೇ.

ಕಳೈಪ್ಪೆಯ್ களைப்பெய் = ದಣಿಸುವ, ಕಾಲಮ್ காலம் = ಕಾಲದಲ್ಲಿ, ನಮನ್‌ತಮರ್ நமன்தமர் = ಯಮಭಟರು, ಪಾಶಮ್ பாசம் = ಕಾಲಪಾಶವನ್ನು (ಯಮಪಾಶವನ್ನು), ವಿಟ್ಟಾಲ್ விட்டால் = ಬೀಸಿದರೆ, ಅಲೈಪ್ಪೂಣ್ ಅலைப்பூண் = ಕೊರಗಿ ಸಂಕಟಪಡುವುದನ್ನು, ಉಣ್ಣುಮ್ உண்ணும் = ಅನುಭವಿಸುವ, ಅವ್ವಲ್ಲಲ್ ಎಲ್ಲಾಮ್ அவ்வல்லல் எல்லாம்.

Garani Srinivasan

ಆ ಸಂಕಟವೆಲ್ಲವೂ, ಅಡಲ ಆಳಿ = ನೀಗಿಸಲು, ಕಲ್ವಿ ಆಳಿ = ಶಾಸ್ತ್ರಗ (ಕಲಿಸುವ),
ಳು, ಪಲ್ ಪಲ = ಹಲವಾರು, ಞಾನತ್ತು ಉಗಾಣಕ್ಕು = ಜ್ಞಾನಮೂರ್ತಿಯಾ
ದ, ಎನ್ ಕಣ್ಣನ್ ಗಣ ಕಣ್ಣಣ್ಣ = ನಮ್ಮ ಆಕರ್ಷಕನನ್ನು (ಕೃಷ್ಣನನ್ನು),
ಕಣ್ಡು ಕೊಣ್ಡು ಕಣ್ಡು ರಕಾಣ್ಡು = ಕಂಡುಕೊಂಡು (ಅರಿತುಕೊಂಡು),
ಎನ ನೆಂಜಮೇ ಗಣ ಉ
ನಿಲ್ಪ್ಪಿಟ್ಟು ನಿಹಿಪ ಪೆಪರ್ರು = ದೃಢವಾಯಿತು, ನೀಡು ನೋಡ =
ಉಂಚಮ = ನನ್ನ ಮನಸ್ಸು, ಪಿಟ್ರುಮ ಪೆಪರ್ರಕ್ಕು = ಪಡೆಯಿತು,
ನಿಶ್ಚಿಂತವನ್ನು, ಉಯಿರೇ ಉಯಿರ್ = ಆತ್ಮವೇ.

ಯಮಭಟರು ಸಮೀಪಿಸುವ ಕಾಲದಲ್ಲಿ, ಯಮಪಾಶವನ್ನು ಬೀಸಿದರೆ, ದೇಹ ಯಮಭಟರು ಸಮೀಪಿಸುವ ಕಾಲದಲ್ಲಿ ನಿಟ್ಟಿಸು ಬರುವ ಸಂಕಟವೆಲ್ಲವನ್ನು ನೀಗಿಸಲು ಹಲವಾರು ಸಂಕಟ ಪಡುವುದನ್ನು ಅನುಭವಿಸುವ ಆ ಸಂಕಟವೆಲ್ಲವನ್ನು ನೀಗಿಸಲು ಹಲವಾರು ಶಾಸ್ತ್ರಗಳು ಕಲಿಸುವ ಜ್ಞಾನಮೂರ್ತಿಯಾದ ನಮ್ಮ ಆಕರ್ಷಕನನ್ನು (ಕೃಷ್ಣನನ್ನು) ಅರಿತುಕೊಂಡು (ಕಂಡುಕೊಂಡು) ನನ್ನ ಮನಸ್ಸು ದೃಢವಾಯಿತು, ನನ್ನ ಆತ್ಮವು (10)
ನಿಶ್ಚಿಂತವನ್ನು ಪಡೆಯಿತು.

'ಭಗವಂತನನ್ನು ಎಂದಿಗೆ ಕಾಣುವೆನೋ, ಎಲ್ಲಿ ಕಾಣುವೆನೋ' ಎಂಬ ಬಂದಿನ ಪಾಶುರಗಳಲ್ಲಿ ಹೇಳಿದಂತ ಮನದ ಪ್ರಶ್ನೆಗೆ ಉತ್ತರವೋ ಎಂಬಂತಿದೆ ಈ ಪಾಶುರದ ವಿಷಯ.

ಆಳ್ವಾರರು ಹೇಳುತ್ತಾರೆ: ಹಲವಾರು ಶಾಸ್ತ್ರಗಳಿಂದ ನಿರೂಪಿಸಲ್ಪಡುವ ಮತ್ತು ಸ್ತುತಿಸಲ್ಪಡುವ ಆತ್ಮಾಕರ್ಷಕನಾದ ಜ್ಞಾನಸ್ವರೂಪಿಯಾದ ಭಗವಂತನನ್ನು ನಾನು ಕಂಡುಕೊಂಡ ಕಾರಣದಿಂದಲೇ, ಯಮಭಟರು ಬಂದು ತಮ್ಮ ಕಾಲಪಾಶವನ್ನು ಬೀಸಿ ಸೆಳೆಯುವ ಕಾಲದಲ್ಲಿ ಉಂಟಾಗುವ ಎಲ್ಲಾ ಬಗೆಯ ದುಃಖ ಸಂಕಟಗಳು ನನ್ನ ಆತ್ಮ ಕಷ್ಟದಲ್ಲೇ ನಿವಾರಣೆಯಾದವು. ನನ್ನ ಮನಸ್ಸು ದೃಢಗೊಂಡಿತು. ನನ್ನ ಆತ್ಮ ನಿಗೆ ನಿಶ್ಚಿಂತವುಂಟಾಯಿತು.

ಮನಸ್ಸು ದೃಢಗೊಳ್ಳುವುದಕ್ಕೆ ಜ್ಞಾನಸ್ವರೂಪಿಯಾದ ಭಗವಂತನ ಅಂತ ರ್ಯಾಗಚಿಂತ. ಬಳಿಕ ಭಗವತ್ಕೈಂಕರ್ಯದಲ್ಲಿ, ಭಗವದ್ಗುಣಾನುಭವದಲ್ಲಿ ಇಳಿಯೂ ಮುಳುಗಿ ಆನಂದಿಸುತ್ತಿರುವುದು. ದೇಹವನ್ನು ತ್ಯಜಿಸುವ ಕಾಲದಲ್ಲಿ ಬರುವ ಯಮಕಿಂಕರರ ಭಯಾನಕ ಬಾಧೆಯಾಗಲಿ ಆಗ ಇರುವುದಿಲ್ಲ. ದೇಹವನ್ನು ಸರಾಯವಾಗಿ ಆನಂದದಿಂದ ತ್ಯಜಿಸಿದ ಆತ್ಮ ಪರಮಪದವನ್ನು ಸೇರಿ, ಭಗವತ್ಸಾನ್ನಿಧ್ಯವನ್ನು ಪಡೆದುಕೊಳ್ಳುತ್ತದೆ. ಹೀಗೆ ಅದಕ್ಕೆ ನಿಶ್ಚಿಂತ ಲಭಿಸು ತ್ತದೆ. ಈ ಎಲ್ಲವೂ ನಡೆಯುವುದು ಭಗವಂತನನ್ನು ಕಂಡುಕೊಳ್ಳುವುದರಿಂದಲೇ.

ಅದನ್ನಾಗಿಯೇ ಆಳ್ವಾರರ (ಮತ್ತು ಭಕ್ತನಾದವನ) ಬಂದೇ ಸಮಾಧಾನ.

11. உயிர்களெல்லா வுலகமுமுடையவனை,
குயில்கொள் சோலைத் தென்குருகூர்ச் சடகோபன்,
செயிரில் சொல்லிசைமாலை ஆயிரத்துளிப்பத்தும்,
உயிரின் மேலாக்கை ஊனிடை யொழிவிக்குமே.

ಉಯಿರ್‌ಗಳೆಲ್ಲಾ ವುಲಗಮುಮುಡೈಯವನೈ,
ಕುಯಿಲ್ ಕೊಳ್ ಶೋಲೈತ್ ತೆನ್ ಕುರುಕೂರ್ಚ್ಚಡಗೋಪನ್,
ಶೆಯಿರಿಲ್ ಶೊಲ್ಲಿಶೈ ಮಾಲೈ ಆಯಿರತ್ತುಳಿಪ್ಪತ್ತುಮ್,
ಉಯಿರಿನ್ ಮೇಲಾಕ್ಕೈ ಊನಿಡೈಯೊಳಿವಿಕ್ಕುಮೇ.

ಉಯಿರ್‌ಗಳ್ உயிர்கள் = ಜೀವರುಗಳು (ಗಳನ್ನು) ಎಲ್ಲಾ ಉಲಗಮುಮ್ எல்லா உலகமும் = ಎಲ್ಲಾ ಲೋಕಗಳನ್ನೂ, ಉಡೈಯವನೈ உடையவனை = ಆಳುವವನನ್ನು, ಕುಯಿಲ್ ಕೊಳ್ குயில் கொள் = ಕೋಗಿಲೆಗಳು ತುಂಬಿರುವ, ಶೋಲೈ சோலை = ತೋಟಗಳುಳ್ಳ, ತೆನ್ ಕುರುಕೂರ್ தென் குருகூர் = ಸುಂದರವಾದ ತಿರುಕ್ಕುರುಕೂರಿನ, ಶಡಗೋಪನ್ சடகோபன் = ಶಠಗೋಪನು (ನಮ್ಮಾಳ್ವಾರರು), ಶೆಯಿರ್ ಇಲ್ செயிர் இல் = ದೋಷವಿಲ್ಲದ, ಶೊಲ್ சொல் = ಮಾತುಗಳಿಂದಲೂ, ಇಶೈ இசை = ಗಾನಮಾಧುರ್ಯದಿಂದಲೂ ಕೂಡಿದ, ಮಾಲೈ மாலை = ಮಾಲೆಯಾದ, ಆಯಿರತ್ತುಳ್ ஆயிரத்துள் = ಸಾವಿರದಲ್ಲಿ, ಇ ಪತ್ತುಮ್ இ பத்தும் = ಈ ಹತ್ತು ಪಾಶುರಗಳು, ಉಯಿರಿನ್ ಮೇಲ್ உயிரின் மேல் = ಜೀವದ ಮೇಲಿನ, ~~ಆಕ್ಕೈ ஆக்~~ ~~கை = ದೇಹದ~~, ಊನ್ ಇಡೈ ஊன் இடை = ಮಾಂಸದ, ಆಕ್ಕೈ ஆக்கை = ದೇಹವನ್ನು, ಒಳಿವಿಕ್ಕುಮೇ ஒழிவிக்குமே = ನಾಶ ಮಾಡುತ್ತದೆ.

ಎಲ್ಲಾ ಜೀವರುಗಳನ್ನೂ ಲೋಕಗಳನ್ನೂ ಆಳುವವನನ್ನು, ಕೋಗಿಲೆಗಳು ತುಂಬಿರುವ ಉದ್ಯಾನಗಳುಳ್ಳ ಸುಂದರವಾದ ತಿರುಕ್ಕುರುಕೂರಿನ ಶಠಗೋಪನು (ನಮ್ಮಾಳ್ವಾರರು) ದೋಷರಹಿತವಾದ ಮಾತುಗಳಿಂದಲೂ ಗಾನಮಾಧುರ್ಯದಿಂದಲೂ ಕೂಡಿದ ಸಾವಿರ ಪಾಶುರ ಮಾಲೆಯಲ್ಲಿ ಈ ಹತ್ತು ಪಾಶುರಗಳು ಜೀವದ ಮೇಲಿನ ಮಾಂಸದಿಂದ ಕೂಡಿದ ದೇಹವನ್ನು ನಾಶ ಮಾಡುತ್ತದೆ. (11)

ಈ ಹತ್ತು ಪಾಶುರಗಳಿಗೆ ಇದು ಫಲಶ್ರುತಿ. ತಿರುಕ್ಕುರುಕೂರಿನ ಮಹನೀಯರಾದ ಶ್ರೀ ಶಠಗೋಪರು (ನಮ್ಮಾಳ್ವಾರರು) ಹೇಳುತ್ತಾರೆ, ಈ

Garani Srinivasan

ಭಕ್ತಿ ಪಾಠಗಳಲ್ಲೂ ಕಾಣ್ಬರುವ ವಿಷಯವನ್ನು ಚೆನ್ನಾಗಿ ಅರಿತುಕೊಳ್ಳುವುದರ ಪ್ರಯೋಜನವೇನೆಂದು. ಭಗವಂತನನ್ನು ಕಾಣಬೇಕೆಂಬ ಹಂಬಲವನ್ನು ಹುಟ್ಟಿಸಿ ದು, ಅವನ ಅಸಂಖ್ಯಾತವಾದ ನಾನಾ ಸ್ವಭಾವಗಳನ್ನು ತಿಳಿಸಿ ಎಚ್ಚರಿಸಿ ಸುತ್ತ ಇರುವವನಿಗೆ, ಪ್ರಾಪಂಚಿಕ ದೋಷಗಳಾದರೂ ಅಂಟುವುದು ಹೇಗೆ? ಇದು ಲೋಕದಲ್ಲಿರುವ ಮಾತ್ರಕ್ಕೇ ಅವನಿಗೆ ಯಾವ ಬಗೆಯ ಕೊರತೆಯೂ ಉಂಟಾ ಗುವುದಿಲ್ಲ. [illegible] ಭಗವಚ್ಚಿಂತನವನ್ನು ಬಿಡದೆ ಕೊಳ್ಳುವುದಕ್ಕೆ ಅಡ್ಡಿಯಾಗದ, ಮಾಂಸ ಮಜ್ಜೆಗಳಿಂದ ತುಂಬಿದ ಈ ಪಂಚಭೂತಾತ್ಮಕವಾದ ದೇಹವನ್ನು ನಾಶಗೊಳಿಸು ವುದರಿಂದ, ಅವನ [illegible] ಅಸ್ತಿತ್ವವು, ~~[illegible]~~ ಪರಮಪದವು, ಭಗವತ್ಸಾಯುಜ್ಯವೂ [illegible] ಮಾಡುವುದಕ್ಕೆ ~~ಈ~~ ಭಕ್ತಿ ಪಾಠಗಳೇ ಸಾಧನವೆನ್ನುತ್ತಾರೆ ಲಭಿಸುವುದು. [illegible]

3.12.83.

[illegible]

— ೦ —

3.12.83

~~[illegible]~~ - ~~ತಿರುವಾಯ್ಮೊಳಿ~~ -
ತಿರುವಾಯ್ಮೊಳಿ - ಮೂರನೆಯ ದಶಕ - ಮೂರನೆಯ ತಿರುವಾಯ್ಮೊಳಿ
திருவாய்மொழி - மூன்றாம் பத்து - மூன்றாந் திருவாய்மொழி

3. ಒಳಿವಿಲ್ ಕಾಲಮ್ - ஒழிவில் காலம்

1. ஒழிவில் காலமெல்லாம் உடனாய் மன்னி,
வழுவிலா அடிமை செய்ய வேண்டும் நாம்,
தெழிகுரலருவித் திருவேங்கடத்து,
எழில் கொள் சோதி எந்தை தந்தை தந்தைக்கே.

ಒಳಿವಿಲ್ ಕಾಲಮೆಲ್ಲಾಮ್ ಉಡನಾಯ್ ಮನ್ನಿ,
ವಳುವಿಲಾ ಅಡಿಮೈ ಶೆಯ್ಯ ವೇಣ್ಡುಮ್ ನಾಮ್,
ತೆಳಿ ಕುರಲರುವಿ ತ್ತಿರುವೇಙ್ಗಡತ್ತು,
ಎಳಿಲ್ ಕೊಳ್ ಶೋದಿ ಎನ್ದೈ ತನ್ದೈ ತನ್ದೈಕ್ಕೇ.

ಒಳಿವು ಇಲ್ ஒழிவு இல் = ಅವಕಾಶವಿಲ್ಲದಂತೆ, ಕಾಲಮ್ ಎಲ್ಲಾಮ್ காலம் எல்லாம் = ಕಾಲವೆಲ್ಲವನ್ನೂ, ಉಡನ್ ಆಯ್ உடன் ஆய் = ಜೊತೆಯಲ್ಲೇ ಇರುತ್ತಾ, ಮನ್ನಿ மன்னி = ನಿತ್ಯವಾಗಿ (ಎಲ್ಲಾ ಅವಸ್ಥೆಗಳಲ್ಲಿಯೂ), ವಳು ಇಲಾ வழுவிலா = ದೋಷವಿಲ್ಲದ (ತಪ್ಪಿಲ್ಲದ, ಪರಿಶುದ್ಧವಾದ), ಅಡಿಮೈ அடிமை = ಕೈಂಕರ್ಯವನ್ನು (ದಾಸ್ಯವನ್ನು), ಶೆಯ್ಯವೇಣ್ಡುಮ್ செய்ய வேண்டும் = ಮಾಡಬೇಕು, ನಾಮ್ நாம் = ನಾವು, ಕುರಲ್ குரல் = ಧ್ವನಿಯು, (ಸ್ವರ ತೆಳಿ தெழி = ಸ್ಪಷ್ಟವಾದ (ತಿಳಿಯಾದ), ಅರುವಿ அருவி = ಬೆಟ್ಟದ ಝರಿಗಳುಳ್ಳ, ತಿರುವೇಙ್ಗಡತ್ತು திருவேங்கடத்து = ತಿರುವೇಂಕಟಗಿರಿಯ, ಎಳಿಲ್ ಕೊಳ್ எழில் கொள் = ಸುಂದರವಾದ, ಶೋದಿ சோதி = ಜ್ಯೋತಿಸ್ವರೂಪಿಯಾದ, ಎನ್ದೈ ತನ್ದೈ ತನ್ದೈಕ್ಕೇ எந்தை தந்தை தந்தைக்கே = ನನ್ನ ತಂದೆಯ ತಂದೆಗೇಯೇ (ನಮ್ಮ ಕುಲದೈವವಾದ ಸ್ವಾಮಿಗೇಯೇ).

ತಿಳಿಯಾದ ಸ್ವರದಿಂದ ಧ್ವನಿ ಮಾಡುವ ಬೆಟ್ಟದ ಝರಿಗಳುಳ್ಳ ತಿರುವೇಂಕಟಗಿರಿಯ ಸುಂದರವಾದ ಜ್ಯೋತಿಸ್ವರೂಪಿಯಾದ ನಮ್ಮ ಕುಲದೈವವಾದ ಸ್ವಾಮಿಗೇಯೇ ನಾವು ಅವಕಾಶವಿಲ್ಲದಂತೆ (ಎಡೆಬಿಡದಂತೆ) ಎಲ್ಲಾ ಕಾಲದಲ್ಲೂ ಜೊತೆಯಲ್ಲೇ ಇರುತ್ತಾ, ಎಲ್ಲಾ ಅವಸ್ಥೆಗಳಲ್ಲಿಯೂ ನಿತ್ಯವಾಗಿ ಪರಿಶುದ್ಧವಾದ ಕೈಂಕರ್ಯವನ್ನು (ದಾಸ್ಯವನ್ನು) ಮಾಡಬೇಕು. (1)

ಭಗವಂತನನ್ನು ಕಂಡು ಕೊಳ್ಳುವುದಕ್ಕೂ, ಎಡೆಬಿಡದಂತೆ ಅವನ

ಕೈಂಕರ್ಯದಲ್ಲಿಯೇ ತೊಡಗಿರುವುದಕ್ಕೂ ಇದು ಲೋಕದ ಪ್ರತ್ಯಕ್ಷ ಸಂಬಂಧವನ್ನು ಕಡಿದು ಹಾಕಬೇಕೆಂದು ಹೇಳಲಾಗದು. ಎರಡನೆಯ ತಿರುವಾಯ್ಮೊಳಿಯಲ್ಲಿ. ಆದರೆ, ಇದು ಲೋಕದಲ್ಲೇ 'ಭೂಲೋಕ ವೈಕುಂಠ'ವೆಂದು ಕರೆಯಲ್ಪಡುವ ತಿರುವೆಂಕಟಗಿರಿಯಲ್ಲೇ ಇದೆಯಲ್ಲ. ಅಲ್ಲಿ ಸ್ವಾಮಿಯು ಆಶ್ರಿತರನ್ನು ಉದ್ಧರಿಸುವುದಕ್ಕಾಗಿಯೇ ನಿತ್ಯವಾಸ ಮಾಡುತ್ತಿದ್ದಾನಲ್ಲ! ಪ್ರತ್ಯಕ್ಷವಾದ ಅಲ್ಲಿಗೆ ಹೋಗಿ, ಆ ಅರ್ಚಾವತಾರವನ್ನು ಸೇವಿಸಿ, ಅವನ ಕೈಂಕರ್ಯವನ್ನು ಎಡೆಬಿಡದಂತೆ ಎಲ್ಲಾ ಅವಸ್ಥೆಗಳಲ್ಲೂ ನಡೆಸಿ ಉದ್ಧಾರಗೊಳ್ಳಬೇಕು. ಪ್ರತ್ಯಕ್ಷ ಸಂಬಂಧದಿಂದ ಕೆಡುಕಾಗುವುದಕ್ಕಿಂತಲೂ, ಪ್ರತ್ಯಕ್ಷಯಿನ ದುರಿಯೇ ಇದ್ದುಕೊಂಡು, ಭಗವಚ್ಛೇಷಿಯಾಗಿ, ಉಜ್ಜೀವನಗೊಳ್ಳಬಹುದಲ್ಲ ಎನ್ನುತ್ತಾರೆ ಈ ಭಾಗದಲ್ಲಿ.

ಆಳ್ವಾರರು ಹೇಳುತ್ತಾರೆ: ವೆಂಕಟಗಿರಿ ಎಂಬುದು ಬಲು ಸುಂದರವಾದ ಪ್ರತ್ಯಕ್ಷವಾದ ಬೆಟ್ಟ. ಅಲ್ಲಿನ ಬೆಟ್ಟದ ಝರಿಗಳು ತಿಳಿಯಾದ ಸ್ವರದಿಂದ ಧ್ವನಿ ಮಾಡುತ್ತ ಹರಿಯುತ್ತಿವೆ. ಆ ಬೆಟ್ಟದ ಶಿಖರದಲ್ಲಿ ಪರಮಸುಂದರನೂ ದಿವ್ಯಜ್ಯೋತಿಸ್ವರೂಪಿಯೂ ಆದ ಶ್ರೀವೇಂಕಟೇಶ್ವರನು ಭಕ್ತಜನರ ಉದ್ಧಾರಕ್ಕಾಗಿಯೇ ನಿಂತಿದ್ದಾನೆ. ನಾವು ಅಲ್ಲಿಗೆ ಹೋಗೋಣ. ಸ್ವಾಮಿಯ ಬಳಿಯಲ್ಲೇ ಎಡೆಬಿಡದಂತೆ ಇದ್ದುಕೊಂಡು, ಎಲ್ಲಾ ಕಾಲದಲ್ಲೂ ಎಲ್ಲಾ ಅವಸ್ಥೆಗಳಲ್ಲೂ ದೃಢವೂ ವಿಶುದ್ಧವೂ ಆದ ಕೈಂಕರ್ಯವನ್ನು ಸ್ವಾಮಿಗೆ ನಡೆಸುತ್ತಿರೋಣ. ನಮ್ಮ ಆತ್ಮೋದ್ಧಾರ ಕಾರ್ಯ ಇದೇ.

2. எந்தை தந்தை தந்தை தந்தை தந்தைக்கும்
முந்தை, வானவர் வானவர் கோனொடும்,
சிந்துபூ மகிழும் திருவேங்கடத்து,
அந்தமில் புகழ்க் காரெழிலண்ணலே.

ಎನ್ದೈ ತನ್ದೈ ತನ್ದೈ ತನ್ದೈ ತನ್ದೈಕ್ಕುಮ್,
ಮುನ್ದೈ, ವಾನವರ್ ವಾನವರ್ ಕೋನೊಡುಮ್,
ಸಿನ್ದುಪೂ ಮಗಿಳುಮ್ ತಿರುವೇಙ್ಗಡತ್ತು,
ಅನ್ದಮಿಲ್ ಪುಗಳ್ ಕ್ಕಾರೆಳಿಲ್ ಅಣ್ಣಲೇ.

ಎನ್ದೈ ತನ್ದೈ ತನ್ದೈ ತನ್ದೈ ತನ್ದೈಕ್ಕುಮ್ எந்தை தந்தை தந்தை தந்தை தந்தைக்கும் = ನನ್ನ ತಂದೆ, ತಾತ, ಮುತ್ತಾತ, ಅವರ ತಂದೆ, ಮುನ್ದೈ முந்தை = ಅವರ ಪೂರ್ವಿಕರು, ವಾನವರ್ வானவர் = ದೇವತೆಗಳು (ನಿತ್ಯ ಸೂರಿಗಳು), ವಾನವರ್ ಕೋನೊಡುಮ್ வானவர் கோனொடும் = (ಅವರ

ದೇವತೆಗಳ (ನಿತ್ಯಸೂರಿಗಳ) ಒಡೆಯನೆಂದನೆ, (ಬಂದು), ಸಿನ್ದು சிந்து = ಅರ್ಪಿಸುವ, ಪೂ பூ = ಹೂಗಳಿಂದ, ಮಹಿಳುಮ್ மகிழும் = ಆನಂದಿಸುವ, ತಿರುವೇಙ್ಗಡತ್ತು திருவேங்கடத்து = ತಿರುವೇಂಕಟಗಿರಿಯ, ಅನ್ದಮ್ ಇಲ್ அந்தம் இல் = ಕೊನೆಯಿಲ್ಲದ, ಪುಗಳ್ புகழ் = ಕೀರ್ತಿಯುಳ್ಳ (ಹೊಗಳಿಕೆಯ), ಕಾರ್ ಎಳಿಲ್ கார் எழில் = ಕಾರ್ಮುಗಿಲ ಸೌಂದರ್ಯದ, ಅಣ್ಣಲೇ அண்ணலே = ಸ್ವಾಮಿಯೇ.

ದೇವತೆಗಳೂ, ಆ ದೇವತೆಗಳ ಒಡೆಯನೂ ಇಲ್ಲಿಗೆ ಬಂದು, ಅರ್ಪಿಸುವ ಹೂಗಳಿಂದ ಆನಂದಿಸುವ ತಿರುವೇಂಕಟಗಿರಿಯ ಕೊನೆಯಿಲ್ಲದ ಕೀರ್ತಿಯುಳ್ಳ ಕಾರ್ಮುಗಿಲ ಸೌಂದರ್ಯದ ಸ್ವಾಮಿಯೇ ನನಗೂ. ನನ್ನ ತಂದೆಗೂ ಅವರ ತಂದೆಗೂ ಅವರ ತಂದೆಗೂ, (2)
ಅವರ ತಂದೆಗೂ, ಮತ್ತು ಅವರ ಪೂರ್ವಿಕರಿಗೂ ಒಡೆಯನು.

ಭಗವಂತನನ್ನು ಪರಮಪದದಲ್ಲಿ ಅಲ್ಲವೇ ಕಾಣತಕ್ಕದ್ದು? ಅವನ ನಿತ್ಯ-ಸೌಂದರ್ಯದಲ್ಲಿ ನೋಡಬೇಕಾದದ್ದು ಅಲ್ಲೇ ಅಲ್ಲವೇ? ಅಲ್ಲಿಗೆ, ನಾವು ನೇರವಾ, ಹೋಗುವುದಕ್ಕೆ ಬದಲಾಗಿ ಭೂಲೋಕದಲ್ಲೇ ಇರುವ ತಿರುವೇಂಕಟಗಿರಿಗೆ ಹೋಗಿ, ಅಲ್ಲಿ ಭಗವದ್ದರ್ಶನ ಮಾಡುವುದರಲ್ಲಿ ಏಕೆ ತೃಪ್ತರಾಗಬೇಕು? – ಎಂಬ ಈ ಪ್ರಶ್ನೆಗೆ ಉತ್ತರವಾಗಿದೆ ಈ ಪಾಶುರ.

ಆಳ್ವಾರರು ಹೇಳುತ್ತಾರೆ: ತಿರುವೇಂಕಟಗಿರಿಯು ಅತ್ಯುನ್ನತ ಶಿಖರದಲ್ಲಿ, ಸುಂದರವಾದ ಪ್ರಕೃತಿಯ ನಡುವೆ, ಸರ್ವೇಶ್ವರನು ಬಂದು ನೆಲಸಿದ್ದಾನೆ. ದೇವಲೋಕಗಳಿಗೂ ಅದು ಹತ್ತಿರವೇ! ಅಲ್ಲಿಗೆ ದೇವತೆಗಳೂ, ದೇವೇಂದ್ರನೂ, ಇತರ ಎಲ್ಲಾ ಮೇಲಿನ ಲೋಕದವರೂ ಸುಲಭವಾಗಿ ಬಂದು, ಭಗವಂತನನ್ನು ಸಂದರ್ಶಿಸಿ, ಅವನ ತಿರುವಡಿಗಳಿಗೆ ದೇವಲೋಕದ ದಿವ್ಯವಾದ ಹೂಗಳನ್ನು ಸಮರ್ಪಿಸಿ, ಅವನ ಕೀರ್ತಿಯನ್ನು ಕೊಂಡಾಡಿ ಹೋಗುತ್ತಾರೆ. ಆದ್ದರಿಂದ, ತಿರುಮಲೆ ಅಂಥ ಅನುಭವದ ಹೂಗಳಿಂದ, ಅವುಗಳ ರಾಶಿ ಬಣ್ಣ ವಾಸನೆಗಳಿಂದ ತುಂಬಿ ಶೋಭಿಸುತ್ತದೆ ಕಣ್ಣುಗಳಿಗೆ ಆನಂದವನ್ನು ತರುವ ಪವಿತ್ರ ಕ್ಷೇತ್ರ. ನಮ್ಮ ತಂದೆ, ತಾತ, ಮುತ್ತಾತ, ಅವರ ತಂದೆ, ಮತ್ತು ಅವರ ಹಿಂದಿನ ಪೂರ್ವಿಕರೂ ಅಲ್ಲಿಗೆ ಹೋಗಿ, ಕಾರ್ಮುಗಿಲಂತೆ ಆಕರ್ಷಕ ಸುಂದರನಾದ, (ಪರಮ ಉದಾರಿಯಾದ), ಭಗವಂತನನ್ನು ಸಂದರ್ಶಿಸಿ, ಸೇವೆ ಸಲ್ಲಿಸಿದ ಸ್ಥಳವೇ ಅದು. ಆದ್ದರಿಂದ, ನಾವೂ ಸಹ ಅಲ್ಲಿಗೆ ಹೋಗೋಣ. ಭಗವಂತನ ಸೇವೆ ಮಾಡೋಣ.

3. அண்ணல் மாயன் அணிகொள் செந்தாமரைக்
கண்ணன், செங்கனிவாய்க் கருமாணிக்கம்,
தெண்ணிறைச் சுனைநீர்த் திருவேங்கடத்து,
எண்ணில் தொல்புகழ் வானவர் ஈசனே.

ಅಣ್ಣಲ್ ಮಾಯನ್ ಅಣಿಕೊಳ್ ಶೆನ್ದಾಮರೈ
ಕ್ಕಣ್ಣನ್, ಶೆಙ್ಗನಿ ವಾಯ್ ಕ್ಕರುಮಾಣಿಕ್ಕಮ್,
ತೆಣ್ಣಿಱೈ ಚ್ಚುನೈ ನೀರ್ ತ್ತಿರುವೇಙ್ಗಡತ್ತು,
ಎಣ್ಣಿಲ್ ತೊಲ್ ಪುಗೞ್ ವಾನವರ್ ಈಶನೇ.

ಅಣ್ಣಲ್ அண்ணால் = ಎಲ್ಲರ ಒಡೆಯನೂ, ಮಾಯನ್ மாயன் = ಆಶ್ಚರ್ಯಾದ್ಭುತಶಾಲಿಯೂ, ಅಣಿಕೊಳ್ அணிகொள் = ಅತ್ಯಂತ ರಮ್ಯವಾದ, ಶೆನ್ದಾಮರೈಕ್ಕಣ್ಣನ್ செந்தாமரைக் கண்ணன் = ಕೆಂದಾವರೆಯಂತೆ (ದೊಡ್ಡದಾದ, ಆಕರ್ಷಕ) ಕಣ್ಣುಗಳುಳ್ಳವನೂ, ಶೆಙ್ಗನಿ ವಾಯ್ செங்கனி வாய் = ಕೆಂಪಾಗಿರುವ (ತೊಂಡೆಯ) ಹಣ್ಣಿನಂತೆ ತುಟಿಗಳುಳ್ಳವನೂ, ಕರುಮಾಣಿಕ್ಕಮ್ கருமாணிக்கம் = ನೀಲರತ್ನದ ಹಾಗೆ ದೇಹಕಾಂತಿಯುಳ್ಳವನೂ, ತೆಳ್ தெள் = ತಿಳಿಯಾದ, ನಿಱೈ நிறை = ತುಂಬಿಹರಿಯುವ, ಚುನೈ சுனை = ಬೆಟ್ಟದ ಝರಿಗಳ, ನೀರ್ நீர் = ನೀರಿನ, ಎಣ್ ಇಲ್ எண் ತಿರುವೇಙ್ಗಡತ್ತು திருவேங்கடத்து = ತಿರುವೇಂಕಟಗಿರಿಯ, இல் = ಎಣಿಸಲಾಗದ, ತೊಲ್ ಪುಗೞ್ தொல் புகழ் = ಸಹಜವಾದ ಕೀರ್ತಿಯನ್ನುಳ್ಳವನೂ ಆದ, ವಾನವರ್ ಈಶನೇ வானவர் ஈசனே = ನಿತ್ಯಸೂರಿಗಳ ಒಡೆಯನೇ.

ಎಲ್ಲರ ಒಡೆಯನೂ (ಸರ್ವಸ್ವಾಮಿಯೂ), ಆಶ್ಚರ್ಯಶಾಲಿಯೂ, ಅತ್ಯಂತ ರಮ್ಯವಾದ ಕೆಂದಾವರೆಯಂತೆ ಕಣ್ಣುಗಳುಳ್ಳವನೂ, ಕೆಂಪನೆಯ (ತೊಂಡೆಯ) ಹಣ್ಣಿನಂತೆ ತುಟಿಯನ್ನುಳ್ಳವನೂ, ನೀಲರತ್ನದಂತೆ ದೇಹಕಾಂತಿಯುಳ್ಳವನೂ, ತಿಳಿಯಾಗಿ ತುಂಬಿಹರಿಯುವ ಬೆಟ್ಟದ ಝರಿಗಳ ನೀರಿನ ತಿರುವೇಂಕಟಗಿರಿಯ ಎಣಿಸಲಾಗದ ಸಹಜವಾದ ಕೀರ್ತಿಯುಳ್ಳವನೂ ಆದ ನಿತ್ಯಸೂರಿಗಳ ಒಡೆಯನೇ (3)

ಒಂದನೇ ಪಾಶುರದಲ್ಲಿ ಹೇಳಿದ ವಿಷಯವನ್ನು ಇಲ್ಲಿ ಮತ್ತೆ ಸಮರ್ಥಿಸಿ ಕೊಳ್ಳಲಾಗಿದೆ.

ಆಳ್ವಾರರು ಹೇಳುತ್ತಾರೆ: ತಿರುವೇಂಕಟಗಿರಿಯ ಶಿಖರದಲ್ಲಿ ನೆಲಸಿರುವವನು ಪರಮಪದದ ಒಡೆಯನೇ. ನಿತ್ಯಸೂರಿಗಳ ಸ್ವಾಮಿಯೇ. ಅವನೇ ಸರ್ವಸ್ವಾಮಿ. ಅವನೇ ಆಶ್ಚರ್ಯದ್ಭುತಶಾಲಿ. ಅವನ ಕಣ್ಣುಗಳು ಕೆಂದಾವರೆಯಂತೆ ದಿವ್ಯಸುಂದರ. ಅವನ ತುಟಿ ಕೆಂಪನೆಯ (ತೊಂಡೆಯ) ಹಣ್ಣಿನಂತೆ. ಅವನ ರೂಪ ಸೌಂದರ್ಯ ನೀಲರತ್ನದಂತೆ. (ಆದ್ದರಿಂದ ನಾವು ಅಲ್ಲಿಗೆ ಹೋಗಿ ಅವನನ್ನು ಭಜಿಸಿ ಪೂಜಿಸಿ ಕೃತಾರ್ಥರಾಗೋಣ.)

4. ஈசன் வானவர்க்கென்பன் என்றால், அது
தேசமோ திருவேங்கடத்தானுக்கு?

Garani Srinivasan

நீசனேன் நிறைவொன்றுமிலேன், என்கண்
பாசம்வைத்த பரஞ்சுடர்ச்சோதிக்கே.

ಈಶನ್ ವಾನವರ್ಕ್ಕೆನ್ಬನ್ ಎನ್ರಾಲ್, ಅದು
ತೇಶಮೋ ತಿರುವೇಙ್ಗಡತ್ತಾನುಕ್ಕು?
ನೀಶನೇನ್ ನಿಱೈವೊನ್ಱುಮಿಲೇನ್, ಎನ್ಕಣ್
ಪಾಶಮ್ ವೈತ್ತ ಪರಂಜುಡರ್ ಶ್ಶೋದಿಕ್ಕೇ.

ಈಶನ್ ஈசன் = ಒಡೆಯನು, ವಾನವರ್ಕ್ಕು வானவர்க்கு = ನಿತ್ಯಸೂರಿಗಳಿಗೆ, ಎನ್ಬನ್ என்பன் = ಎನ್ನುತ್ತೇನೆ, ಎನ್ರಾಲ್ என்றால் = ಎಂದರೆ, ಅದು அது = ಆ ಮಾತು, ತೇಶಮೋ தேசமோ = ಬಿರುದಾದೀತೇ, ತಿರುವೇಙ್ಗಡತ್ತಾನುಕ್ಕು திருவேங்கடத்தானுக்கு = ತಿರುವೆಂಕಟದಲ್ಲಿ ನೆಲಸಿರುವವನಿಗೆ (ತಿರುವೇಂಕಟಾದ್ರಿಯ ಒಡೆಯನಿಗೆ)?, ನೀಶನೇನ್ நீசனேன் = ನಾನು ನೀಚನು, ನಿಱೈವೊನ್ಱುಮಿಲೇನ್ நிறைவொன்றுமிலேன் = ಯಾವ ಗುಣವನ್ನು ಪೂರ್ಣವಾಗಿಲ್ಲದವನು, ಎನ್ಕಣ್ என்கண் = ನನ್ನಲ್ಲಿ (ನನ್ನ ವಿಷಯದಲ್ಲಿ) (ತೋರಿಸಿದ), ಪಾಶಮ್ பாசம் = ಆಶಾಪಾಶವನ್ನು, ವೈತ್ತ = ಇಟ್ಟ ಪರಂಜುಡರ್ಶ್ಶೋದಿಕ್ಕೇ பரஞ்சுடர்ச்சோதிக்கே = ಪರಂಜ್ಯೋತಿಸ್ವರೂಪನಿಗೆ.

ನಾನು ನೀಚ. ನನ್ನಲ್ಲಿ ಯಾವ ಗುಣವೂ ಪೂರ್ಣವಾಗಿಲ್ಲ. ಇಂಥ ನನ್ನ ವಿಷಯದಲ್ಲಿ ಆಶಾಪಾಶವನ್ನು ತೋರಿಸಿದ ಪರಂಜ್ಯೋತಿಸ್ವರೂಪನಿಗೆ, ನಾನು ಅವನನ್ನು 'ನಿತ್ಯಸೂರಿಗಳ ಒಡೆಯಾ' ಎಂದ ಮಾತ್ರಕ್ಕೇ ಅದೊಂದು ಹಿರಿಮೆಯೇ? (4)

ಇಲ್ಲಿ ಭಗವಂತನ ಸೌಲಭ್ಯಗುಣವನ್ನು ಬಹಳ ಸುಂದರವಾದ ರೀತಿಯಲ್ಲಿ ಹೇಳಲಾಗುತ್ತಿದೆ.

ಆಳ್ವಾರರು ಹೇಳುತ್ತಾರೆ: ನಾನು ನೀಚ. ನನ್ನಲ್ಲಿ ಯಾವ ಸದ್ಗುಣವೂ ಪೂರ್ಣವಾಗಿಲ್ಲ. ಇಂಥ ಅಪೂರ್ಣನೂ ಪಾಪಿಯೂ ಆದ ನನ್ನಲ್ಲಿ ಭಗವಂತನು, ತನ್ನನ್ನು ಕಣ್ತುಂಬ ನೋಡಬೇಕೆಂದು, ಅವನ ಬಳಿಯಲ್ಲೇ ನಿತ್ಯವಾಸಮಾಡಬೇಕೆಂದು, ಎಡೆಬಿಡದಂತೆ ಅವನ ಸೇವೆಯಲ್ಲಿ ತೊಡಗಬೇಕೆಂದು ಆಶೆಯ ಸ್ವಂತ ಮಾಡಿರುವುದೇಕೆ? ತಿರುಮಲೆಯ ಒಡೆಯನನ್ನು ನಾನು 'ನನ್ನ ಸ್ವಾಮಿ' ಎಂದು ಆದರದಿಂದ ಹೇಳುತ್ತಾ ಹೆಮ್ಮೆಪಡಲೇ? ಇಲ್ಲವೇ, 'ಪರಮಪದವಾಸಿಗಳ ಒಡೆಯಾ' ನೆಂದು ಹೇಳಿ ಹೆಮ್ಮೆಪಡಲೇ? ನನ್ನ ಸ್ವಾಮಿಗೆ ಇವುಗಳಲ್ಲಿ ಯಾವುದು ಸರಿ? ~~ಹಿರಿಮೆ?~~ ಯಾವುದರಿಂದ ಹಿರಿಮೆ? ನಾನು ಇಷ್ಟು ಬಿಟ್ಟು ಆಶೆಯಿಂದ ಸೇವೆ ಮಾಡುವುದು ಬೇರೆಯವರ ಸ್ವಾಮಿಗೆ ಎನ್ನಬಹುದೇ? ಅದು ಸಾಧ್ಯವೇ?

5. சோதியாகி எல்லாவுலகும் தொழும்,
ஆதிமூர்த்தியென்றால் அளவாகுமோ?
வேதியர் முழுவேதத்தமுதத்தை,
தீதில்சீர்த் திருவேங்கடத்தானையே.

ಸೋದಿಯಾಗಿ ಎಲ್ಲಾವುಲಗುಮ್ ತೊಳುಮ್,
ಆದಿಮೂರ್ತ್ತಿ ಯೆನ್ರಾಲ್ ಅಳವಾಗುಮೋ?
ವೇದಿಯರ್ ಮುಳುವೇದತ್ತಮುದತ್ತೈ,
ತೀದಿಲ್ ಶೀರ್ ತ್ತಿರುವೇಙ್ಗಡತ್ತಾನೈಯೇ.

ಸೋದಿ ಆಗಿ சோதி ஆகி = ದಿವ್ಯಜ್ಯೋತಿಸ್ಸ್ವರೂಪಿಯಾಗಿ, ಎಲ್ಲಾ ವುಲಗುಮ್ எல்லா உலகும் = ಎಲ್ಲಾ ಲೋಕಗಳು, ತೊಳುಮ್ தொழும் = ಪೂಜಿಸುವ, ಆದಿ ಮೂರ್ತ್ತಿ ஆதிமூர்த்தி = ಆದಿಕಾರಣನಾದ ಸರ್ವೇಶ್ವರ, ಎನ್ರಾಲ್ என்றால் = ಎಂದರೆ, ಅಳವು ಆಗುಮೋ அளவு ஆகுமோ = ಸೀಮೆಬದ್ಧವಾಗುವುದೇ, ವೇದಿಯರ್ வேதியர் = ವೇದವಿದ್ವಾಂಸರು, ಮುಳು ವೇದತ್ತು முழுவேதத்து = ಎಲ್ಲಾ ವೇದಗಳ, ಅಮುದತ್ತೈ அமுதத்தை = ಅಮೃತಸದೃಶವಾದವನನ್ನು. ~~ತೀದಿಲ್~~ ತೀದು ಇಲ್ தீதில் = ಯಾವ ಬಗೆಯ ದೋಷವೂ ಇಲ್ಲದ, ಶೀರ್ சீர் = ಕೀರ್ತಿಯನ್ನುಳ್ಳ, ತಿರುವೇಙ್ಗಡತ್ತಾನೈಯೇ திருவேங்கடத்தானையே = ತಿರುವೇಂಕಟಗಿರಿಯ ಒಡೆಯನನ್ನು.

ಯಾವ ಬಗೆಯ ದೋಷವೂ (ಕುಂದುಕೊರತೆ, ಹೋಲಿಕೆಯೂ) ಇಲ್ಲದ ಕೀರ್ತಿಯನ್ನುಳ್ಳ ತಿರುವೇಂಕಟಗಿರಿಯ ಒಡೆಯನನ್ನು, ವೇದವಿದ್ವಾಂಸರ ಸಕಲ ವೇದಗಳ ಅಮೃತವನ್ನು, ದಿವ್ಯಜ್ಯೋತಿಸ್ವರೂಪಿಯಾದ, ಎಲ್ಲಾ ಲೋಕಗಳೂ ಪೂಜಿಸುವ ಆದಿಕಾರಣನಾದ ಸರ್ವೇಶ್ವರ ಎಂದರೆ ಸೀಮೆಬದ್ಧವಾಗುವುದೇ? (5)

ಭಗವಂತನ ಸೌಲಭ್ಯಗುಣವನ್ನು ಇಲ್ಲಿ ಬಹಳ ಸ್ವಾರಸ್ಯಪೂರ್ಣವಾ ವಿವರಿಸಿ ಹೇಳಲಾಗಿದೆ.

ಆಳ್ವಾರರು ಹೇಳುತ್ತಾರೆ: ತಿರುವೇಂಕಟಗಿರಿಯ ಶಿಖರದಲ್ಲಿ ನೆಲಸಿರುವ ಪರಮ ಪವಿತ್ರನೂ ಧವಳಕೀರ್ತಿಯುಳ್ಳವನೂ ಆದ ದಿವ್ಯಸುಂದರ ಮೂರ್ತಿ ಅವನನ್ನಾಶ್ರಯಿಸುವವರಿಗೆ ಎಷ್ಟು ಸುಲಭ ಸಾಧ್ಯನು ಕಂಡಿರಾ! ಯಾರು ಬೇಕಾದರೂ ಅವನನ್ನು ಸಮೀಪಿಸಬಹುದು, ಕಣ್ತುಂಬ ಕಂಡು ನಲಿಯಬಹುದು. ಎಲ್ಲ ಬಗೆಯ ಸೇವೆಯನ್ನು ಅವನ ಬಳಿಯಲ್ಲೇ ಇದ್ದುಕೊಂಡು ನಡೆಸುತ್ತಾ ಕೃತಾರ್ಥರಾಗಬಹುದು. ಸೌಲಭ್ಯ ವಾತ್ಸಲ್ಯಗಳವನೂ, ಕೃಪಾಸಾಗರನೂ ಆದ ಇಂಥ ಸ್ವಾಮಿಯನ್ನು 'ವೇದವಿದ್ವಾಂಸರ ಅಮೃತ' ಎಂದಾಗಲಿ, 'ಸಕಲವೇದಗಳಿಂದಲು

ಕೀರ್ತಿಸಲ್ಪಡುವವನು' ಎಂದಾಗಲಿ, 'ದಿವ್ಯವಾದ ಪರಂಜ್ಯೋತಿಸ್ವರೂಪಿ' ಎಂದಾಗಲಿ, 'ಎಲ್ಲಾ ಲೋಕಗಳಿಂದಲೂ ಪೂಜಿಸಲ್ಪಡುವವನು' ಎಂದಾಗಲಿ, 'ಜಗದಾಧಾರ' ಎಂದಾಗಲಿ, 'ಸರ್ವೇಶ್ವರ' ಎಂದಾಗಲಿ ಹೊಗಳಿಕೊಳ್ಳುವುದು ಅವನ ಸರಳ ಸೌಲಭ್ಯಕ್ಕೆ ಸರಿಹೊಂದುತ್ತದೆ? ಯಾವ ಕಾರಣವನ್ನಿಟ್ಟು ಈ ಹೊಗಳಿಕೆಯ ಮಾತುಗಳನ್ನು ಸರಿ ಎಂದು ಸಮರ್ಥಿಸಿಕೊಳ್ಳುವುದಕ್ಕೆ ಸಾಧ್ಯ?

ಭಗವಂತನನ್ನು ಹೊಗಳಿ ಹೇಳುವುದೆಲ್ಲವೂ ಸರಿಯೇ. ಆದರೆ, ಜ್ಞಾನ ಮಾರ್ಗದಿಂದ ಅವನ ಸಹಜಸ್ವರೂಪ ಸ್ವಭಾವಗಳನ್ನು ಕಂಡುಕೊಳ್ಳುವುದು ಎಷ್ಟು ಕಷ್ಟಕರವೋ ಅನನ್ಯವಾದ ಭಕ್ತಿಯಿಂದ, ಉತ್ಕಟವಾದ ಆಸೆಯಿಂದ, ಅವನನ್ನು ಕಂಡುಕೊಳ್ಳುವುದು ಅಷ್ಟೇ ಸುಲಭ ಎಂದರ್ಥವೇ.

6\. வேங்கடங்கள் மெய்ம்மேல் வினை முற்றவும்,
தாங்கள் தங்கட்கு நல்லனவே செய்வார்,
வேங்கடத்துறைவார்க்கு நமவென்ன
லாங்கடமை, அது சுமந்தார்கட்கே.

ವೇಙ್ಗಡಙ್ಗಳ್ ಮೆಯ್ಮ್ಮೇಲ್ ವಿನೈ ಮುಟ್ರವುಮ್,
ತಾಙ್ಗಳ್ ತಙ್ಗಟ್ಕು ನಲ್ಲನವೇ ಶೆಯ್ವಾರ್,
ವೇಙ್ಗಡತ್ತುಱೈವಾರ್ಕ್ಕು ನಮವೆನ್ನ
ಲಾಙ್ಗಡಮೈ, ಅದು ಶುಮನ್ದಾರ್ಕಟ್ಕೇ.

ವೇಙ್ಗಡಙ್ಗಳ್ வெம் கடங்கள் = ಕ್ರೂರವಾದ ಋಣಗಳು, ಮೆಯ್ ಮೇಲ್ ವಿನೈ மெய் மேல் வினை = ದೇಹಸಂಬಂಧವಾದ ಪಾಪಕರ್ಮಗಳು, ಮುಟ್ರವುಮ್ முற்றவும் = ಎಲ್ಲವೂ, ತಾಙ್ಗಳ್ தாங்கள் = ಅವುಗಳು, ತಙ್ಗಟ್ಕು தங்கட்கு = ತಮತಮಗೆ, ನಲ್ಲನವೇ நல்லனவே = ಒಳ್ಳೆಯದನ್ನೇ, ಶೆಯ್ವಾರ್ செய்வார் = ಮಾಡುತ್ತವೆ, ವೇಙ್ಗಡತ್ತು வேங்கடத்து = ತಿರುವೆಂಕಟಗಿರಿಯಲ್ಲಿ, ಉಱೈವಾರ್ಕ್ಕು உறைவார்க்கு = ನೆಲೆಸಿರುವವನಿಗೆ (ವೆಂಕಟಾಚಲಪತಿಗೆ), ನಮ ಎನ್ನಲ್ நம என்னல் = ನಮಃ ಎನ್ನುವುದು, ಆಮ್ ஆம் = ಆಗುವ, ಕಡಮೈ கடமை = ಕರ್ತವ್ಯವ, ಅದು அது = ಅದನ್ನ, ಶುಮನ್ದಾರ್ಕಟ್ಕೇ சுமந்தார்கட்கே = ವಹಿಸಿಕೊಂಡವರಿಗೆ.

ತಿರುವೆಂಕಟಗಿರಿಯಲ್ಲಿ ನೆಲೆಸಿರುವ ಸರ್ವೇಶ್ವರನಿಗೆ ನಮಃ ಎನ್ನುವುದಾದ ಕರ್ತವ್ಯವಾದ ಅದನ್ನು ವಹಿಸಿಕೊಂಡವರಿಗೆ ಕ್ರೂರವಾದ ಋಣಗಳು, ದೇಹ ಸಂಬಂಧವಾದ ಪಾಪಕರ್ಮಗಳು ಎಲ್ಲವೂ ತಮತಮಗೆ ತಕ್ಕಂತೆ ಒಳ್ಳೆಯದನ್ನೇ ಮಾಡುತ್ತವೆ.

(6)

ಇಲ್ಲಿ, ತಿರುಮಲೆಯ ಮಹತ್ತ್ವವನ್ನೂ ತಿರುವೇಂಕಟಾಚಲವಾಸಿಯನ್ನು ಪೂಜಿಸುವುದರಿಂದ ಬರುವ ಫಲವನ್ನೂ ಹೇಳಲಾಗುತ್ತದೆ.

"ಋಣಗಳು" — ದೇವ ಋಣ, ಋಷಿ ಋಣ, ಮತ್ತು ಪಿತೃಋಣ ಎಂಬ ಮೂರು ಕಡಗಳು. ಬ್ರಾಹ್ಮಣನಾದ ಇವುಗಳನ್ನು ತೀರಿಸಲೇ ಬೇಕಾಗುವುದು ವೇದಾ ಶಕ್ತರು. ವೇದಗಳನ್ನು ಅಧ್ಯಯನ ಮಾಡುವುದರಿಂದ ದೇವ ಋಣವನ್ನೂ, ದಶಕರ್ಮಗಳನ್ನು (ಯಜ್ಞವನ್ನು) ಮಾಡುವುದರಿಂದ ಋಷಿ ಋಣವನ್ನೂ, ಸತ್ಸಂತಾನಪ್ರಾಪ್ತಿಯಿಂದ ಪಿತೃಋಣವನ್ನೂ ತೀರಿಸಬೇಕೆನ್ನುತ್ತಾರೆ.

"ದೇಹಸಂಬಂಧವಾದ ಪಾಪಕರ್ಮಗಳು" — ಇಂದ್ರಿಯಗಳ ವಶವಾದ ಮನಸ್ಸು ವಿಷಯ ಸುಖದ ಕಡೆಗೆ ನಡೆದು, ಭಗವಚ್ಚಿಂತನೆಯನ್ನು ತೊರೆದು, ಕೋಪ, ದ್ವೇಷ, ಆಸೆಗಳನ್ನು ಹೆಚ್ಚಿಸಿಕೊಂಡು, ಅವುಗಳನ್ನು ತೀರಿಸುವುದರಲ್ಲಿಯೇ ನಿರತನಾಗಿ, ದೇಹದ ಮೂಲಕ ಮಾಡುವ ನಾನಾ ಪಾಪಕಾರ್ಯಗಳು ಇವು.

ಆಳ್ವಾರರು ಹೇಳುತ್ತಾರೆ: ತಿರುವೇಂಕಟಾದ್ರಿಯಲ್ಲಿ ನೆಲಸಿರುವ ಸ್ವಾಮಿಗೆ ನಮಸ್ಕಾರವನ್ನು ಸಲ್ಲಿಸುವ ಕರ್ತವ್ಯವನ್ನು ಮಾಡಿಕೊಂಡವರ ಎಲ್ಲಾ ಋಣಗಳೂ, ದೇಹಸಂಬಂಧವಾದ ಎಲ್ಲಾ ಪಾಪಕರ್ಮಗಳೂ ಬಾಧಿಸದಂತೆ ಅವರಿಗೆ ಎಲ್ಲಾ ಬಗೆಯಾದ ಆಗುವುವು.

7. சுமந்து மாமலர் நீர் சுடர் தூபங்கொண்டு,
அமர்ந்து வாணவர் வாணவர் கோனொடும்,
நமன்றெழும் திருவேங்கடம் நங்கட்கு,
சமன்கொள் வீடு தரும் தடங்குன்றமே.

ಶುಮನ್ದು ಮಾ ಮಲರ್ ನೀರ್ ಶುಡರ್ ತೂಪಙ್ಗೊಣ್ಡು,
ಅಮರ್ನ್ದು ವಾನವರ್ ವಾನವರ್ ಕೋನೊಡುಮ್,
ನಮನ್ಱೆಳುಮ್ ತಿರುವೇಙ್ಗಡಮ್ ನಙ್ಗಟ್ಕು,
ಶಮನ್ ಕೊಳ್ ವೀಡು ತರುಮ್ ತಡಙ್ಗುನ್ಱಮೇ.

ಶುಮನ್ದು சுமந்து = ಹೊತ್ತುಕೊಂಡು, ಮಾ மா = ದಿವ್ಯವಾದ, ಮಲರ್ மலர் = ಹೂಗಳನ್ನು, ನೀರ್ நீர் = ತೀರ್ಥವನ್ನೂ, ಶುಡರ್ சுடர் = ದೀಪವನ್ನೂ, ತೂಪಮ್ தூபம் = ಧೂಪವನ್ನೂ, ಕೊಣ್ಡು கொண்டு = ಬಂದು, ಅಮರ್ನ್ದು அமர்ந்து = ಒಟ್ಟುಗೂಡಿ, ವಾನವರ್ வாணவர் = ದೇವತೆಗಳು, ವಾನವರ್ ಕೋನೊಡುಮ್ வாணவர் கோனொடும் = ದೇವತೆಗಳ ಒಡೆಯನೊಡನೆ, ~~[illegible]~~

Garani Srinivasan

ನಮನ್ಱು நமன்று = ನಮಸ್ಕರಿಸಿ (ಪೂಜಿಸಿ), ಎೞುಮ್ எழும் = ಉಜ್ಜೀವನಗೊಳ್ಳುವ, ತಿರುವೇಙ್ಗಡಮ್ திருவேங்கடம் = ತಿರುವೆಂಕಟವೆಂಬುದು, ನಙ್ಗಟ್ಕು நங்கட்கு = ನಮಗೆ, ಶಮನ್ ಕೊಳ್ சமன் கொள் = ಭಗವಂತನ ಸಾಮ್ಯವನ್ನುಂಟುಮಾಡುವ, ವೀಡು ತರುಮ್ வீடு தரும் = ಬಿಡುಗಡೆಯನ್ನು (ಪರಮಪದವನ್ನು) ತರುವ, ತಡಮ್ ಕುನ್ಱಮೇ தடம் குன்றமே = ವಿಶಾಲವಾದ ಪರ್ವತವೇ.

ದೇವತೆಗಳೂ, ದೇವರ್ಷಿಗಳ ಜತೆಯಲ್ಲಿ ಕೂಡಿ ದಿವ್ಯವಾದ ಪುಷ್ಪಗಳನ್ನು ತೀರ್ಥವನ್ನು, ದೀಪವನ್ನು, ಧೂಪವನ್ನು ಹೊತ್ತು ತಂದು, ನಮಸ್ಕರಿಸಿ (ಪೂಜಿಸಿ) ಉಜ್ಜೀವನಗೊಳ್ಳುವ ತಿರುವೆಂಕಟವೆಂಬುದು
ನಮಗೆ ಭಗವಂತನ ಸಾಮ್ಯವನ್ನು ತರುವ ಪರಮಪದವನ್ನು 7
ತರುವ ವಿಶಾಲವಾದ ಪರ್ವತವೇ.

ತಿರುವೆಂಕಟಗಿರಿಯು ಮೋಕ್ಷವನ್ನು ಇಲ್ಲಿಯೂ ಮುಂದೂ ನೀಡುತ್ತದೆ.

ಆಳ್ವಾರರು ಹೇಳುತ್ತಾರೆ: ತಿರುವೆಂಕಟಗಿರಿಯಾಗಲಿ, ಅಲ್ಲಿ ನೆಲೆಸಿರುವ ಸರ್ವೇಶ್ವರನಾಗಲಿ ಸಾಮ್ಯವಿಲ್ಲದ್ದು. ದೇವತೆಗಳು ತಮ್ಮ ಒಡೆಯನಾದ ದೇವೇಂದ್ರನೊಡನೆ, ಭಗವಂತನ ಪೂಜೆಗೋಸ್ಕರ ದಿವ್ಯವಾದ ಹೂಗಳು, ತೀರ್ಥ, ಧೂಪ, ದೀಪಾದಿಗಳನ್ನು ದೇವಲೋಕದಿಂದಲೇ ಹೊತ್ತು ತರುತ್ತಾರೆ. ಅವುಗಳಿಂದ ಭಕ್ತಿಪೂರ್ವಕವಾಗಿ ಭಗವಂತನನ್ನು ಪೂಜಿಸಿ, ಉಜ್ಜೀವನಗೊಳ್ಳುತ್ತಾರೆ. ನಮಗೆ ತಿರುವೆಂಕಟಗಿರಿಯೇ ಅಂಥ ಪವಿತ್ರವಾದ ಸ್ಥಳವಾಗುತ್ತದೆ. ವಿಶಾಲವಾದ ಆ ಬೆಟ್ಟವನ್ನು ನಾವು ಸೇರಿದ ಕೂಡಲೇ, ಭಗವತ್ಸಾಮ್ಯ ಸಾನ್ನಿಧ್ಯವನ್ನು ತರುವ ಪರಮಪದವೇ ಆಗಿ ಅದು ಮೆರೆಯುತ್ತದೆ.

ತಿರುಮಲೆಯ ಮೇಲೆ ವಾಸಿಸುವುದು ಪರಮಪದವಾಸಕ್ಕೆ ಸರಿಹೊಂದುವುದು ಎಂದಂತೆಯೇ.

8. குன்றமேந்திக் குளிர்மழை காத்தவன்,
அன்று ஞாலம் அளந்த பிரான், பரன்
சென்று சேர் திருவேங்கட மாமலை,
ஒன்றுமே தொழ நம் வினை ஓயுமே.

ಕುನ್ಱಮೇನ್ದಿಕ್ ಕುಳಿರ್ ಮೞೈ ಕಾತ್ತವನ್,
ಅನ್ಱು ಞಾಲಮ್ ಅಳನ್ದ ಪಿರಾನ್, ಪರನ್

ಶೆನ್ಱು ಶೇರ್ ತಿರುವೇಙ್ಗಡ ಮಾಮಲೈ,
ಒನ್ಱುಮೇ ತೊಳ ನಮ್ ವಿನೈಯೋಯುಮೇ.

ಕುನ್ಱಮ್ குன்றம் = ಬೆಟ್ಟವನ್ನು, ಏನ್ದಿ ஏந்தி = ಎತ್ತಿಹಿಡಿದು, ಕುಳಿರ್, ಮಳೈ குளிர் மழை = ಚಳಿಯನ್ನು ಮಳೆಯನ್ನು, ಕಾತ್ತವನ್ காத்தவன் = (ತಡೆದು) ರಕ್ಷಿಸಿದವನು, ಅನ್ಱು அன்று = ಅಂದು. ಞಾಲಮ್ ஞாலம் = ಲೋಕವನ್ನು, ಅಳನ್ದ அளந்த = ಅಳೆದು ಕೊಂಡ, ಪಿರಾನ್ பிரான் = ಸ್ವಾಮಿಯಾದ, ಪರನ್ பரன் = ಸರ್ವೇಶ್ವರನು, ಶೆನ್ಱು சென்று = ಹೋಗಿ/(ಬಂದು), ಶೇರ್ சேர் = ನೆಲಸಿರುವ, ತಿರುವೇಙ್ಗಡ ಮಾಮಲೈ திருவேங்கட மாமலை = ತಿರುವೇಂಕಟ ಎಂಬ ಶ್ರೇಷ್ಠವಾದ ಬೆಟ್ಟ, ಒನ್ಱುಮೇ ஒன்றுமே = ಒಂದೇಯೇ. (ಒಂದನ್ನೇ), ತೊಳ தொழ = ಪೂಜಿಸುವುದರಿಂದ, ನಮ್ ವಿನೈ நம் வினை = ನಮ್ಮ ಪಾಪಗಳು, ಓಯುಮೇ ஓயுமே = ನಾಶಹೊಂದುವುವು.

ಬೆಟ್ಟವನ್ನೆತ್ತಿ ಹಿಡಿದು ಚಳಿ ಮಳೆಗಳಿಂದ ರಕ್ಷಿಸಿದವನೂ, ಅಂದು, ಲೋಕವನ್ನು ಅಳೆದು ಕೊಂಡ ಸ್ವಾಮಿಯೂ ಆದ ಸರ್ವೇಶ್ವರನು ಹೋಗಿ (ಬಂದು) ನೆಲಸಿರುವ ತಿರುವೇಂಕಟ ಎಂಬ ಶ್ರೇಷ್ಠವಾದ ಬೆಟ್ಟವೊಂದನ್ನೇ ಪೂಜಿಸುವುದರಿಂದ ನಮ್ಮ ಪಾಪಗಳೆಲ್ಲವೂ ತೊಲಗಿ ಹೋಗುವುವು. (8)

ಹಿಂದಿನ ಪಾಶುರದ ವಿಷಯವನ್ನೇ ಇಲ್ಲಿಯೂ ಮುಂದುವರಿಸಲಾಗುತ್ತಿದೆ.

ಕುನ್ಱಮೇನ್ದಿಕ್ಕುಳಿರ್ ಮಳೈ ಕಾತ್ತವನ್ :- ಇದು ಭಗವಂತನ ಶ್ರೀಕೃಷ್ಣಾವತಾರದ ಒಂದು ಅದ್ಭುತ ಪ್ರಸಂಗ. ಭಗವಂತನು ಶ್ರೀಕೃಷ್ಣನಾಗಿ ಅವತರಿಸಿ, ಗೋಪಾಲಕರ ವೃಂದಾವನದ ~~[illegible]~~ ಕುಲದಲ್ಲಿ ಬೆಳೆಯುತ್ತಿದ್ದನು. ಅಲ್ಲಿಯ ಗೋಪಾಲಕರು ವರ್ಷಕ್ಕೊಮ್ಮೆ ~~[illegible]~~ ದೇವೇಂದ್ರನಿಗೆ ಪೂಜೆಯನ್ನು ಮಾಡಿ, ಎಡೆಯನ್ನು ನೀಡುತ್ತಿದ್ದರು. ಇವರ ಈ ಕೆಲಸ ಬಾಲಕೃಷ್ಣನಿಗೆ ಸರಿಬರಲಿಲ್ಲ. ಇದರಿಂದ ಅವನು ಗೋಪಾಲಕರನ್ನು ಕರೆದು ಹೇಳಿದನು - ದೇವೇಂದ್ರನೆಂಬವನು ಎಲ್ಲಾ ರಕ್ಷಣೆಯುಳ್ಳ ರಕ್ಷಕನು. ಗೋವರ್ಧನ ಗಿರಿಯಿಂದಲೇ ಮಳೆ ಬೆಳೆ ಸೌಕರ್ಯಗಳು ಲಭಿಸುವುವು. ದೇವೇಂದ್ರನಿಂದಲ್ಲ. ಆದ್ದರಿಂದ, ಮುಂದೆಲ್ಲಾ ಗೋವರ್ಧನ ಗಿರಿಯನ್ನೇ ಪೂಜಿಸಿ, ಅದಕ್ಕೇ ಎಡೆ ಕೊಡಿ ಎಂದು. ಆ ಕೂಡಲೇ ನಡೆಯಿತು ಆ ವರ್ಷದ ಹಬ್ಬ. ಗೋವರ್ಧನ ಗಿರಿಯ ಬುಡದಲ್ಲಿ ಎಡೆಯನ್ನು ಹರಡಿದರು. ~~ಶ್ರೀಕೃಷ್ಣನು~~, ಬೆಟ್ಟದಿಂದ ಒಬ್ಬ ವ್ಯಕ್ತಿಯು ಎದ್ದು ಬಂದ. ಅವನು ಎಡೆಯನ್ನೆಲ್ಲಾ ಸ್ವೀಕರಿಸಿದ. ಮತ್ತು ಗೋಪಾಲಕರನ್ನು ಹರಸಿದ, ರಕ್ಷಿಸಿದ. ಇದು ಶ್ರೀಕೃಷ್ಣನು ನಡೆಸಿದ ಮಾಯೆ! ಇದನ್ನೆಲ್ಲಾ ಕಂಡ ದೇವೇಂದ್ರನಿಗೆ ಕಡುಕೋಪ ಬಂದಿತು. ಕಣ್ಣನ್ನು ಅಷ್ಟು

Garani Srinivasan

ಜೋರಾಗಿ ಅಲುಗಿಸಿದ್ದರಿಂದ, ಗೋವಳರನ್ನು ರಕ್ಷಿಸುವುದಕ್ಕಾಗಿ ಯೋಚಿಸಿ, ಏಳುವರ ಕಲ್ಲುಗಳ ಜಡಿ ಮಳೆಯನ್ನು ನಂದಗೋಕುಲದ ಮೇಲೆ ಸುರಿಸುತ್ತಿದ್ದನು. ಬಾಲಕೃಷ್ಣನಾದರೋ, ಗೋವರ್ಧನಗಿರಿಯನ್ನೇ ಎತ್ತಿ, ಕೊಡೆಯಂತೆ ತನ್ನ ಕೈಬೆರಳ ಮೇಲೆ ಹಿಡಿದು, ಅದರಡಿಯಲ್ಲಿ ಗೋವುಗಳನ್ನು ಗೋವಳರನ್ನು ಸುಖವಾಗಿ ಇರಿಸಿಕೊಂಡು, ರಕ್ಷಿಸಿದನು. ಹೀಗೆ ಗೋವರ್ಧನಗಿರಿ ಪ್ರಸಿದ್ಧಗೊಂಡಿದ್ದು.

"ಅನ್ರು ಞಾಲಮ್ ಅಳನ್ದ ಪಿರಾನ್" – ಇದು ಭಗವಂತನ ವಾಮನ-ತ್ರಿವಿಕ್ರಮಾವತಾರಗಳ ಮಹತ್ತರದ ಅದ್ಭುತ ಪ್ರಸಂಗ. ಕೊಡುಗೈ ಯುವನಾದ ಬಲಿ-ಚಕ್ರವರ್ತಿಯ ಯಾಗ ಶಾಲೆಗೆ ಭಗವಂತನು ಬ್ರಹ್ಮಚಾರಿ ವಾಮನವಟುವಾಗಿ ಬಂದು, ಮೂರು ಹೆಜ್ಜೆ ನೆಲವನ್ನು ಯಾಚಿಸಿ, ದಾನವಾಗಿ ಪಡೆದುಕೊಂಡನು. ಆ ಕೂಡಲೇ ಸ್ವಾಮಿಯು ತ್ರಿವಿಕ್ರಮನಾಗಿ ಬೆಳೆದನು. ಆ ತನ್ನ ಒಂದು ಹೆಜ್ಜೆಯನ್ನು (ಆಕಾಶದ ಹೆಜ್ಜೆಯಿಂದ) ಎತ್ತರಿಸಿ, ಇಡೀ ಭೂಮಂಡಲವನ್ನೆಲ್ಲಾ ಅಳೆದುಕೊಂಡನು. ಮತ್ತೊಂದು ಹೆಜ್ಜೆಯಿಂದ ಮೇಲಣ ಎಲ್ಲಾ ಲೋಕಗಳನ್ನು ಅಳೆದುಕೊಂಡನು. ಮೂರನೆಯ ಹೆಜ್ಜೆಗೆ ಸ್ಥಳವಿಲ್ಲದೆ, ಅದನ್ನು ಬಲಿಚಕ್ರವರ್ತಿಯ ತಲೆಯಮೇಲಿರಿಸಿ, ಅವನನ್ನು ಅನುಗ್ರಹಿಸಿದನು.

ಆಳ್ವಾರರು ಹೇಳುತ್ತಾರೆ: ಹಿಂದೆ, ತ್ರಿವಿಕ್ರಮನಾಗಿ ಲೋಕಗಳೆಲ್ಲವನ್ನೂ ಅಳೆದುಕೊಂಡ, ಮತ್ತು, ಬಾಲಕೃಷ್ಣನಾಗಿಯೇ ಗೋವರ್ಧನಗಿರಿಯನ್ನು ಎತ್ತಿ ಕೊಡೆಯಂತೆ ಹಿಡಿದು, ಅದರಡಿಯಲ್ಲಿ ಗೋವುಗಳನ್ನು ಗೋವಳರನ್ನು ಸಲಹಿ ರಕ್ಷಿಸಿದ ಭಗವಂತನೇ ಈಗ ಆಶ್ರಿತರನ್ನು ಕಾಪಾಡುವುದಕ್ಕೋಸ್ಕರ ಬೆಟ್ಟವಾದ ತಿರುವೇಂಗಡ ಶಿಖರದಲ್ಲಿ ಬಂದು ನೆಲಸಿದ್ದಾನೆ. ಆ ಬೆಟ್ಟವನ್ನೇ ವಿಶ್ವಾಸಿಗಳು ತೀರ್ಥಕ್ಷೇತ್ರವೆನ್ನುತ್ತಾರೆ. ನೀವು ಈ ಬೆಟ್ಟವನ್ನು ಪೂಜಿಸುವುದರಿಂದಲೇ ನಿಮ್ಮ ಪಾಪಗಳೆಲ್ಲವೂ ಕಳೆದು ಹೋಗುವುವು.

9. ஓயு மூப்புப் பிறப்பிறப்புப் பிணி,
வீயுமாறு செய்வான் திருவேங்கடத்
தாயன், நாண்மலராம் அடித்தாமரை,
வாயுள்ளும் மனத்துள்ளும் வைப்பர்கட்கே.

ಓಯು ಮೂಪ್ಪು ಪ್ಪಿಱಪ್ಪಿಱಪ್ಪು ಪ್ಪಿಣಿ,
ವೀಯುಮಾಱು ಶೆಯ್ವಾನ್ ತಿರುವೇಙ್ಗಡ
ತ್ತಾಯನ್, ನಾಳ್ ಮಲರಾಮ್ ಅಡಿತ್ತಾಮರೈ,
ವಾಯುಳ್ಳುಮ್ ಮನತ್ತುಳ್ಳುಮ್ ವೈಪ್ಪಾರ್ಗಟ್ಕೇ.

ಓಯುಮ್ ஓயும் = ಶಕ್ತಿಕುಂದಿಸುವ, ಮೂಪ್ಪು மூப்பு = ಮುದಿತನವನ್ನು, ಪಿಱಪ್ಪು பிறப்பு = ಹುಟ್ಟುವಿಕೆಯನ್ನು, ಇಱಪ್ಪು இறப்பு = ಮರಣವನ್ನು, ಪಿಣಿ பிணி = ರೋಗರುಜಿನಗಳನ್ನು, ವೀಯುಮಾಱು

வீயும் ஆறு = ತೊಲಗಿ ಹೋಗುವಂತೆ, ಶೆಯ್‌ವಾನ್ செய்வான் = ಮಾಡುತ್ತಾನೆ, ತಿರುವೇಙ್ಗಡತ್ತು ಆಯನ್ திருவேங்கடத்து ஆயன் = ತಿರುವೇಂಕಟಾದ್ರಿಯ 'ಗೊಲ್ಲನು' (ಶ್ರೀಕೃಷ್ಣನಂತಿರುವ ಸ್ವಾಮಿಯು), ನಾಳ್ நாள் = ಆಗಲೇ, ಮಲರ್ ಆಮ್ மலர் ஆம் = ಅರಳಿರುವಂಥ, ಅಡಿತ್ತಾಮರೈ அடித்தாமரை = ಪಾದಕಮಲವನ್ನು, ವಾಯ್ ಉಳ್ಳುಮ್ வாயுள்ளும் = ಮಾತಿನಿಂದಲೂ, ಮನತ್ತು ಉಳ್ಳುಮ್ மனத்துள்ளும் = ಮನಸ್ಸಿನಿಂದಲೂ, ವೈಪ್ಪಾರ್‌ಗಟ್ಕೇ வைப்பார்கட்கே = ಇಟ್ಟುಕೊಂಡವರಿಗೆ.

ತಿರುವೇಂಕಟಾದ್ರಿಯ 'ಗೊಲ್ಲನು' ಅವನ (ಆಗಲೇ ಅರಳಿರುವ ತಾವರೆಯಂತಿರುವ ಪಾದಗಳನ್ನು ಬಾಯಲ್ಲೂ, ಮನದಲ್ಲೂ ಇಟ್ಟುಕೊಂಡಿರುವವರಿಗೆ ಶಕ್ತಿಯನ್ನು ಕುಂದಿಸುವ ಮುದಿತನವನ್ನು, ಜನನವನ್ನು, ಮರಣವನ್ನು, ರೋಗರುಜಿನಗಳನ್ನು, ತೊಲಗಿಹೋಗುವಂತೆ ಮಾಡುತ್ತಾನೆ. (9)

ಇದರಲ್ಲಿ ಭಗವಂತನನ್ನು ಮಾತು, ಮೈ, ಮನಗಳಿಂದ ನಂಬಿ ಆಶ್ರಯಿಸುವ ಭಕ್ತರಿಗೆ ಉಂಟಾಗುವ ಫಲವಿಶೇಷವನ್ನು ಹೇಳಲಾಗುತ್ತದೆ.

ಆಳ್ವಾರರು ಹೇಳುತ್ತಾರೆ: ತಿರುವೇಂಕಟಾದ್ರಿಯ ಸ್ವಾಮಿಯನ್ನು ಆಶ್ರಯಿಸಿದವರಿಗೆ ಬರುವ ಜನನ, ಮರಣ, ಜರೆ (ಮುಪ್ಪು), ವ್ಯಾಧಿ (ರೋಗ) ಎಂಬ ನಾಲ್ಕು ಬಗೆಯ ಭಯವಿಲ್ಲದಂತೆ ಮಾಡುತ್ತಾನೆ.

"ತಿರುವೇಙ್ಗಡತ್ತು ಆಯನ್" — 'ಗೊಲ್ಲ'ನಾಗಿ ಶ್ರೀಕೃಷ್ಣನಾಗಿ ಹೇಗೆ ಗೋಪರಿರಕ್ಷಣೆಯನ್ನು ತೋರ್ಪಡಿಸಿದನೋ, ಹೇಗೆ ದುಷ್ಟಶಿಕ್ಷಣ, ಶಿಷ್ಟರಕ್ಷಣ, ಧರ್ಮಸಂರಕ್ಷಣ ಕಾರ್ಯಗಳನ್ನು ನಡೆಸಿದನೋ ಹಾಗೆಯೇ ತಿರುವೇಂಕಟಗಿರಿಯ ಶಿಖರದಲ್ಲಿ ನೆಲಸಿರುವ ಸ್ವಾಮಿಯೂ ತನ್ನನ್ನು ಅನನ್ಯವಾಗಿ ಆಶ್ರಯಿಸಿದವರನ್ನು ರಕ್ಷಿಸುವನು.

ಮನುಷ್ಯನನ್ನು ಬಿಡದೆ ಹಿಂಸಿಸುವವು ಎಂದರೆ ಜನನ, ಮರಣ, ಜರೆ ಮತ್ತು ವ್ಯಾಧಿಗಳು. ಇವುಗಳನ್ನು ತೊಲಗಿಸುವುದಕ್ಕೆ ಭಗವಂತನ ಅಡಿದಾವರೆಗೆ ಶರಣಾಗುವುದು ಮತ್ತು ಅವುಗಳನ್ನು ಸದಾ ಚಿಂತಿಸುತ್ತಿರುವುದೇ ಮಾರ್ಗ.

10. வைத்த நாள் வரை எல்லை குறுகிச் சென்று,

எய்த்திளைப்பதன் முன்னம் அடைமினோ,

பைத்த பாம்பணையான் திருவேங்கடம்,

மொய்த்த சோலை மொய் பூந்தடந்தாழ்வரே.

ವೈತ್ತನಾಳ್‌ವರೈ ಎಲ್ಲೈ ಕುಱುಗಿ[illegible]

ಎಯ್ತ್ತಿಳೈಪ್ಪದನ್ ಮುನ್ನಮ್ ಅಡೈಮಿನೋ,
ಪೈತ್ತ ಪಾಮ್ಬಣೈಯಾನ್ ತಿರುವೇಙ್ಗಡಮ್,
ಮೊಯ್ತ್ತ ಶೋಲೈ ಮೊಯ್ ಪೂನ್ದಡನ್ ತಾೞ್ವರೇ.

ವೈತ್ತ வைத்த = ಇಟ್ಟಿರುವ (ಕೊಟ್ಟಿರುವ), ನಾಳ್ ವರೈ நாள்வரை = ಕಾಲದ ವರೆಗಿನ, ಎಲ್ಲೈ எல்லை = ಮಿತಿಯನ್ನು, ಕುಱುಗಿ குறுகி = ಸಮೀಪಿಸಿ, ಎಯ್ತ್ತು எய்த்து = ಬೇಸತ್ತು (ಸೊರಗಿ), ಇಳೈಪ್ಪದನ್ ಮುನ್ನಮ್ இளைப்பதன் முன்னம் = ಕೃಶರಾಗುವುದಕ್ಕೆ ಮುಂಚೆಯೇ, ಅಡೈಮಿನೋ அடைமினோ = ಸೇರಿ, ಪೈತ್ತ பைத்த = ಹೆಡೆಗಳುಳ್ಳ, ಪಾಮ್ಬು ಅಣೈಯಾನ್ பாம்பு அணையான் = ಹಾವಿನ ಹಾಸಿಗೆಯುಳ್ಳವನ, ತಿರುವೇಙ್ಗಡಮ್ திருவேங்கடம் = ತಿರುವೇಂಕಟಗಿರಿಯು, ಮೊಯ್ತ್ತ மொய்த்த = ದಟ್ಟವಾದ, ಶೋಲೈ சோலை = ತೋಪುಗಳನ್ನು, ಮೊಯ್ மொய் = ತುಂಬಿದ (ಸಮೃದ್ಧಿಯಾದ), ಪೂ பூ = ಹೂಗಳ, ತಡಮ್ தடம் = ತಟಾಕಗಳ, ತಾೞ್ವರೇ தாழ்வரை = ಬೆಟ್ಟದ ತಪ್ಪಲನ್ನು.

ಇಟ್ಟಿರುವ ಕಾಲದ ವರೆಗಿನ ಮಿತಿಯನ್ನು ಸಮೀಪಿಸಿ, ಸೊರಗಿ ಕೃಶರಾಗುವುದಕ್ಕೆ ಮುಂಚೆಯೇ ಹೆಡೆಗಳುಳ್ಳ ಹಾವಿನ ಹಾಸಿಗೆಯುಳ್ಳವನ ತಿರುವೇಂಕಟಗಿರಿಯ ದಟ್ಟವಾದ ತೋಪುಗಳನ್ನು, ಸಮೃದ್ಧಿಯಾದ ಹೂಗಳ ತಟಾಕಗಳನ್ನು, ಬೆಟ್ಟದ ತಪ್ಪಲನ್ನು ಹೋಗಿ ಸೇರಿ. (10)

ಇದಲೋಕದ ಜನರಲ್ಲಿ ಕನಿಕರಗೊಂಡು ಆಳ್ವಾರರು ಅವರಿಗೆ ಒಂದು ಹಿತವಚನವನ್ನು ನೀಡುತ್ತಿದ್ದಾರೆ.

ಭಗವಂತನು ನಮಗೆ ದಯೆ ನೀಡಿರುವ ಆಯುಸ್ಸಿನ ಮಿತಿಯನ್ನು ಮುಟ್ಟಿ ಮುಗಿಯುವುದರೊಳಗಾಗಿ, ಆತನು ಶೇಷಶಯನನಾಗಿ ನೆಲೆಸಿರುವ ಪವಿತ್ರಸ್ಥಳಗಳಿಗೆ ಹೋಗಿ, ಅವನನ್ನು ಪೂಜಿಸಿ, ಅವನ ಸೇವೆಯಲ್ಲಿ ಭಾಗವಹಿಸಿ, ಉಜ್ಜೀವನಗೊಳ್ಳಬೇಕೆನ್ನುತ್ತಾರೆ. ತಿರುವೇಂಕಟಗಿರಿ ಎಂಬುದೇ 'ಶೇಷ'ನಾಗರೂಪ, ಅದರ ಶಿಖರದಲ್ಲಿ ನೆಲೆಸಿರುವ ಸ್ವಾಮಿ ನಿಜವಾಗಿ ಶೇಷಶಯನನೇ! ಅಲ್ಲದೆ, ತಿರುವೇಂಕಟಗಿರಿಯು ಪ್ರಕೃತಿ ರಮಣೀಯವಾದ ಸ್ಥಳ. ಅದರ ತೋಪುಗಳು, ತಟಾಕಗಳು, ಹೂಗಳು ಎಲ್ಲವೂ ಆ ಪವಿತ್ರಸ್ಥಳದ ಸೊಬಗನ್ನು ಹೆಚ್ಚಿಸುವುವು. ಅಲ್ಲಿಗೆ ಹೋಗಿ ಭಗವಂತನ ಸೌಂದರ್ಯವನ್ನು, ಅದರ ನಡುವೆ ನೆಲೆಸಿರುವ ಪರಮೇಶ್ವರನನ್ನು ಕಣ್ಣಾರ ಕಂಡು, ಪೂಜಿಸಿ, ಆನಂದಿಸಿ, ಕೃತಾರ್ಥರಾಗಬೇಕೆಂಬುದು ಕರೆ.

11 தாள் பரப்பி மண் தாவிய ஈசனை,
நீள் பொழில் குருகூர்ச் சடகோபன் சொல்,
கேழிலாயிரத்து இப்பத்தும் வல்லவர்,
வாழ்வர் வாழ்வெய்தி ஞாலம் புகழவே.

ಶೌಳ್ ವರಪ್ಪು ಮುಣ್ಣೋ ಶಾವಿಯು ಎಲ್ಲಶನ್ನೈ,
ನೀಳ್ ಪೊಟಿಲ್ ಶುರುಧ್ಯಾರ್ ಚ್ಚದ ದ್ಯೋವಿನ್ ಶೋಲ್,
ಕೇಟ್ಟು ಆರುರಶ್ತು ಇಪ್ಪುರಶ್ತುಮಾ ವಲ್ಲವರ್,
ವಾಟ್ಟುವರ್ ವಾಟ್ಟೊರುದು ಇಂಗಿಲವಾ ಪುದಲಿವೇ.

ಶೌಳ್ = ಶಿರುವಡಿಯನ್ನು, ವರಪ್ಪು = ವಿಸ್ತಾರ, ಮುಣ್ಣೋ = ಭಗವಂತನನ್ನು, ಶಾವಿಯು = ಅಳಿದುಕೊಂಡ, ಎಲ್ಲಶನ್ನೈ = ಸರ್ವೇಶ್ವರನನ್ನು, ನೀಳ್ ಪೊಟಿಲ್ = ವಿಸ್ತಾರವಾದ ಉಪವನಗಳ, ಶುರುಧ್ಯಾರ್ = ಶಿರುಕ್ಕುರುಧ್ಯಾರ, ಚದ್ಯೋವಿನ್ = ಶಠಕೋಪನ (ನಮ್ಮಾಳ್ವಾರರ), ಶೋಲ್ = (ಸ್ತುತಿಸಿದ) ವಾಶುಕಗಳಾದ, ಕೇಟ್ಟು ಇಲ್ = ಒಂದು ಪಾವಿರದಲ್ಲಿ, ಇಶ್ತು ಪಾಟಯಿಲ್ಲದ, ಆರುರಶ್ತು = ಒಂದು ಪಾವಿರದಲ್ಲಿ, ಇಪ್ಪುರಶ್ತುಮ್ = ಈ ಹತ್ತನ್ನು, ವಲ್ಲವರ್ = ಬಲ್ಲವರು, ವಾಟ್ಟುವರ್ = ಬದುಕುವರು, ವಾಟ್ಟೊರುದು = (ನಿಜವಾದ) ಬಾಳ್ವೆಯನ್ನು ಪಡೆದುಕೊಂಡು, ಇಂಗಿಲವಾ = ಲೋಕ ಶಿವಲ್ಲಿಯೂ, ಪುದಲಿವೇ = ಪೊಗಳುವಂತೆ.

ಶಿರುವಡಿಯನ್ನು ವಿಸ್ತರಿಸಿ, ಭಗವಂತನನ್ನು ಅಳಿದುಕೊಂಡ ಸರ್ವೇಶ್ವರನನ್ನು ವಿಸ್ತಾರವಾದ ಉಪವನಗಳ ಶಿರುಕ್ಕುರುಧ್ಯಾರ ಶಠಕೋಪನ (ನಮ್ಮಾಳ್ವಾರರು) ಸ್ತುತಿಸಿದ ವಾಶುಕಗಳಾದ ಒಂದು ಪಾವಿರದಲ್ಲಿ ಪಾಟಯಿಲ್ಲದ ಈ ಹತ್ತನ್ನು ಬಲ್ಲವರು ನಿಜವಾದ ಬಾಳ್ವೆಯನ್ನು ಪಡೆದುಕೊಂಡು, ಲೋಕವೆಲ್ಲವೂ ಪೊಗಳುವಂತೆ ಬಾಳುತ್ತಾರೆ. (11)

ಈ ದಶಕಕ್ಕೆ ಇದು ಫಲಶ್ರುತಿ. ಈ ಹತ್ತು ಪಾಶುರಗಳನ್ನು ಚೆನ್ನಾಗಿ ಅರಿತುಕೊಂಡು, ಅದರಂತೆ ನಡೆಯುತ್ತಾ, ಶಮ್ಮ ಆಯುಸ್ಸನ್ನು ಕಳೆಯುವವರ ಕೀರ್ತಿಯು ನಕ್ಷತ್ರವಿರುವವರೆಗೂ ಇಲ್ಲಿ ಹೇಳಲಾಗಿದೆ.

"ವಾಟ್ಟುವರ್ ವಾಟ್ಟೊರುದು ಇಂಗಿಲವಾ ಪುದಲಿವೇ" — ಈ ಹತ್ತು ಪಾಶುರಗಳನ್ನು ಬಲ್ಲ ಜನರು ಇಹಲೋಕದಲ್ಲಿ ಅವರು ಬದುಕಿರುವವರೆಗೂ ಆದರ್ಶ ಜೀವನವನ್ನು ನಡೆಸುವರು. ಅನಂತರ, ಅವರು 'ನಿಜವಾದ ಬಾಳ್ವೆಯನ್ನು' ಎಂದರೆ, ಅಮರತ್ವವನ್ನು, ಪರಮಪದವಾಸವನ್ನು, ಭಗವಂತನ ನಿತ್ಯಕೈಂಕರ್ಯವನ್ನು ಪಡೆದುಕೊಳ್ಳುವರು. ಆದ್ದರಿಂದ, ಅವರು ಇಹಲೋಕದವರಿಗೆ ಒಂದು ಆದರ್ಶ ಪುರುಷರಾಗುವುದರಿಂದ, ಅವರನ್ನು ಇಹಲೋಕದಲ್ಲಿ, ಚಿರಕಾಲವೂ ಕೊಂಡಾಡುವಂತಾಗುತ್ತದೆ. ಹಂಸ ಫಲಶ್ರುತಿ.

10.12.83

— o —

14.12.83

ತಿರುವಾಯ್ ಮೊಳಿ - ಮೂರನೆಯ ದಶಕ - ನಾಲ್ಕನೆಯ ತಿರುವಾಯ್ ಮೊಳಿ

திருவாய்மொழி - மூன்றாம்பத்து - நான்காந்திருவாய்மொழி

4. ಪುಗೞುನಲ್ಲೊರುವನ್ - புகழுநல் ஒருவன்

1. புகழுநல்லொருவனென்கோ
பொருவில்சீர்ப்பூமியென்கோ,
திகழுந்தண் பரவையென்கோ
தீயென்கோ வாயுவென்கோ,
நிகழுமாகாசமென்கோ நீள்
சுடரிரண்டுமென்கோ,
இகழ்விலிவ்வனைத்துமென்கோ
கண்ணனைக் கூவுமாறே.

ಪುಗೞುನಲ್ಲೊರುವನೆನ್ಗೋ ಪೊರುವಿಲ್ ಶೀರ್ಪ್ಪೂಮಿಯೆನ್ಗೋ,
ತಿಗೞುನ್ದಣ್ ಪರವೈಯೆನ್ಗೋ ತೀಯೆನ್ಗೋ ವಾಯುವೆನ್ಗೋ,
ನಿಗೞುಮಾಕಾಶಮೆನ್ಗೋ ನೀಳ್ ಶುಡರಿರಣ್ಡುಮೆನ್ಗೋ,
ಇಗೞ್ವಿಲಿವ್ವನೈತ್ತುಮೆನ್ಗೋ ಕಣ್ಣನೈಕ್ಕೂವುಮಾಱೇ.

ಪುಗೞುಮ್ புகழும் = ಸ್ತುತಿಸಲ್ಪಟ್ಟ (ಸ್ತುತಿಗೆ ಅರ್ಹವಾದ), ನಲ್ நல் = ಉತ್ತಮವಾದ, ಒರುವನ್ ஒருவன் = ಜೋಡಿಯಿಲ್ಲದವನು ಇವನು, ಎನ್ಗೋ என்கோ = ಎನ್ನುವುದೇ (ಎನ್ನಲೇ), ಪೊರುವು ಇಲ್ பொருவு இல் = ಜೋಡಿಯಿಲ್ಲದ, ಶೀರ್ சீர் = ಗುಣಗಳ, ಪೂಮಿ ಎನ್ಗೋ பூமி என்கோ = ಭೂಮಿ ಎನ್ನಲೋ (ಎನ್ನುವುದೋ), ತಿಗೞುಮ್ திகழும் = ಪ್ರಕಾಶಿಸುವ, ತಣ್ தண் = ತಂಪಿನ, ಪರವೈ பரவை = ನೀರ ನೆಲೆಗಳು, ಎನ್ಗೋ என்கோ = ಎನ್ನುವುದೋ, ತೀ ಎನ್ಗೋ தீ என்கோ = ಅಗ್ನಿ ಎನ್ನುವುದೋ, ವಾಯು ಎನ್ಗೋ வாயு என்கோ = ವಾಯು ಎನ್ನುವುದೋ, ನಿಗೞುಮ್ நிகழும் = ಎಲ್ಲೆಡೆಯಲ್ಲೂ ವ್ಯಾಪಿಸಿರುವ, ಆಕಾಶಮ್ ಎನ್ಗೋ ஆகாசம் என்கோ = ಆಕಾಶ ಎನ್ನುವುದೋ, ನೀಳ್ நீள் = ವಿಸ್ತಾರವಾದ, ಶುಡರ್ ಇರಣ್ಡುಮ್ ಎನ್ಗೋ சுடர் இரண்டும் என்கோ = ಎರಡು ಜ್ಯೋತಿಗಳು ಎನ್ನುವುದೋ, ಇಗೞ್ವು ಇಲ್ இகழ்வு இல் = ನಿಂದನೆಗೆ ಅವಕಾಶವಿಲ್ಲದ (ವಿಶುದ್ಧವಾದ), ಇವ್ ಅನೈತ್ತುಮ್ ಎನ್ಗೋ இவ் அனைத்தும் என்கோ = ಇವೆಲ್ಲವೂ ಎನ್ನುವುದೋ, ಕಣ್ಣನೈ கண்ணனை = ಆಶ್ರಿತಪರತಂತ್ರನಾದವನನ್ನು, ಕೂವುಮ್ ಆಱೇ கூவும் அறே = ಕೂಗುವ ದಾರಿ, (ಕೂಗಿ ಕರೆಯುವ ರೀತಿಯು).

Garani Srinivasan

ಅಕ್ಷರಪುರುಷನಾದವನನ್ನು ಕೂಗಿ ಕರೆಯುವ ರೀತಿಯಲ್ಲಿ (ಅವನನ್ನು) ಸ್ತುತಿಗೆ ಶಕ್ಯವನಾದ ಉತ್ತಮನಾದ ಸಾಟಿಯಿಲ್ಲದ 'ಬಬ್ಬನು' ಎನ್ನುವುದೇ, ಅದ್ವಿತೀಯವಾದ ಸದ್ಗುಣಗಳುಳ್ಳ 'ಭೂಮಿ' ಎನ್ನುವುದೇ, ಪ್ರಕಾಶಿಸುವ ತಂಪಾದ 'ನೀರ್ಗಲೆ'ಗಳು ಎನ್ನುವುದೇ, 'ಅಗ್ನಿ' ಎನ್ನುವುದೇ, 'ವಾಯು' ಎನ್ನುವುದೇ, ಎಲ್ಲೆಲ್ಲೂ ವ್ಯಾಪಿಸಿರುವ 'ಆಕಾಶ' ಎನ್ನುವುದೇ, ವಿಸ್ತಾರವಾದ ಎರಡು 'ಜ್ಯೋತಿ'ಗಳು ಎನ್ನುವುದೇ, ನಿಂದನೆಗೆ ಅವಕಾಶವಿಲ್ಲದ ಪರಿಶುದ್ಧವಾದ 'ಇವೆಲ್ಲವೂ' ಎನ್ನುವುದೇ? (1)

ಹಿಂದಿನ ಕೆಲವು ಪಾಠಗಳ ವಿಷಯದಲ್ಲಿ ಭಗವಂತನ ಹೆಸರನ್ನು ಕಲಿಕವಾಗದ್ದು. ಭಗವಂತನನ್ನು ಏನೆಂದು ಕರೆಯುವುದು? ಅವನಿಗೆ 'ಅನಂತ' ಎಂಬುದೊಂದು ಹೆಸರಲ್ಲವೇ? ಆದ್ದರಿಂದ, ಅವನನ್ನು ಹೇಗೆ ವಿವರಿಸಿ, ಯಾವ ಹೆಸರಿನಿಂದ ಕರೆದರೆ ಅದು ಯುಕ್ತವೆನಿಸುವುದು?

ಭಗವಂತನನ್ನು ಹೇಗೆ ಗುರುತಿಸುವುದು? ಹೆಸರಿನಿಂದಲೇ, ಅಥವಾ ರೂಪದಿಂದಲೇ? ಇಲ್ಲವೆ, ಅವೆರಡರಿಂದಲೇ? ಅವನು ನಾಮರೂಪಗಳಿಗಿಂತಲೂ ಭಿನ್ನವಾದವನಲ್ಲವೇ? – ಎಂಬುದು ಇಲ್ಲಿ ತರ್ಕಕ್ಕೆ ಮೊದಲಾಗಿದೆ.

ಭೂಮಿ, ನೀರು, ಬೆಂಕಿ, ಗಾಳಿ, ಆಕಾಶ - ಇವುಗಳನ್ನು 'ಪಂಚಮಹಾಭೂತಗಳು' ಎನ್ನುತ್ತಾರೆ. ಭಗವಂತನು ಇವುಗಳನ್ನು ಸೃಷ್ಟಿಸಿ, ಇವುಗಳ ಮೂಲಕ ಇಡೀಯ ಸೃಷ್ಟಿಯ ಚರಾಚರ, ಜೀವಜಾತಿಗಳ ವಸ್ತುಗಳೆಲ್ಲವನ್ನು ಸೃಷ್ಟಿಸಿದ್ದಾನೆ. ಆದ್ದರಿಂದ, ಸೃಷ್ಟಿಯನ್ನು ಭಗವತ್ಸ್ವರೂಪ ಎನ್ನುವುದೇ? ಅವುಗಳ ಒಂದೊಂದನ್ನು ಅವನ ಸ್ವರೂಪವೆನ್ನುವುದೇ? ಅವುಗಳ ಹೆಸರಿನಿಂದಲೇ ಭಗವಂತನನ್ನು ಕರೆಯುವುದೇ?

ಆಚಾರ್ಯರು ಹೇಳುತ್ತಾರೆ: ಭಗವಂತನನ್ನು (ಅರಿತುಕೊಳ್ಳಲು ಕಷ್ಟಸಾಧ್ಯವಾದ ಬರಿಯ ಮಾತುಗಳಿಂದ, ಎಂದರೆ, 'ಅಕ್ಷರಪುರುಷ', 'ದಿವ್ಯತ್ರೈಲೋಕ್ಯ', 'ಉತ್ತಮ', 'ಸಾಟಿಯಿಲ್ಲದವನು', 'ಸ್ತುತಿಗೆ ಶಕ್ಯವನು' ಎನ್ನುವುದೇ? ಹಾಗಲ್ಲದೆ, ಕಣ್ಣಿಗೆ ಕಾಣುವ ವಸ್ತುಗಳ ರೂಪದಲ್ಲಿ ಮತ್ತು ಅವುಗಳ ಹೆಸರಿನಿಂದಲೇ ಅವನನ್ನು ಗುರುತಿಸುವುದೇ? ಎಂದರೆ, 'ಕ್ಷಮೆ' ಮುಂತಾದ ಅದ್ವಿತೀಯವಾದ ಗುಣಗಳುಳ್ಳ 'ಭೂಮಿ' ಎನ್ನುವುದೇ? ಭೂಮಿಗಿಂತಲೂ ವಿಸ್ತಾರವಾಗಿ ಹರಡಿ ಅಲೆಗಳಿಂದ ತುಂಬಿ, ಹೊಳೆಯುವ 'ನೀರು' ಎನ್ನುವುದೇ? ಎಲ್ಲವನ್ನು ಸುಡುವ 'ಬೆಂಕಿ' ಎನ್ನುವುದೇ? ಹಾಗೆಯೇ, ಎಲ್ಲವನ್ನು ಶುದ್ಧಮಾಡುವ 'ಗಾಳಿ' ಎನ್ನುವುದೇ? ಎಲ್ಲೆಲ್ಲೂ ವ್ಯಾಪಿಸಿರುವ 'ಆಕಾಶ' ಎನ್ನುವುದೇ? [illegible], ಕ್ರಮವರಿತು ಬೆಳಗುವ 'ಸೂರ್ಯ', 'ಚಂದ್ರ' ಎನ್ನುವುದೇ? ಅಥವಾ, ಕಳಂಕರಹಿತವಾದ ಇವೆಲ್ಲವೂ ಒಟ್ಟಾದ ಇಡೀಯ ಸೃಷ್ಟಿಯೇ ಅವನು ಎನ್ನುವುದೇ?

ಮೇಲೆ ಹೇಳಿದ ವಸ್ತುಗಳು ಭಗವಂತನ ಅಲಂಕಾರಗುಣಗಳನ್ನು ತೋರಿಸಬಹುದು. ಸೃಷ್ಟಿಯ ವಸ್ತುಗಳಿಗೆ ಅದು ಸಹಜವೇ. ಆ ಎಲ್ಲ ವಸ್ತುಗಳ ಗುಣಗಳನ್ನು, ಇನ್ನು ಅಪರಿಮಿತವಾದ ಅನೇಕ ಗುಣಗಳನ್ನು ಉಳ್ಳವನು ಭಗವಂತ. ಅವನ ಗುಣಗಳನ್ನು ಪೂರ್ಣವಾಗಿ ಹೇಳಲು ಸಾಧ್ಯವಿಲ್ಲ ಎಂದು ಹೇಳುವಂತಿದೆ.

2. கூவுமாறறியமாட்டேன்
குன்றங்களனைத்துமென்கோ,
மேவுசீர் மாரியென்கோ
விளங்குதாரகைகளென்கோ,
நாவியல் கலைகளென்கோ
ஞானநல்லாவியென்கோ,
பாவுசீர்க் கண்ணனெம்மான்
பங்கயக்கண்ணனையே.

ಕೂವುಮಾಱಱಿಯಮಾಟ್ಟೇನ್ ಕುನ್ಱಙ್ಗಳನೈತ್ತುಮೆನ್ಗೋ,
ಮೇವುಶೀರ್ ಮಾರಿಯೆನ್ಗೋ ವಿಳಙ್ಗುತಾರಗೈಗಳೆನ್ಗೋ,
ನಾವಿಯಲ್ ಕಲೈಗಳೆನ್ಗೋ ಞಾನನಲ್ಲಾವಿಯೆನ್ಗೋ,
ಪಾವುಶೀರ್ಕ್ಕಣ್ಣನೆಮ್ಮಾನ್ ಪಙ್ಗಯಕ್ಕಣ್ಣನೈಯೇ.

ಕೂವುಮಾ ಱಱಿ [illegible] கூவும் ஆறு = ಕೂಗಿ ಕರೆಯುವ ರೀತಿಯನ್ನು, ಅಱಿಯ ಮಾಟ್ಟೇನ್ அறியமாட்டேன் = ಅರಿಯಲಾರೆ, ಕುನ್ಱಙ್ಗಳ್ குன்றங்கள் = ಬೆಟ್ಟಗಳು, ಅನೈತ್ತುಮ್ ಎನ್ಗೋ அனைத்தும் ಎಲ್ಲವೂ ಎಂದು ಹೇಳುವುದೇ, ಮೇವು மேவு = ಆಶ್ರಯವಂತ, ಶೀರ್ சீர் = ಗುಣಸಂಪತ್ತನ್ನುಳ್ಳ, ಮಾರಿ ಎನ್ಗೋ மாரி என்கோ = ಮಳೆ ಎನ್ನಲೋ, ವಿಳಙ್ಗುಮ್ விளங்கும் = ಹೊಳೆಯುವ, ತಾರಗೈಗಳ್ ಎನ್ಗೋ தாரகைகள் என்கோ = ತಾರೆಗಳು ಎನ್ನಲೋ, ನಾ நா = ನಾಲಗೆಗೆ, ಇಯಲ್ இயல் = ಸ್ವಾಭಾವಿಕವಾದ (ಒರವಾದ), ಕಲೈಗಳ್ ಎನ್ಗೋ கலைகள் என்கோ = (ನಾನಾ ವಿಧವಾದ) ಕಲೆ (ಶಾಸ್ತ್ರಗಳನ್ನು) ಎನ್ನುವುದೇ, ಞಾನಮ್ ஞானம் = ಜ್ಞಾನಪೂರ್ಣವಾದ, ನಲ್ ಆವಿ ಎನ್ಗೋ நல் ஆவி என்கோ = ಉತ್ತಮವಾದ (ಅನಂತವಾದ) ಆತ್ಮನನ್ನ ಎನ್ನುವುದೇ, ಪಾವು பாவு = ವಿಸ್ತಾರವಾದ, ಶೀರ್ சீர் = ಕಲ್ಯಾಣಗುಣಗಳುಳ್ಳ, ಕಣ್ಣನ್ கண்ணன் = ಆಕರ್ಷಕ (ಶ್ರೀಕೃಷ್ಣನಂಬ), ಎಮ್ಮಾನ್ನೈ எம்மானை = ನಮ್ಮ ಸ್ವಾಮಿಯನ್ನು, ಪಙ್ಗಯಮ್ ಕಣ್ಣನೈಯೇ பங்கயம் கண்ணனையே = ಕೆಂದಾವರೆಯಂತೆ ಕಣ್ಣುಳ್ಳವನನ್ನೇ.

ಅನಂತ ಕಲ್ಯಾಣ ಗುಣಗಳುಳ್ಳ, ಕೆಂದಾವರೆಯಂತೆ ಕಣ್ಣುಳ್ಳ ಆಕರ್ಷಕನಾದ (ಶ್ರೀಕೃಷ್ಣನಂಬ) ನಮ್ಮ ಸ್ವಾಮಿಯನ್ನು ಕೂಗಿ ಕರೆಯುವ ರೀತಿಯನ್ನು ಅರಿಯೆನಲ್ಲ! 'ಎಲ್ಲಾ ಬೆಟ್ಟಗಳೂ' ಎನ್ನಲೇ, 'ಆಶ್ರಯವಂತ ಗುಣಸಂಪತ್ತನ್ನುಳ್ಳ ಮಳೆ' ಎನ್ನಲೇ, ಹೊಳೆಯುವ 'ತಾರೆಗಳು' ಎನ್ನಲೇ, ನಾಲಗೆಗೆ ಸಹಜ(ಒರವಾದ) ಕಲೆಗಳು

Garani Srinivasan

(ನಾನಾ ಶಾಸ್ತ್ರ ಸಾಹಿತ್ಯಾದಿಗಳು) ಎನ್ನಲೇ, ಜ್ಞಾನಪೂರ್ಣವಾದ ಉತ್ತಮ 'ಆತ್ಮ' ಎನ್ನಲೇ,.. ಏನೆನ್ನಲಿ? (2)

ಹಿಂದಿನ ಪಾಶುರದಲ್ಲಿ, ಭಗವಂತನನ್ನು ಪಂಚಭೂತಗಳ ರೂಪದಿಂದ ನೋಡಿದ್ದಾಯಿತು. ಇಲ್ಲಿ, ಆ ಪಂಚಭೂತಗಳ ಕಾರ್ಯರೂಪವಾದ (ಫಲರೂಪವಾದ) ಸ್ವಾಭಾವಿಕವಾದ ಪ್ರಕೃತಿಸಂಬಂಧವಾದ ಕೆಲವು ವಸ್ತುಗಳು ಭಗವಂತನನ್ನು ತೋರಿಸುತ್ತವೆನ್ನಲಾಗುತ್ತದೆ.

ಭೂಮಿಯ ಒಂದು ರೂಪ 'ಚಿನ್ನ'. ನೀರಿನ ಒಂದು ರೂಪ 'ಮಳೆ'. ತೇಜಸ್ಸಿನ ಒಂದು ರೂಪ 'ನಕ್ಷತ್ರ'. ವಾಯುವಿನ ಒಂದು ರೂಪ ~~[illegible]~~ ನಾಲಿಗೆಗೆ ಶಕ್ಯ ಹಿತವಾದ ಶಬ್ದಜಾಲದಿಂದ ಕೂಡಿದ್ದು ಶಾಸ್ತ್ರಾದಿ 'ಕಲೆ'. ಸರ್ವವ್ಯಾಪಿಯಾದ ಆಕಾಶದ ಒಂದು ರೂಪ ಶುದ್ಧವಾದ 'ಆತ್ಮ'.

ದೂರಕ್ಕೆ ಕಾಣುವ ಚಿನ್ನದ ಸುಂದರವಾದ ಮತ್ತು ಆಕರ್ಷಕವಾದ ನೀಲಿಯಬಣ್ಣ ಮತ್ತು ಆ ಚಿನ್ನದ ಶ್ರೇಷ್ಠತ್ವ - ಇವೆರಡೂ ಭಗವಂತನ ರೂಪವನ್ನು ಹಿರಿಮೆಯನ್ನು ತೋರಿಸುತ್ತವೆ. ಭೂಮಿಯ ಮೇಲಿನ ಎಲ್ಲಾ ಚೇತನಾಚೇತನ ವಸ್ತುಗಳ ಕಾರಕವಲ್ಲವಲ್ಲದಂತೆ, ಅವಕ್ಕೆ ಅವಶ್ಯಕವೆನ್ನುವುದಕ್ಕಿಂತಲೂ ಹೆಚ್ಚಾಗಿಯೇ ನೀರನ್ನೊದಗಿಸುವುದು 'ಮಳೆ'. ಭಗವಂತನ ಔದಾರ್ಯವನ್ನು ತೋರಿಸುತ್ತದೆ. ~~[illegible]~~ ಆಕರ್ಷಕವಾದ ಹೊಳಪನ್ನು (ಕಾಂತಿಯನ್ನು) ಬೀರುತ್ತಾ ಬೆಳಕನ್ನು ತೋರಿಸುವುದು ~~[illegible]~~ ~~[illegible]~~ 'ತಾರೆ'ಗಳು. ಭಗವಂತನ ದಿವ್ಯ ತೇಜಸ್ಸಿನ ಒಂದಂಶವನ್ನು ತೋರಿಸುವುದು. ಉಚ್ಚರಿಸಲು ನಾಲಿಗೆಗೆ ಶಕ್ಯವಾದ, ಮನಸ್ಸಿಗೆ ಹಿತವಾದ, ಜ್ಞಾನ ಕೊಡುವ ಉಚ್ಚರಿಸಲು ನಾಲಿಗೆಗೆ ಶಕ್ಯವಾದ ... ಭಗವಂತನ ದಿವ್ಯ ಗುಣ ಸ್ವಭಾವಗಳ ವಿವರ ದಾಯಕವಾಗಿರುವುದು 'ಕಲೆ'. ಭಗವಂತನ ದಿವ್ಯ ಗುಣಸ್ವಭಾವಗಳ ವಿವರ ನೀಡುವುದಕ್ಕೆ ಶಕ್ತಿಯನ್ನು ಕೊಡುತ್ತ, ಅವನಲ್ಲಿ ಜ್ಞಾನ ಭಕ್ತಿಗಳನ್ನು ಹೆಚ್ಚಿಸುವುದಕ್ಕೆ ಶಕ್ತಿಯನ್ನು ಕೊಡುತ್ತ, ಅವನಲ್ಲಿ ಜ್ಞಾನ ಭಕ್ತಿಗಳನ್ನು ಹೆಚ್ಚಿಸುವುದು ... 'ಆತ್ಮ' (ಜೀವ) ಪರಮಾತ್ಮನದು ಅದು. ಉತ್ತಮವೂ ಜ್ಞಾನಪೂರ್ಣವೂ ಆದ 'ಆತ್ಮ' (ಜೀವ) ಪರಮಾತ್ಮನದ್ದು ಅದು. ಉತ್ತಮವೂ ಜ್ಞಾನಪೂರ್ಣವೂ ಆದ ... ಇವುಗಳ ಆದ್ದರಿಂದ, ಇಲ್ಲಿ ಪ್ರಯೋಗದಿಂದ ಭಗವಂತನನ್ನು ನೆನಪಿಸುವುದು.. ಆದ್ದರಿಂದ, ಇಲ್ಲಿ ಪ್ರಯೋಗದಿಂದ ಭಗವಂತನ ಸೌಂದರ್ಯವನ್ನು, ಔದಾರ್ಯವನ್ನು, ತೇಜಸ್ಸನ್ನು, ಜ್ಞಾನವನ್ನು, ರಕ್ಷಣೆಯನ್ನು ತೋರಿಸುತ್ತವೆ ಎನ್ನಬಹುದು.

ಆಳ್ವಾರರು ಹೇಳುತ್ತಾರೆ: ಭಗವಂತ ಅನಂತಕಲ್ಯಾಣಗುಣಗಳುಳ್ಳವನು. ಕೆಂದಾವರೆಯಂತೆ ಆಕರ್ಷಕ ಸುಂದರವಾದ ಕಣ್ಣುಗಳುಳ್ಳವನು. ಅವನನ್ನು ತಿಳಿಯಲು ಯಾವ ದೇವರು ಶಕ್ತರಾದರೋ ಕಾಣೆ. ಅವನೇ ಸೃಷ್ಟಿಸಿರುವ ನಾನಾ ಮೃಗ ಪಕ್ಷಿಗಳನ್ನು ಗಿಡಮರಗಳನ್ನು ~~[illegible]~~ ತನ್ನ ಆದರದಿಂದ ರಕ್ಷಿಸುವ ಸುಂದರವೂ ಉನ್ನತವೂ ಪವಿತ್ರವೂ ಆದ 'ಚಿನ್ನ' ಎನ್ನಲೇ? ಔದಾರ್ಯದಿಂದ ಭೂಮಿಯನ್ನೆಲ್ಲಾ ತಣಿಸುವ 'ಮಳೆ' ಎನ್ನಲೇ? ಆಕಾಶವನ್ನು ಅಲಂಕರಿಸುವ 'ತಾರೆ' ಎನ್ನಲೇ? ನಾಲಿಗೆಗೆ ಹಿತವಾದ 'ಕಲೆ' ಎನ್ನಲೇ? ಜ್ಞಾನಪೂರ್ಣವಾದ 'ಆತ್ಮ' ಎನ್ನಲೇ? ಏನೆನ್ನಲಿ?

3. பங்கயக்கண்ணனென்கோ
பவளச்செவ்வாயனென்கோ,
அங்கதிரடியனென்கோ
அஞ்சனவண்ணனென்கோ,
செங்கதிர் முடியனென்கோ
திருமறுமார்வனென்கோ,
சங்குசக்கரத்தனென்கோ
சாதிமாணிக்கத்தையே.

ಪಙ್ಗಯಕ್ಕಣ್ಣನೆನ್ಗೋ ಪವಳಚ್ಚೆವ್ವಾಯನೆನ್ಗೋ,
ಅಙ್ಗದಿರಡಿಯನೆನ್ಗೋ ಅಞ್ಜನವಣ್ಣನೆನ್ಗೋ,
ಶೆಙ್ಗದಿರ್ ಮುಡಿಯನೆನ್ಗೋ ತಿರುಮಱುಮಾರ್ವನೆನ್ಗೋ,
ಶಙ್ಗುಚಕ್ಕರತ್ತನೆನ್ಗೋ ಶಾದಿಮಾಣಿಕ್ಕತ್ತೈಯೇ.

ಪಙ್ಗಯಮ್ ಪங்கயம் = ತಾವರೆಯಂತೆ, ಕಣ್ಣನ್ ಎನ್ಗೋ ಕண்ணன் என்கோ = ಕಣ್ಣುಗಳುಳ್ಳವನು ಎನ್ನಲೋ, ಪವಳಮ್ பவளம் = ಹವಳದಂತೆ, ಶೆವ್ವಾಯನ್ ಎನ್ಗೋ செவ்வாயன் என்கோ = ಕೆಂಪನೆಯ ಬಾಯುಳ್ಳವನು (ತುಟಿಯುಳ್ಳವನು) ಎನ್ನಲೋ, ಅಮ್ ಅம் = ಸುಂದರವಾದ, ಕದಿರ್ கதிர் = ಹೊಳೆಯುವ (ಪ್ರಕಾಶಿಸುವ), ಅಡಿಯನ್ ಎನ್ಗೋ அடியன் என்கோ = ತಿರುವಡಿಗಳುಳ್ಳವನು ಎನ್ನಲೋ, ಅಞ್ಜನವಣ್ಣನ್ ಎನ್ಗೋ அஞ்சனவண்ணன் என்கோ = ಕಾಡಿಗೆಯ ಬಣ್ಣದವನು ಎನ್ನಲೋ, ಶೆಮ್ ಕದಿರ್ செம் கதிர் = ಕೆಂಪನೆ ಸುಂದರವಾದ ಹೊಳಪು, ಮುಡಿಯನ್ ಎನ್ಗೋ முடியன் என்கோ = ಕಿರೀಟವನ್ನುಳ್ಳವನು ಎನ್ನಲೋ, ತಿರು திரு = ಶ್ರೀದೇವಿಯನ್ನೂ, ಮಱು மறு = ಶ್ರೀವತ್ಸವನ್ನೂ, ಮಾರ್ವನ್ ಎನ್ಗೋ மார்வன் என்கோ = ಎದೆಯ ಮೇಲೆ ಧರಿಸಿರುವವನು ಎನ್ನಲೋ, ಶಙ್ಗುಚಕ್ಕರತ್ತನ್ ಎನ್ಗೋ சங்குசக்கரத்தன் என்கோ = ಶಂಖಚಕ್ರಗಳುಳ್ಳವನು ಎನ್ನಲೋ, ಶಾದಿಮಾಣಿಕ್ಕತ್ತೈಯೇ சாதிமாணிக்கத்தையே = ಜಾತಿಮಾಣಿಕ್ಯದಂತಿರುವವನನ್ನೇ.

ಜಾತಿಮಾಣಿಕ್ಯವಾದ ಭಗವಂತನನ್ನು ತಾವರೆಯ ಕಣ್ಣುಳ್ಳವನು ಎನ್ನಲೋ, ಹವಳದಂತೆ ಕೆಂಪನೆಯ ಬಾಯುಳ್ಳವನು (ತುಟಿಯುಳ್ಳವನು) ಎನ್ನಲೋ, ಸುಂದರವಾದ ಪ್ರಕಾಶಿಸುವ ತಿರುವಡಿಗಳುಳ್ಳವನು ಎನ್ನಲೋ, ಕಾಡಿಗೆಯಂತೆ ಬಣ್ಣವುಳ್ಳವನು ಎನ್ನಲೋ, ಕೆಂಪನೆ ಸುಂದರವಾದ ಹೊಳಪುಳ್ಳ ಕಿರೀಟವನ್ನುಳ್ಳವನು ಎನ್ನಲೋ, ಶ್ರೀದೇವಿಯನ್ನೂ ಶ್ರೀವತ್ಸವನ್ನೂ ಎದೆಯ ಮೇಲೆ

ಯಾನಕ್ಕೆ ಒಳ್ಳೆ ಎದೆಯುಳ್ಳವನು ಎನ್ನಲೋ, ಶಂಖಚಕ್ರಗಳನ್ನುಳ್ಳವನು (3) ಎನ್ನಲೋ?

ಹಿಂದಿನ ಎರಡು ಪಾಶುರಗಳಲ್ಲಿ ಭಗವಂತನ ದಿವ್ಯ ಸ್ವರೂಪವನ್ನು ವಿವರಿಸಿ ಹೇಳಲಾಯಿತು. ಭಗವಂತನು ತಾನು ಸೃಷ್ಟಿಸಿದ ಪ್ರಕೃತಿಸ್ಥನಾಗಿರುವುದನ್ನು ಹೇಳಲಾಯಿತು. ಈಗ, ಭಗವಂತನ ದಿವ್ಯ ಸೌಂದರ್ಯವನ್ನು ವಿವರಿಸಲು ಯತ್ನಿಸುತ್ತಿದ್ದಾರೆ.

ಆಳ್ವಾರರು ಹೇಳುತ್ತಾರೆ: ಅತಿ ಪರಿಶುದ್ಧವೂ ಪ್ರಕಾಶಪೂರ್ಣವೂ ಆದ ಮಾಣಿಕ್ಯದಂತೆ ಆಕರ್ಷಕವೂ ಆಗಿದ್ದಾನೆ ಭಗವಂತ. ಅವನ ಕಣ್ಣುಗಳೂ ಕೆಂದಾವರೆಯಂತೆ ವಿಶಾಲವೂ ಆಕರ್ಷಕವೂ ಆಗಿವೆ. ಅವನ ಮೃದುವಾದ ಬಾಯಿ (ತುಟಿಗಳು) ಹವಳದಂತೆ ಕೆಂಪಗೆ ಇವೆ. ಅವನ ಕೈಗಳಲ್ಲಿ ಶಂಖಚಕ್ರಗಳಿವೆ ಯಂತೆ ಕಪ್ಪಗೆ ಕಾಂತಿಪೂರ್ಣವಾಗಿವೆ. ಅವನ ಎದೆಯಲ್ಲಿ ಶ್ರೀದೇವಿ ನಿತ್ಯವಾಸ ಮಾಡುತ್ತಾಳೆ. ಅಲ್ಲದೆ, ಶ್ರೀವತ್ಸವೆಂಬ ಪ್ರಕಾಶಪೂರ್ಣ ಮಚ್ಚೆಯೂ ಇದೆ. ಅವನ ತಿರುವಡಿಗಳು ಸುಂದರವೂ ಪ್ರಕಾಶಪೂರ್ಣವೂ ಆಗಿವೆ. ಇಂಥ ದಿವ್ಯಸುಂದರ ಮೂರ್ತಿಯನ್ನು ನಾನು ಏನೆಂದು ಕರೆಯಲಿ?

4. சாதிமாணிக்கமென்கோ
சவிகொள் பொன்முத்தமென்கோ,
சாதிநல்வயிரமென்கோ
தவிவில் சீர் விளக்கமென்கோ,
ஆதியஞ்சோதியென்கோ
ஆதியம்புருடனென்கோ,
ஆதுமில்காலத்தெந்தை
அச்சுதனமலனையே.

ಶಾದಿಮಾಣಿಕ್ಕಮೆನ್ಗೋ ಶವಿಕೊಳ್ ಪೊನ್ ಮುತ್ತಮೆನ್ಗೋ,
ಶಾದಿನಲ್ಲವಯಿರಮೆನ್ಗೋ ತವಿವಿಲ್ ಶೀರ್ ವಿಳಕ್ಕಮೆನ್ಗೋ,
ಆದಿಯಂಜೋದಿಯೆನ್ಗೋ ಆದಿಯಮ್ಪುರುಡನೆನ್ಗೋ
ಆದುಮಿಲ್ ಕಾಲತ್ತೆನ್ದೈ ಅಚ್ಚುದನಮಲನೈಯೇ.

ಶಾದಿ ಮಾಣಿಕ್ಕಮ್ ಎನ್ಗೋ சாதிமாணிக்கம் என்கோ = ಜಾತಿ ಮಾಣಿಕ್ಯ ಎನ್ನಲೋ, ಶವಿ ಕೊಳ್ சவிகொள் = ಹೊಳೆಯುವ, ಪೊನ್ ಮುತ್ತಮ್ ಎನ್ಗೋ பொன் முத்தம் என்கோ = ಚಿನ್ನ ಮುತ್ತು ಎನ್ನಲೋ, (ಸುಂದರವಾದ ಆಣಿಮುತ್ತು ಎನ್ನಲೋ), ಶಾದಿ ನಲ್ ವಯಿರಮ್ சாதி நல் வயிரம் = ಜಾತಿಯ ಶ್ರೇಷ್ಠ ವಜ್ರವೆನ್ನಲೋ, ತವಿವು ಇಲ್ தவிவில் = ಕುಂದು ಇಲ್ಲದ, ಶೀರ್ சீர் = ಉತ್ತಮವಾದ, ವಿಳಕ್ಕಮ್ ಎನ್ಗೋ

ಪಿನಾಕಿಕಾಂ ಗಣಕಾ = ಜ್ಯೋತಿ ಎನ್ನಲೋ, ಆದಿ ಆಕೃತಿ = ಆಧಾರವಾದ,
ಅಮಾ ಅಂ = ಸುಂದರವಾದ, ~~ರೂಪಾಕ್ಷಿ~~ ತೋರದ ಎನ್ನೋ ರೂಪಾಕ್ಷಿ ಗಣಕಾ =
ಜ್ಯೋತಿ ಎನ್ನಲೋ, ಆದಿ ಆಕೃತಿ = ನಿರ್ಮಲವಾದ, ಅಮಾ ಅಂ = ಸುಂದರವಾದ,
ಪುರುಷನ್ ಎನ್ನೋ ೪(ಗ)ಟಣ್ ಗಣಕಾ = ಪುರುಷನೆನ್ನಲೋ, ಆದುಮಾ ಇಲ್
ಆತ್ತುಂ ತಿರ = ಯಾವುದೂ ಇಲ್ಲದ (ಕೊನೆಮೊದಲಿಲ್ಲದ), ಕಾಲತ್ತು ಕಾಲ್ಕ್
ತ್ತು = ಕಾಲಸ್ವರೂಪಿಯಾದ, ಎನ್ದೈ ನಾನ್ರಾತ್ = ನಮ್ಮ ಸ್ವಾಮಿಯಾದ, ಅಚ್ಚು
ತನ್ ಅಕ್ಕತ್ತುಣ್ = ನಾಶರಹಿತನಾದ, ಅಮಲನ್ನೆಯೇ ಅಂಬಲಿನಾಡು =
ಪರಿಶುದ್ಧನಾದವನನ್ನೇ.

ಕೊನೆ ಮೊದಲಿಲ್ಲದ ಕಾಲಸ್ವರೂಪಿಯಾದ, ನಮ್ಮ ಸ್ವಾಮಿಯಾದ, ನಾಶರಹಿತನಾದ ಪರಿಶುದ್ಧನಾದವನನ್ನು ಜಾತಿ ಮಾಣಿಕ್ಯವೆನ್ನಲೋ, ಸುಂದರವಾಗಿ ಹೊಳೆಯುವ ಆಣಿಮುತ್ತು ಎನ್ನಲೋ, ಉತ್ತಮ ಜಾತಿಯ ವಜ್ರವೆನ್ನಲೋ, ಕುಂದು ಕೊರತೆ ಇಲ್ಲದ ಶ್ರೇಷ್ಠವಾದ ದೀಪವೆನ್ನಲೋ, ಆಧಾರವೂ ಸುಂದರವೂ ಆದ ಜ್ಯೋತಿ ಎನ್ನಲೋ, ನಿರ್ಮಲವಾದ ದಿವ್ಯಸುಂದರನಾದ ಪುರುಷನೆನ್ನಲೋ (4) ಏನೆನ್ನಲಿ?

ಭಗವಂತನ ಸೃಷ್ಟಿಯಲ್ಲಿ ಕಂಡುಬರುವ ಅತ್ಯುತ್ತಮ ವಸ್ತುಗಳನ್ನು, ಅವುಗಳ ರಾಶಿ, ಗುಣ, ಹೊಳಪು, ಆಕಾರ, (ಬೆಲೆ) ಮುಂತಾದವುಗಳನ್ನು, ಭಗವಂತನ ನಾಮಗಳನ್ನಾಗಿ ಹೇಳಲಾಗುತ್ತದೆ, ಅವುಗಳ ಹೆಸರನ್ನೇ ಭಗವಂತನನ್ನು ಕರೆಯುವುದಕ್ಕೆ ಏಕೆ ಬಳಸಬಾರದು? ಎಂಬುದು ಈ ಪಾಶುರದ ವಿಷಯ.

ಆಳ್ವಾರರು ಹೇಳುತ್ತಾರೆ: ನನ್ನ ತಂದೆಯೂ ಸ್ವಾಮಿಯೂ ಆದವನು ಭಗವಂತ. ಅವನು ಮೊದಲು ಕೊನೆ ಇಲ್ಲದವನು – ಅನಾದಿ, ಅನಂತ. ಅವನಿಗೆ ನಾಶವೆಂಬುದೇ ಇಲ್ಲ – ಅಚ್ಯುತ. ಅವನಲ್ಲಿ ಯಾವ ಬಗೆಯ ಕುಂದು ಕೊರತೆಯೂ ಇಲ್ಲ. ಪರಿಶುದ್ಧನಾದವನು – ಅಮಲನು. ಅವನನ್ನು ನಾನು ಯಾವ ಹೆಸರಿನಿಂದ ಕರೆಯಲಿ? ಅತಿಶ್ರೇಷ್ಠ ದರ್ಜೆಯ 'ಮಾಣಿಕ್ಯ' ಎನ್ನಲೇ? ಅತ್ಯುತ್ತಮವಾದ 'ಆಣಿಮುತ್ತು' ಎನ್ನಲೇ? ಯಾವ ಬಗೆಯ ಕಳಂಕವೂ ಇಲ್ಲದ ಶ್ರೇಷ್ಠ 'ವಜ್ರ'ವೆನ್ನಲೇ? ಕಳಂಕವಿಲ್ಲದೆ ಶುದ್ಧವಾಗಿ ಬೆಳಗುವ 'ದೀಪ' ಎನ್ನಲೇ? ಆಧಾರವೂ ದಿವ್ಯಸುಂದರನೂ ಆದ 'ಪರಂಜ್ಯೋತಿ' ಎನ್ನಲೇ? ನಿರ್ಮಲನಾದ ಅತ್ಯಂತ ಸುಂದರನಾದ 'ಪರಮಪುರುಷ' ಎನ್ನಲೇ? ಏನೆಂದು ಕರೆಯಲಿ?

ಮಾಣಿಕ್ಯ, ಮುತ್ತು, ವಜ್ರ – ಇವು ನವರತ್ನಗಳಲ್ಲಿ ಸೇರಿದವು. ಉಳಿದವು ಗೋಮೇಧಿಕ, ಪುಷ್ಯರಾಗ, ಮರಕತ, ನೀಲ, ವೈಡೂರ್ಯ, ಮತ್ತು ಹವಳ. ಇವೆಲ್ಲವೂ ಹೊಳಪು ಮತ್ತು ಗುಣ ಇವುಗಳಿಂದ

ಶಿವಶ್ರೇಷ್ಠ.

5. அச்சுதனமலனென்கோ
அடியவர் வினை கெடுக்கும்,
நச்சு மா மருந்தமென்கோ
நலங்கடலமுதமென்கோ,
அச்சுவைக்கட்டியென்கோ
அறுசுவையடிசிலென்கோ,
நெய்ச்சுவை தேறலென்கோ
கனியென்கோ பாலென்கேனோ.

ಅಚ್ಚುತನಮಲನೆನ್ಕೋ ಅಡಿಯವರ್ ವಿನೈಕೆಡುಕ್ಕುಮ್,
ನಚ್ಚು ಮಾ ಮರುನ್ದಮೆನ್ಕೋ ನಲಙ್ಗಡಲಮುದಮೆನ್ಕೋ,
ಅಚ್ಚುವೈಕ್ಕಟ್ಟಿಯೆನ್ಕೋ ಅಱುಶುವೈಯಡಿಶಿಲೆನ್ಕೋ,
ನೆಯ್ಚ್ಚುವೈತ್ತೇಱಲೆನ್ಕೋ ಕನಿಯೆನ್ಕೋ ಪಾಲೆನ್ಕೇನೇ.

ಅಚ್ಚುದನ್ அச்சுதன் = ಅಚ್ಯುತ (ನಾಶರಹಿತನು), ಅಮಲನ್ ಎನ್ಕೋ அமலன் என்கோ = ಅಮಲ (ವಿಶುದ್ಧನು) ಎನ್ನಲೇ, ಅಡಿಯವರ್ அடியவர் = ಆಶ್ರಿತರ, ವಿನೈ வினை = ಪಾಪಗಳನ್ನು (ಕರ್ಮಗಳನ್ನು), ಕೆಡುಕ್ಕುಮ್ கெடுக்கும் = ನೀಗಿಸುವ, ನಚ್ಚು நச்சு = ಆಶಿಸುವಂಥ, ಮಾ ಮರುನ್ದು ಎನ್ಕೋ மா மருந்து என்கோ = ಶ್ರೇಷ್ಠವಾದ ಔಷಧಿ ಎನ್ನಲೇ, ನಲಮ್ நலம் = ಸದ್ಗುಣಗಳ, ಕಡಲ್ கடல் = ಕಡಲಿನ, ಅಮುದಮ್ ಎನ್ಕೋ அமுதம் என்கோ = ಅಮೃತ ಎನ್ನಲೇ, ಅಚ್ಚುವೈ ಕಟ್ಟಿ ಎನ್ಕೋ அ-சுவை கட்டி என்கோ = ಆ ರುಚಿಕರವಾದ ಕಲ್ಲುಸಕ್ಕರೆ ಎನ್ನಲೇ, ಅಱು ಶುವೈ அறு சுவை = ಆರು ವಿಧವಾದ ರುಚಿಯಿಂದ ಕೂಡಿದ, ಅಡಿಶಿಲ್ ಎನ್ಕೋ அடிசில் என்கோ = ಊಟವು ಎನ್ನಲೇ, ನೆಯ್ ಶುವೈ நெய் சுவை = ತುಪ್ಪದ ರುಚಿಯಿಂದ ಕೂಡಿದ, ತೇಱಲ್ ಎನ್ಕೋ தேறல் என்கோ = ಮಧು ಎನ್ನಲೇ, ಕನಿ ಎನ್ಕೋ கனி என்கோ = ಹಣ್ಣು ಎನ್ನಲೇ, ಪಾಲ್ ಎನ್ಕೋ பால் என்கோ = ಹಾಲು ಎನ್ನಲೇ?

ಅಚ್ಯುತ (ನಾಶರಹಿತ), ಅಮಲ (ವಿಶುದ್ಧ) ಎನ್ನಲೇ, ಆಶ್ರಿತರ ಕರ್ಮಗಳನ್ನು ನೀಗಿಸುವ ಆಶಿಸುವಂಥ ಉತ್ತಮವಾದ ಔಷಧಿ ಎನ್ನಲೇ, ಸದ್ಗುಣಗಳ ಕಡಲಿನ ಅಮೃತ ಎನ್ನಲೇ, ಆ ರುಚಿಕರವಾದ ಕಲ್ಲುಸಕ್ಕರೆ ಎನ್ನಲೇ, ಆರು ವಿಧವಾದ ರುಚಿಯ ಊಟವು ಎನ್ನಲೇ, ತುಪ್ಪದ ರುಚಿಯ ಮಧು (ಜೇನುತುಪ್ಪ) ಎನ್ನಲೇ, (ಮಾಗಿದ) ಹಣ್ಣು ಎನ್ನಲೇ, ಹಾಲು ಎನ್ನಲೇ?

Garani Srinivasan

ಹಿಂದಿನ ಪಾಶುರದ ವಿಷಯವನ್ನು ಇಲ್ಲಿಯೂ ಮುಂದುವರಿಸಲಾಗುತ್ತಿದೆ. ಮತ್ತೆ ಸೊಗಸಾದ ಕೆಲವು ರಾಗಗಳನ್ನು ನೀಡಲಾಗಿದೆ.

"ಅಡಿಯವರ್ ವಿನೈ ಕೆಡುಕ್ಕುಮ್ ನಱ್ಱು ಮಾ ಮರುನ್ದು" - ರೋಗಕ್ಕೆ ಮದ್ದು ಹೇಗೋ ಹಾಗೆ ಆಶ್ರಿತರ ಕರ್ಮಗಳನ್ನು ನೀಗಿಸುವುದಕ್ಕೆ ಭಗವಂತ. ಕಾಲ ಕಾಲಾಂತರದಿಂದ ಬರುವ ರೋಗಗಳಿಗೆ ಬೇಕಾಗುವ ಔಷಧ ಬಲು ಬಲವಾಗಿ, ಅದ್ಭುತವಾದ್ದಾಗಿಯೇ ಇರಬೇಕು. ಹಾಗೆಯೇ, ಮನುಷ್ಯನು ಜನ್ಮ ಜನ್ಮದಲ್ಲಿ ಮಾಡುವ ಪಾಪ ಪುಣ್ಯ ಕರ್ಮಗಳನ್ನು ಆಯಾ ಜನ್ಮದಲ್ಲೇ ತೀರಿಸಲು ಸಾಧ್ಯವಾಗುವುದಿಲ್ಲವಾದ್ದರಿಂದ, ಅವುಗಳನ್ನು ಮುಂದಿನ ಜನ್ಮಗಳಿಗೂ ಕೊಂಡೊಯ್ಯಬೇಕಾಗುವುದು. ಮತ್ತು, ಅವುಗಳ ಫಲವನ್ನು ಅನುಭವಿಸುತ್ತಲೂ ಇರಬೇಕಾಗುವುದು. ಭಗವಂತನ ಆಶ್ರಯವೂ ಅವನ ಕೃಪೆಯೂ ಮಾತ್ರವೇ ಮನುಷ್ಯನನ್ನು ಈ ಕರ್ಮ ಬಂಧನದಿಂದ ತಪ್ಪಿಸುವುದಕ್ಕೆ ಸಾಧ್ಯ ಎಂದು ಅರ್ಥ.

"ನಲ್ಲಿದಲಮುದಮ್" - ಹಾಲ್ಗಡಲಲ್ಲಿ ~~ಹುಟ್ಟು~~ ಹುಟ್ಟಿದ ನಾನಾ ವಸ್ತುಗಳ ನಡುವೆ 'ಅಮೃತ'ವು ಹೇಗೆ ಅದನ್ನು ಸೇವಿಸಿದವರೆಲ್ಲಾ ~~[illegible]~~ ಅಮರತ್ವವನ್ನುಂಟು ಮಾಡಿತೋ ಹಾಗೆಯೇ, ಭಗವಂತನಲ್ಲಿರುವ ಗುಣಗಳೆಂಬ ಕಡಲಲ್ಲಿ ಹುಟ್ಟಿದ 'ಕೃಪೆ' ಎಂಬುದು ಅಮೃತ. ಅದರಿಂದ ತಪ್ಪದೆ ಅಮರತ್ವವುಂಟಾಗುವುದು.

"ಅಟ್ಟುವೈತ್ತಟ್ಟಿ" - ಎಲ್ಲರೂ ಆಶಿಸುವಂಥ ಅತಿ ಮಧುರವಾದ ಕಲ್ಲುಸಕ್ಕರೆ ಹೇಗೋ ಹಾಗೆ ಭಗವಂತ.

"ಅಱುಶುವೈ ಅಡಿಶಿಲ್" - ಬಲು ರುಚಿಕರವಾದ 'ಅನ್ನ' ಅಥವಾ 'ಷಡ್ರಸ' ಇದ್ದ ಹಾಗೆ ಅದ್ಭುತವಾದ ಭೋಜ್ಯವಾದ ರುಚಿಯುಳ್ಳ ಆಸ್ವಾದಕರವಾದ 'ಅನ್ನ'ವೇ ಭಗವಂತ.

"ನೆಯ್ಶುವೈತ್ತೇಱಲ್" - ತುಂಬ ಇಷ್ಟಪಡತಕ್ಕ ಉಪ್ಪಾಳ ಮಿಠಾಯಿ ಸಂಪಾದನೆಯಿಂದ ಕೂಡಿದ್ದ 'ಜೇನುತುಪ್ಪ'. ಹಾಗೆಯೇ, ಮಧುರವಾದ ವಸ್ತುಗಳಲ್ಲಿ ಅತ್ಯಂತ ಇಷ್ಟಪಡತಕ್ಕ ವಸ್ತು ಭಗವಂತ.

'ಕನಿ, ಪಾಲ್' - ಹಣ್ಣುಗಳಲ್ಲಿ ಚೆನ್ನಾಗಿ ತಿಳಿದು ಮಾಗಿರುವ ಮಾವಿನ ಹಣ್ಣು, ಹಲಸಿನ ಹಣ್ಣು, ಮತ್ತು ಬಾಳೆಯ ಹಣ್ಣು - ಇವು ತುಂಬ ಸ್ವಾದುವಾಗಿ ತಿನ್ನಲು ಆಕರ್ಷಕವಾದವು. ಹಾಲು ಎಲ್ಲರೂ ಇಷ್ಟಪಡುವಂಥ ರುಚಿಕರವಾದ ಆಹಾರ. ಅದನ್ನು 'ಅಮೃತ' ಎಂದೇ ಕರೆಯುತ್ತಾರೆ. ಭಗವಂತನು ಹಾಲಿನಂತೆ ಶ್ರೇಷ್ಠ ವಸ್ತುವೂ ಹೌದು; ಹಣ್ಣಿನಂತೆ ಆಸೆಯ ಪ್ರೀತಿಕರವಾದ ವಸ್ತುವೂ ಹೌದು.

ಆಳ್ವಾರರು ಹೇಳುತ್ತಾರೆ: ಭಗವಂತನನ್ನು 'ಅಚ್ಯುತ', 'ಅಮಲ' ಎಂದು ನಿರಂತರವಾದ ನಾಮಗಳಿಂದ ಕರೆಯುತ್ತಲೇ, ಅಥವಾ, ಆಶ್ರಿತ ಜನರ ಜನ್ಮಜನ್ಮಗಳಿಂದಲೂ ಅಂಟಿಬಂದಿರುವ ಕರ್ಮ ಬಂಧನವೆಂಬ ರೋಗವನ್ನು ನಿವಾರಣೆ ಮಾಡತಕ್ಕ ದಿವ್ಯೌಷಧಿ

ಎನ್ನಲೋ, ಸಮುದ್ರಗಳೆಂಬ ಕಡಲಲ್ಲಿ ಅಮರತ್ವವನ್ನು ಕೊಡುವ 'ಅಮೃತ'ವನ್ನಲೋ, ಎಲ್ಲರೂ ಬಯಸುವ ಮಧುರವಾದ 'ಕಲ್ಲುಸಕ್ಕರೆ' ಎನ್ನಲೋ, ತುಂಬ ಜನಪ್ರಿಯವಾದ 'ಅನ್ನ' ಎನ್ನಲೋ, ಬಲು ಬಯಸುವ 'ಜೇನುತುಪ್ಪ' ಎನ್ನಲೋ, ಕಳಿತು ಮಾಗಿರುವ 'ಹಣ್ಣು' ಎನ್ನಲೋ, ಅಮೃತಕ್ಕೆ ಸಮನಾಗಿ ಆಸ್ವಾದನೀಯ ಪೋಷಿಸುವಂಥ 'ಹಾಲು' ಎನ್ನಲೋ? ಏನೆನ್ನಲಿ?

ಮನುಷ್ಯನು ಬಳಸುವ ಆಹಾರ ವಸ್ತುಗಳನ್ನು - ಧಾರಕ, ಪೋಷಕ, ಲೇಹ್ಯ, ಚೋಷ್ಯ ಎಂದು ನಾಲ್ಕು ಬಗೆಯಾಗಿ ವರ್ಗೀಕರಿಸುತ್ತಾರೆ. ಈ ನಾಲ್ಕು ವಸ್ತುಗಳೂ ಭಗವಂತನೇ ಆಗಿದ್ದಾನೆ ಎಂದು ಹೇಳಿದ ಹಾಗೆ ಮೇಲಿನ ವಿವರಣೆ ಇಲ್ಲಿ ಕಂಡುಬರುತ್ತದೆ.

6. பாலென்கோ நான்கு வேதப்பயனென்கோ, சமய நீதி
நூலென்கோ நுடங்கு கேள்வியிசையென்கோ, இவற்றுள் நல்ல
மேலென்கோ வினையின் மிக்க பயனென்கோ, கண்ணனென்கோ
மாலென்கோ மாயனென்கோ வானவராதியையே.

ಪಾಲೆನ್ಕೋ ನಾನ್ಕು ವೇದಪ್ಪಯನೆನ್ಕೋ, ಶಮಯನೀದಿ
ನೂಲೆನ್ಕೋ ನುಡಙ್ಗು ಕೇಳ್ವಿಯಿಶೈಯೆನ್ಕೋ, ಇವಱ್ಱುಳ್ ನಲ್ಲ
ಮೇಲೆನ್ಕೋ ವಿನೈಯಿನ್ ಮಿಕ್ಕ ಪಯನೆನ್ಕೋ, ಕಣ್ಣನೆನ್ಕೋ.
ಮಾಲೆನ್ಕೋ ಮಾಯನೆನ್ಕೋ ವಾನವರಾದಿಯೈಯೇ.

ಪಾಲ್ ಎನ್ಕೋ பால் என்கோ = 'ಹಾಲು' ಎನ್ನಲೇ, ನಾನ್ಕು ವೇದಮ್ நான்கு வேதம் = ನಾಲ್ಕು ವೇದಗಳ, ಪಯನ್ பயன் = ಸಾರ, ಎನ್ಕೋ என்கோ = ಎನ್ನಲೇ, ಶಮಯಮ್ சமயம் = ವೈದಿಕಧರ್ಮದ, ನೀದಿ நீதி = ನೀತಿ (ಮಾರ್ಗ)ವನ್ನು ತಿಳಿಸುವ, ನೂಲ್ ಎನ್ಕೋ நூல் என்கோ = ಶಾಸ್ತ್ರಗಳು ಎನ್ನಲೇ, ನುಡಙ್ಗು நுடங்கு = ಕಂಪನಗಳಿಂದ ತುಂಬಿದ, ಕೇಳ್ವಿ கேள்வி = ಮಾತುಗಳಿಂದ ಕೂಡಿದ, ಇಶೈ ಎನ್ಕೋ இசை என்கோ = ಗಾನವೆನ್ನಲೇ, ಇವಱ್ಱುಳ್ இவற்றுள் = ಇವುಗಳಲ್ಲಿ, ನಲ್ಲ நல்ல = ಶ್ರೇಷ್ಠವಾದ, ಮೇಲ್ ಎನ್ಕೋ மேல் என்கோ = ಮೇಲ್ಮೆ ಎನ್ನಲೇ, ವಿನೈಯಿನ್ வினையின் = ಕರ್ಮಗಳ, ಮಿಕ್ಕ மிக்க = ಉತ್ತಮವಾದ (ಬಲು ಹೆಚ್ಚಿನ), ಪಯನ್ ಎನ್ಕೋ பயன் என்கோ = ಫಲವೆನ್ನಲೇ, ಕಣ್ಣನ್ ಎನ್ಕೋ கண்ணன் என்கோ = ಅಶ್ಚರ್ಯಕರನೆನ್ನಲೇ, ಮಾಲ್ ಎನ್ಕೋ மால் என்கோ = ವ್ಯಾಮೋಹಕರ ಎನ್ನಲೇ (ಸರ್ವೇಶ್ವರನೆನ್ನಲೇ), ಮಾಯನ್ ಎನ್ಕೋ மாயன் என்கோ = ಆಶ್ಚರ್ಯಕರ ಎನ್ನಲೇ

Carani Srinivasan

ಮಾನವರ ಆದಿಯಿಂದಲೇ ಯಾಗಾದಿಗಳ ಆಕೃತಿಯಾಯಿತು. ದೇವತೆಗಳಿಗೆ ದೇವನಾಗಿರುವವನನ್ನೇ.

ದೇವತೆಗಳಿಗೆಲ್ಲ ದೇವನಾಗಿರುವವನನ್ನೇ 'ಹಾಲು' ಎನ್ನಲೇ, ನಾಲ್ಕು ವೇದಗಳ ಸಾರವೆನ್ನಲೇ, ವೈದಿಕ ಕರ್ಮದ ನೀತಿ (ಕ್ರಮ) ಮಾರ್ಗ ~~ಎನ್ನಲೇ~~ ಎನ್ನಲೇ, ಸಾಧಿಸುವ ಶಾಸ್ತ್ರಗಳು ಎನ್ನಲೇ, ಕಂಪನಗಳಿಂದ ತುಂಬಿದ ಮಂತ್ರಗಳಿಂದ ಕೂಡಿದ ಗಾನವೆನ್ನಲೇ, ಇವುಗಳೆಲ್ಲಾ ಉತ್ತಮವಾದ ಮೇಲ್ಮೆ ಎನ್ನಲೇ, ಅತ್ಯಾಕರ್ಷಣೆ ಎನ್ನಲೇ, ಕರ್ಮಗಳ ಬಹಳ ಉತ್ತಮವಾದ ಫಲವೆನ್ನಲೇ, ವ್ಯಾಮೋಹಹರನೆನ್ನಲೇ, ಆಶ್ಚರ್ಯಕರ ಶಕ್ತಿ ಎನ್ನಲೇ! (6)

ಹಿಂದಿನ ಪಾಠಗಳಲ್ಲಿ 'ವಸ್ತು' ಮತ್ತು ಅದರ 'ನಾದ', 'ರಸ', 'ರುಚಿ' ಮುಂತಾದವು ಭಗವಂತನನ್ನು ಹೇಗೆ ಸೂಚಿಸುತ್ತವೆ ಎಂದು ಹೇಳಲಾಯಿತು. ಈಗ, 'ಶಬ್ದ' ಮತ್ತು ಅದರ 'ಅರ್ಥ' - ಇವು ಭಗವಂತನನ್ನು ಹೇಗೆ ತೋರಿಸುತ್ತವೆ ಎಂಬುದನ್ನು ಬಹಳ ಸ್ಪಷ್ಟವಾಗಿ ತಿಳಿಸಲಾಗುತ್ತದೆ.

ಭಗವಂತನು ಎಲ್ಲಕ್ಕೂ ಇವ. ಅವನೇ ಸೃಷ್ಟಿಕಾರಣನು. ಆದ್ದರಿಂದ ಭೂಮಿಯ ಮೇಲಿನ ವಸ್ತುಗಳಿಗೆ ಮಾತ್ರವಲ್ಲದೆ ಸೃಷ್ಟಿಯ ಎಲ್ಲಾ ವಸ್ತುಗಳಿಗೂ ಒಡೆಯ. ದೇವತೆಗಳಿಗೂ ಒಡೆಯನಾಗಿರುವವನು.

'ಹಾಲು' ಮನುಷ್ಯನು ಬಳಸುವ ಆಹಾರಗಳಲ್ಲೆಲ್ಲಾ ಉತ್ತಮವಾದ ಸ್ವಾಭಾವಿಕವಾದ ಆಹಾರ. ಅದನ್ನು 'ಅಮೃತ'ವೆಂದೇ ಕರೆಯುವರು. ದೇವತೆಗಳಿಗೆ ಅಮೃತವನ್ನು ಒದಗಿಸಿಕೊಟ್ಟಂತೆ, ಭೂಲೋಕವಾಸಿಗಳಿಗೆ ~~ಹಾಲನ್ನು~~ ಅಮೃತವನ್ನು ಹಾಲಿನ ರೂಪದಲ್ಲಿ ಭಗವಂತನು ಒದಗಿಸಿದ್ದಾನೆ.

ವೇದಗಳಿಗೆ ವಸ್ತು ಭಗವಂತ. ವೇದಗಳು ಅವನ ಸ್ವರೂಪ, ಸ್ವಭಾವಾದಿಗಳನ್ನು ವಿಧವಿಧವಾಗಿ ಮತ್ತು ಯಥಾರ್ಥವಾಗಿ ವರ್ಣಿಸುತ್ತವೆ. ಆದ್ದರಿಂದ ವೇದಗಳ 'ಸಾರ'ವೆಲ್ಲ ಭಗವಂತ.

ಭಗವಂತನನ್ನು ಸೇರುವ ಮಾರ್ಗವನ್ನು ವೇದಗಳು ಸೂಚಿಸುತ್ತವೆ. ಅದಕ್ಕೆ ತಕ್ಕ ಸಾಧನರೂಪವಾದ ಜೀವನ ಮಾರ್ಗವನ್ನು ಶಾಸ್ತ್ರಗಳು ತಿಳಿಸುತ್ತವೆ. ಆದ್ದರಿಂದ ಶಾಸ್ತ್ರಗಳು ಭಗವತ್ಸ್ವರೂಪವೇ ಆಗಿವೆ.

ಅಲ್ಲದೆ, ಇತಿಹಾಸ ಪುರಾಣಾದಿಗಳು ಭಗವಂತನ ನಾನಾ ಅವತಾರಗಳನ್ನು, ಅವುಗಳ ಮೂಲಕ ಅವನು ನಡೆಸಿದ ಅದ್ಭುತಶಕ್ತಿಯುಕ್ತವಾದ ಲೀಲೆಗಳನ್ನೂ ವಿವರಿಸಿ ಹೇಳುತ್ತವೆ.

ವೇದಗಳು ಓಂಕಾರದಿಂದ ಮೊದಲಾದವು. ಓಂಕಾರವಾದರೋ ಮೂರು ಬಗೆಯ ಕಂಪನಗಳಿಂದ ಕೂಡಿ ಆದದ್ದು. ಕಂಪನಗಳು ಕಿವಿಗೂ ಮನಸ್ಸಿಗೂ ಅರಿವಾಗುವಂತೆ ಉತ್ಪತ್ತಿಯಾದರೆ, ಆ ಕಂಪನಗಳಿಂದ 'ನಾದ' ಪ್ರಕಟವಾಗುತ್ತದೆ. ಮಾತುಗಳೆಲ್ಲವೂ ಕಂಪನಗಳಿಂದ ಆದವು. ಅರ್ಥಪೂರ್ಣವಾದ ಮಾತುಗಳ ಜೋಡಣೆಯಿಂದ, ಸ್ತೋತ್ರ, ಗೀತೆ, ಲಯ, ಬದ್ಧವಾದ ರೀತಿಯಲ್ಲಿ

ಯುಕ್ತವಾದ ಶಬ್ದಗಳ ಮೂಲಕ ಹೊಮ್ಮುವುದೇ ಗಾನ. ವೇದವು ಗಾನಮಯ. ಭಗವಂತನು ಕೂಡ ಗಾನಮೂರ್ತಿಯಾಗಿ, ಗಾನಪ್ರಿಯನಾಗಿ, ಗಾನಲೋಲನಾಗಿ ಇದ್ದಾನೆ. ಗಾನದ ಮೂಲಕ ಭಗವಂತನನ್ನು ಕಂಡುಕೊಳ್ಳುವುದಕ್ಕೆ ಸಾಧ್ಯ. ಮನುಷ್ಯನು ಮಾಡುವ ಪುಣ್ಯಕರ್ಮಗಳ ಫಲಗಳಾಗಿ ಸಿಗುವವನೇ ಭಗವಂತ.

ಆಳ್ವಾರರು ಹೇಳುತ್ತಾರೆ: ಭಗವಂತನನ್ನು ಹೇಗೆ ಕಾಣಬಹುದು? ಅವನನ್ನು ಯಾವ ರೀತಿಯಲ್ಲಿ ಕಂಡುಕೊಳ್ಳಲಿ? ದೇವತೆಗಳಿಗೆಲ್ಲಾ ದೇವನಾದ ಅವನನ್ನು 'ದಾಲು' ಎನ್ನಲೇ? ನಾಲ್ಕು ವೇದಗಳ 'ಸಾರ' ಎನ್ನಲೇ? ವೇದ ಧರ್ಮವನ್ನು ಹೇಳುತ್ತಿರುವ 'ಶಾಸ್ತ್ರ' ಎನ್ನಲೇ? ಮಾತು ಮತ್ತು ಶಬ್ದಗಳಿಂದ ತುಂಬಿದ 'ಗಾನ' ಎನ್ನಲೇ? ಇವುಗಳೆಲ್ಲಾ ಕಂಡುಬರುವ 'ಒಳ್ಳೆಯದು' ಎನ್ನಲೇ? ಎಲ್ಲಾ ಪುಣ್ಯಕರ್ಮಗಳ 'ಫಲ' ಎನ್ನಲೇ? 'ಅತ್ಯಂತ...ಶ' ಎನ್ನಲೇ? ಮನಮೋಹಕ ಎನ್ನಲೇ? 'ಅಮೃತಸ್ವರೂಪ' ಎನ್ನಲೇ? ಏನೆನ್ನಲಿ?

7. வானவராதி யென்கோ,
வானவர் தெய்வமென்கோ,
வானவர் போகமென்கோ,
வானவர் முற்றுமென்கோ,
ஊனமில் செல்வமென்கோ,
ஊனமில் சுவர்க்கமென்கோ,
ஊனமில் மோக்கமென்கோ,
ஒளிமணி வண்ணனையே.

ವಾನವರಾದಿಯೆನ್ಕೋ ವಾನವರ್ ದೆಯ್ವಮೆನ್ಕೋ,
ವಾನವರ್ ಪೋಗಮೆನ್ಕೋ ವಾನವರ್ ಮುಟ್ರುಮೆನ್ಕೋ,
ಊನಮಿಲ್ ಶೆಲ್ವಮೆನ್ಕೋ ಊನಮಿಲ್ ಶುವರ್ಕ್ಕಮೆನ್ಕೋ,
ಊನಮಿಲ್ ಮೋಕ್ಕಮೆನ್ಕೋ ಒಳಿಮಣಿ ವಣ್ಣನೈಯೇ,

ವಾನವರ್ வானவர் = ಮೇಲಣಲೋಕದವರ (ದೇವತೆಗಳ ಮತ್ತು ನಿತ್ಯಸೂರಿಗಳ), ಆದಿ ಎನ್ಕೋ ஆதி என்கோ = ಒಡೆಯನು ಎನ್ನಲೇ, ವಾನವರ್ வானவர் = ಆ ದೇವತೆಗಳಿಗೆ, ದೆಯ್ವಮ ಎನ್ಕೋ தெய்வம் என்கோ = ಆಶ್ರಯಣೀಯವಾದ ದೇವರು ಎನ್ನಲೇ, ವಾನವರ್ வானவர் = ಆ ದೇವತೆಗಳ, ಪೋಗಮ ಎನ್ಕೋ போகம் என்கோ = ಅನುಭವಿಸಿ ಆನಂದಿಸುವ ವಸ್ತು ಎನ್ನಲೇ, ವಾನವರ್ வானவர் = ಆ ದೇವತೆಗಳ, ಮುಟ್ರುಮ ಎನ್ಕೋ முற்றும் என்கோ = ಸರ್ವಸ್ವ ಎನ್ನಲೇ, ಊನಮ ಇಲ್

Garani Srinivasan

ஊனம் இல் = ಯಾವ ಬಗೆಯ ಕೊರತೆಯೂ ಇಲ್ಲದ, ಶೆಲ್ವಮಾ ಎನ
ಕ್ಕೋ செல்வம் என்கோ = ಐಶ್ವರ್ಯ ಎನ್ನಲೇ, (ಸೌಂದರ್ಯ ಎನ್ನಲೇ),
ಊನಮಾ ಇಲ್ ஊனம் இல் = ನಾಶವಿಲ್ಲದ (ಶಾಶ್ವತವಾದ), ಸುವರ್
ಕ್ಕಮಾ ಎನ್ಕೋ சுவர்க்கம் என்கோ = ಪರಮಪದ (ಸ್ವರ್ಗ)
ಎನ್ನಲೇ, ಊನಮಾ ಇಲ್ ஊனம் இல் = ಶಾಶ್ವತವಾದ, ಮೊಕ್ಕ
ಮಾ ಎನ್ಕೋ மோக்கம் என்கோ = ಮೋಕ್ಷ ಎನ್ನಲೇ, ಒಳಿಮ
ಣಿ ವಣ್ಣನ್ನೈಯೇ ஒளிமணி வண்ணனையே = ದಿವ್ಯಾಂಗವ
ನ್ನು ಪ್ರಕಾಶಿಸುವ ಮಾಣಿಕ್ಯದ ಬಣ್ಣದವನನ್ನೇ.

ಮೇಲಣ ಲೋಕದವರ ಒಡೆಯ ಎನ್ನಲೇ, ಆ ದೇವತೆಗಳು
ಆಶ್ರಯಿಸುವ ದೇವರು ಎನ್ನಲೇ, ಆ ದೇವತೆಗಳು ಅನುಭವಿಸಿ
ಆನಂದಿಸುವ ವಸ್ತು ಎನ್ನಲೇ, ಆ ದೇವತೆಗಳ ಸರ್ವಸ್ವ ಎನ್ನಲೇ,
ಯಾವ ಬಗೆಯ ಕೊರತೆಯೂ ಇಲ್ಲದ ಸೌಂದರ್ಯ ಮತ್ತು ಸಂಪತ್ತು
ಎನ್ನಲೇ, ಶಾಶ್ವತವಾದ (ನಾಶವಿಲ್ಲದ) ಸ್ವರ್ಗ (ಪರಮಪದ) ಎನ್ನಲೇ,
ಶಾಶ್ವತವಾದ ಮೋಕ್ಷ ಎನ್ನಲೇ ದಿವ್ಯಾಂಗದಿಂದ ಬೆಳಗುವ ಮಾಣಿ (7)
ಕ್ಯದ ಬಣ್ಣದವನನ್ನೇ.

ಭಗವಂತನು ದೇವದೇವನಾಗಿದ್ದರೂ, ದೇವತೆಗಳ ಸರ್ವಸ್ವವೆಂದರೂ,
ತನ್ನನ್ನು ಆಶ್ರಯಿಸಿದವರಿಗೆ ಐಶ್ವರ್ಯಪ್ರದನಾಗಿ, ಅವರು ಶಾಶ್ವತಾನಂದ
ವನ್ನು ಅನುಭವಿಸುವುದಕ್ಕೆ ಅನುಕೂಲವಾದ ಮೋಕ್ಷವನ್ನು ಪರಮಪದ
ವಾದವನ್ನು ನೀಡುತ್ತಾನೆ ಎನ್ನಲಾಗುತ್ತದೆ.

ಆಳ್ವಾರರು ಹೇಳುತ್ತಾರೆ: ಭಗವಂತನನ್ನು ನಾನು ಹೇಗೆ ಸಂಬೋ
ಧಿಸಲಿ? ಅವನನ್ನು ಏನೆನ್ನಲಿ? ದೇವತೆಗಳಿಗೆಲ್ಲ ಒಡೆಯನೆನ್ನಲೇ?
ಅವರು ಪೂಜಿಸುವ ದೇವರು ಎನ್ನಲೇ? ಅವರು ಅನುಭವಿಸಿ ಆನಂದಿಸುವ
ಅದ್ವಿತೀಯ ವಸ್ತು ಎನ್ನಲೇ? ಅವರ ಸರ್ವಸ್ವ ಎನ್ನಲೇ? ಭಗವಂತನು
ಸರ್ವಪರಿಪೂರ್ಣನಾದ ಐಶ್ವರ್ಯ ಎನ್ನಲೇ? ಸೌಂದರ್ಯ ಎನ್ನಲೇ?
ಶಾಶ್ವತಾನಂದವನ್ನು ಕೊಡುವ ಮೋಕ್ಷ ಎನ್ನಲೇ? ಪರಮಪದ ಎನ್ನಲೇ?
ಹಾನಿಯಿಲ್ಲದ ಮಾಣಿಕ್ಯ ಎನ್ನಲೇ?

8. ஒளிமணி வண்ணனென்கோ
ஒருவனென்றேத்த நின்ற,
நளிர்மதிச் சடையனென்கோ
நான்முகக் கடவுளென்கோ,
அளிமகிழ்ந்துலகமெல்லாம்
படைத்தவையேத்த நின்ற,
களிமலர்த் துளவனெம்மான்
கண்ணனை மாயனையே.

ಒಳಿಮಣಿ ವಣ್ಣನೆನ್ಗೋ ಒರುವನೆನ್ರೇತ್ತ ನಿನ್ರ,
ನಳಿರ್ ಮದಿಚ್ಚಡೈಯನೆನ್ಗೋ ನಾನ್ಮುಗಕ್ಕಡವುಳೆನ್ಗೋ,
ಅಳಿ ಮಗಿಳ್ನ್ದುಲಗಮೆಲ್ಲಾಮ್ ಪಡೈತ್ತವೈ ಏತ್ತ ನಿನ್ರ,
ಕಳಿ ಮಲರ್ತ್ತುಳವನೆಮ್ಮಾನ್ ಕಣ್ಣನೈ ಮಾಯನೈಯೇ.

ಒಳಿ ಮಣಿ ವಣ್ಣನ್ ಎನ್ಗೋ ஒளி மணி வண்ணன் என்கோ = ಪ್ರಕಾಶಪೂರ್ಣವಾದ ರತ್ನದ ಬಣ್ಣದವನು ಎನ್ನಲೇ, ಒರುವನ್ ಎನ್ರು ஒருவன் என்று = ಸಾಟಿಯಿಲ್ಲದವನು (ಏಕರುವ) ಎಂದು, ಏತ್ತ ஏத்த = ಸ್ತುತಿಸಲು, ನಿನ್ರ நின்ற = ಇರುವ, ನಳಿರ್ ಮದಿ நளிர் மதி = ತಂಪಾದ ಬಾಲಚಂದ್ರನನ್ನು, ಚಡೈಯನ್ ಎನ್ಗೋ சடையன் என்கோ = ಜಡೆಯಲ್ಲಿ ಧರಿಸಿರುವವನು ಎನ್ನಲೇ, ನಾನ್ಮುಗ ಕಡವುಳ್ ಎನ್ಗೋ நான்முகக் கடவுள் என்கோ = ನಾಲ್ಕುಮುಖನಾದ ದೇವರು ಎನ್ನಲೇ, ಅಳಿ அளி = ಕರುಣೆಯಿಂದಲೂ, ಮಗಿಳ್ನ್ದು மகிழ்ந்து = ಆಸಕ್ತ, ಉಲಗ ಮೆಲ್ಲಾಮ್ உலகம் எல்லாம் = ಎಲ್ಲಾ ಲೋಕಗಳನ್ನು, ಪಡೈತ್ತು படைத்து = ಸೃಷ್ಟಿಸಿ, ಅವೈ அவை = ಅವುಗಳು, ಏತ್ತ ஏத்த = ಸ್ತುತಿಸುವಂತೆ, ನಿನ್ರ நின்ற = ಇರುವ, ಕಳಿ ಮಲರ್ களி மலர் = ಮಧುವನ್ನು ಹೂವನ್ನು ಉಳ್ಳ, ತುಳವನ್ துளவன் = ತುಳಸಿಯ ಹಾರವನ್ನು ಧರಿಸಿರುವವನೂ, ಎಮ್ಮಾನ್ எம்மான் = ನಮ್ಮ ಸ್ವಾಮಿಯೂ, ಆದ, ಕಣ್ಣನೈ கண்ணனை = ಶ್ರೀಕೃಷ್ಣನನ್ನು, ಮಾಯನೈಯೇ மாயனையே = ಆಶ್ಚರ್ಯಕರನನ್ನೇ.

(ಕರುಣೆಯಿಂದಲೂ ಆಸಕ್ತಿಯಿಂದ ಎಲ್ಲಾ ಲೋಕಗಳನ್ನು ಸೃಷ್ಟಿಸಿ, ಅವುಗಳು ಸ್ತುತಿಸುವಂತೆ ಇರುವ ಮಧುವನ್ನು ಹೂವನ್ನು ಉಳ್ಳ ತುಳಸಿಯ ಹಾರವನ್ನು ಧರಿಸಿರುವವನೂ ಶ್ರೀಕೃಷ್ಣನೂ ಆಶ್ಚರ್ಯಕರನೂ ನಮ್ಮ ಸ್ವಾಮಿಯೂ, ಆದವನನ್ನೇ ಪ್ರಕಾಶಪೂರ್ಣವಾದ ರತ್ನದ ಬಣ್ಣದವನು ಎನ್ನಲೇ, ಸಾಟಿಯಿಲ್ಲದವನು ಎಂದು ಸ್ತುತಿಸಲು ನಿಂತಿರುವ ತಂಪಾದ ಬಾಲಚಂದ್ರನನ್ನು ಜಡೆಯಲ್ಲಿ ಧರಿಸಿರುವವನು ಎನ್ನಲೇ, ನಾಲ್ಕುಮುಖನಾದ ದೇವರು ಎನ್ನಲೇ? (8)

ಬ್ರಹ್ಮ, ರುದ್ರ, ವಿಷ್ಣುಗಳಲ್ಲಿ ಯಾವ ಬಗೆಯ ವ್ಯತ್ಯಾಸವಿದೆ ಎಂಬುದನ್ನು, ವಿಷ್ಣುವಿನೇಕೆ ಹಿರಿಮೆ ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ. 'ಸೃಷ್ಟಿ'ಯಾಗಲಿ, 'ಲಯ'ವಾಗಲಿ ಒಂದೊಂದು ಶಕ್ತಿಯಿಂದ ಕೊಡದೆ ಇರಲಿ ಎಂದರೂ, ಅವರೆಡಕ್ಕೂ ತಕ್ಕಂತೆ 'ರಕ್ಷಣೆ' ಎಂಬುದು ದೊಡ್ಡ ಹೊಣೆಗಾರಿಕೆಯು ದೇವರ ಅದನ್ನು ವಹಿಸಿಕೊಂಡಿರುವ ಶ್ರೀಮನ್ ವಿಷ್ಣುವೇ ಸರ್ವಶ್ರೇಷ್ಠನೆಂದು ಇಲ್ಲಿ ತಿಳಿಸಲಾಗಿದೆ. ಆ ಸ್ವಾಮಿಯನ್ನೇ ಸೃಷ್ಟಿ, ಲಯಗಳಿಗೆ ಕಾರಣಕರ್ತನೆಂದು ಬ್ರಹ್ಮ ರುದ್ರರು ಅವುಗಳನ್ನು ನಡೆಸಿಕೊಡುವವರು ಎಂದು ಹೇಳಿದಂತಾಗಿದೆ.

Garani Srinivasan

"ಪಿರೈವನ್ ಎನ್ನುಳ್ಳಿತ್ತನಾಲು ನಲ್ಲರ್ ಮುಡಿಶ್ಚೈಡೈಯನ್"–
ಜಡೆಯಲ್ಲಿ ತುಂಡಾದ ಬಾಲಚಂದ್ರನನ್ನು ಧರಿಸಿ, ಕೆಂಬಣ್ಣದ ಜಟೆ
ಯುಳ್ಳವನು ಎಂದು ಕೊಂಡಾಡಿಸುವಂತೆ ನಿಂತಿರುವ ಲಯಕರ್ತನಾದ
ರುದ್ರನು.

"ನಾನ್ಮರೈ ಕರ್ತಪುಳ್"– ನಾಲ್ಕು ವೇದಗಳಿಗೆ ಕರ್ತನಾದ ನಾಲ್ಕು
ಮುಖಗಳುಳ್ಳ ಸೃಷ್ಟಿಕರ್ತನಾದ ಬ್ರಹ್ಮ.

"ಅಲ್ಲ ಮುಂಬಿನ್ನುಲಗೆಲ್ಲಾಮ್ ಪಡೈತ್ತು"– ರಕ್ಷಣೆಯ
ಭಾರವನ್ನು ಆಶೆಯಿಂದ ವಹಿಸಿಕೊಂಡು, ಎಲ್ಲಾ ಲೋಕಗಳನ್ನು
ಅವುಗಳಲ್ಲಿನ ಎಲ್ಲಾ ಜೀವರನ್ನು ಸೃಷ್ಟಿಸಿದ ಶ್ರೀಮದಾಚಾರ್ಯ
ಶ್ರೀಮನ್ನಾರಾಯಣನು– ಮಹಾಪ್ರಳಯದಲ್ಲಿ ಎಲ್ಲಾ ಲೋಕಗಳನ್ನು
ತನ್ನ ಹೊಟ್ಟೆಯಲ್ಲೇ ಅಡಗಿಸಿ ಇಟ್ಟುಕೊಂಡು ರಕ್ಷಿಸುತ್ತಾನೆ. ಮತ್ತೆ
ಸೃಷ್ಟಿ ಸಮಯ ಬಂದಾಗ ಅದನ್ನೆಲ್ಲಾ ಹೊರಹಾಕುತ್ತಾನೆ, ಮತ್ತು ಅವು
ಗಳ ರಕ್ಷಣೆಯ ಭಾರವನ್ನು ವಹಿಸಿಕೊಂಡಿರುತ್ತಾನೆ. ಅವನೇ "ಕಳ ಮುಲ
ಗೈಳವನ್"– ಎಂದರೆ, ಪದ್ಮದಿಂದ ಕೂಡಿರುವ ಸುಂದರವಾದ
ತುಳಸಿಯ ಹಾರವನ್ನು ಧರಿಸಿರುವವನು.

ಆಳ್ವಾರರು ಹೇಳುತ್ತಾರೆ: ರಕ್ಷಣೆಯನ್ನು ಆಶಿಸುತ್ತ
ಎಲ್ಲಾ ಲೋಕಗಳನ್ನು ಪಡೆದವನೂ, ಅವುಗಳು ತನ್ನನ್ನು ಸಂಪೂರ್ಣ
ವಾಗಿ ಆಶ್ರಯಿಸುವಂತೆ ಮಾಡಿದವನೂ (ಸ್ತುತಿಸುವಂತೆ ಮಾಡಿದವನೂ) ಆದ
ನಮ್ಮ ಸ್ವಾಮಿಯನ್ನು ಅಶ್ವತ್ಥನೆನ್ನಲೇ, ಅಶ್ವತ್ಥಯೋನಿ
ಎನ್ನಲೇ, ಪ್ರಕಾಶಮಾನವಾದ ನೀಲಮಣಿವರ್ಣನೆನ್ನಲೇ, ಕೆಂಬ
ಣ್ಣದ ಜಟೆಯುಳ್ಳವನೆಂಬಂತೆ ಬಾಲಚಂದ್ರನನ್ನು ಜಡೆಯಲ್ಲಿ ಧರಿಸಿ
ರುವ ಪ್ರಳಯರುದ್ರನೆನ್ನಲೇ, ಸೃಷ್ಟಿಕರ್ತನಾದ ಚತುರ್ಮುಖ ಬ್ರಹ್ಮ
ನೆನ್ನಲೇ? "

9. கண்ணனை மாயன்றன்னைக்
கடல்கடைந்தமுதங்கொண்ட,
அண்ணலை யச்சுதனை
அனந்தனை யனந்தன்றன்மேல்,
நண்ணி நன்குறைகின்றானை
ஞாலமுண்டுமிழ்ந்த மாலை,
எண்ணுமாறறிய மாட்டேன்
யாவையும் யவருந்தானே.

ಕಣ್ಣನೈ ಮಾಯನ್ ತನ್ನೈ ಕ್ಕಡಲ್ ಕಡೈನ್ದ ಮುದಂ ಕೊಣ್ಡ,
ಅಣ್ಣಲೈ ಅಚ್ಚುದನೈ ಅನನ್ದನೈ ಅನನ್ದನ್ ತನ್ ಮೇಲ್,
ನಣ್ಣಿ ನನ್ಗುಱೈಗಿನ್ಱಾನೈ ಞಾಲ ಮುಣ್ಡು ಉಮಿೞ್ನ್ದ ಮಾಲೈ,
ಎಣ್ಣುಮಾಱು ಅಱಿಯಮಾಟ್ಟೇನ್ ಯಾವೈಯುಂ ಯವರುಂ ತಾನೇ.

ಕಣ್ಣನೈ கண்ணனை = ಶ್ರೀಕೃಷ್ಣನಾಗಿ ಅವತರಿಸಿದ ಆಶ್ಚರ್ಯನನ್ನು, ಮಾಯನ್ ತನ್ನೈ மாயன் தன்னை = ಆಶ್ಚರ್ಯಕರವಾದ ಗುಣಚೇಷ್ಟಿತಂಗಳುಳ್ಳವನನ್ನು, ಕಡಲ್ ಕಡೈನ್ದು கடல் கடைந்து = ಹಾಲ್ಗಡಲನ್ನು ಕಡೆದು, ಅಮುದಮ ಕೊಣ್ಡ அமுதம் கொண்ட = ಅಮೃತವನ್ನು ತೆಗೆದ, ಅಣ್ಣಲೈ அண்ணலை = ಸರ್ವೇಶ್ವರನನ್ನು, ಅಚ್ಚುದನೈ அச்சுதனை = ಅಚ್ಯುತನನ್ನು (ನಾಶರಹಿತನನ್ನು), ಅನನ್ದನೈ அனந்தனை = ಅನಂತನನ್ನು, (ಅಂತ್ಯವಿಲ್ಲದವನನ್ನು), ಅನನ್ದನ್ ತನ್ ಮೇಲ್ அனந்தன் தன் மேல் = ಅನಂತನ ಮೇಲೆ, ನಣ್ಣಿ நண்ணி = ಹೊಂದಿಕೊಂಡು, ನನ್ಗು நன்கு = ಚೆನ್ನಾಗಿ, ಉಱೈಗಿನ್ಱಾನೈ உறைகின்றானை = (ಯೋಗ) ನಿದ್ದೆ ಮಾಡುವವನನ್ನು, ಞಾಲಮ್ ஞாலம் = ಲೋಕಂಗಳನ್ನು, ಉಣ್ಡು ಉಮಿೞ್ನ್ದ ಮಾಲೈ உண்டு உமிழ்ந்த மாலை = ಉಂಡು ಮತ್ತೆ ಹೊರಹಾಕಿದ ಸ್ವಾಮಿಯನ್ನು, ಎಣ್ಣುಮ್ ಆಱು எண்ணும் ஆறு = (ಇಂಥಿಂಥ ಗುಣಸ್ವಭಾವಗಳವನೆಂದು) ಎಣಿಸುವ ಬಗೆಯನ್ನು, ಅಱಿಯಮಾಟ್ಟೇನ್ அறியமாட்டேன் = ಅರಿತುಕೊಳ್ಳಲಾರೆ, ಯಾವೈಯುಮ್ யாவையும் = ಎಲ್ಲಾ ಅಚೇತನವಸ್ತುಗಳೂ, ಯವರುಮ್ யவரும் = ಎಲ್ಲಾ ಚೇತನವಸ್ತುಗಳೂ, ತಾನೇ தானே = ಅವನೇ.

ಶ್ರೀಕೃಷ್ಣನಾಗಿ ಅವತರಿಸಿದ ಆಶ್ಚರ್ಯನನ್ನು, ಆಶ್ಚರ್ಯಕರವಾದ ಗುಣಚೇಷ್ಟಿತಂಗಳುಳ್ಳವನನ್ನು, ಹಾಲ್ಗಡಲನ್ನು ಕಡೆದು ಅಮೃತವನ್ನು ಪಡೆದ ಸರ್ವೇಶ್ವರನನ್ನು, ನಾಶರಹಿತನನ್ನು (ಅಚ್ಯುತನನ್ನು), ಕೊನೆಯಿಲ್ಲದವನನ್ನು (ಅನಂತನನ್ನು), ಅನಂತನ ಮೇಲೆ ಚೆನ್ನಾಗಿ ಹೊಂದಿಕೊಂಡು ಯೋಗನಿದ್ದೆಯುಳ್ಳುವವನನ್ನು, ಲೋಕಂಗಳನ್ನು ಉಂಡು ಮತ್ತೆ ಹೊರಹಾಕಿದ ಸ್ವಾಮಿಯನ್ನು, (ಅವನು ಇಂಥಿಂಥ ಗುಣಸ್ವಭಾವಗಳವನೆಂದು) ಎಣಿಸುವ ಬಗೆಯನ್ನು ಅರಿತುಕೊಳ್ಳಲಾರೆ. ಅವನೇ ಎಲ್ಲಾ ಅಚೇತನವಸ್ತುಗಳೂ ಎಲ್ಲಾ ಚೇತನವಸ್ತುಗಳೂ ಆಗಿದ್ದಾನೆ. (9)

Garani Srinivasan

ಭಗವದ್ವಿಭೂತಿಗಳನ್ನು ಇಷ್ಟೇ, ಇಂಥವೇ ಎಂದು ಹೇಳಲು ಸಾಧ್ಯವೇ ಇಲ್ಲ. ಅವಕ್ಕೆ ಕೊನೆಯೆಂಬುದೇ ಇಲ್ಲ ಎಂದು ಹೇಳುವುದು ಈ ಪಾಶುರ.

ಆಳ್ವಾರರು ಹೇಳುತ್ತಾರೆ: ಭಗವಂತನು ಆಯಾ ಕಾಲಕ್ಕೆ ಆಯಾ ಸಂದರ್ಭಕ್ಕೆ ತಕ್ಕಂತೆ ಭಿನ್ನಭಿನ್ನ ರೀತಿಯ ಅವತಾರಗಳನ್ನು ಎತ್ತುತ್ತಾನೆ. ಪ್ರತಿ ಅವತಾರದಲ್ಲೂ ಅವನು ತನ್ನ ಆಶ್ಚರ್ಯಾದ್ಭುತ ಗುಣ ಸಂಪತ್ತನ್ನು ಹೊರಹೊಮ್ಮಿಸುತ್ತಾನೆ. ಶ್ರೀಕೃಷ್ಣಾವತಾರ ಅವನ ಅವತಾರಗಳಲ್ಲಿ ಅತ್ಯಂತ ಶ್ರೇಷ್ಠವಾದದ್ದು. ಅದರಲ್ಲಿ ನಡೆಸಿದ್ದು ಅಷ್ಟೇ ಅದ್ಭುತ ಮತ್ತು ಆಶ್ಚರ್ಯಕರ. ಭಗವಂತನಿಗೆ ನಾಶವೆಂಬುದೇ ಇಲ್ಲ. ಅವನಿಗೆ ಕೊನೆಯೇ ಇಲ್ಲ. ಅವನು ಎಲ್ಲೆಲ್ಲೂ ಇಹ. ಆದ್ದರಿಂದ ಅವನಿಗೆ 'ಅಚ್ಯುತ', 'ಅನಂತ', ಎಂಬ ಹೆಸರುಗಳು. ಪ್ರಳಯದಲ್ಲೂ ಅವನು ಅನಂತನಮೇಲೆ (ಶೇಷನಮೇಲೆ) ಮಲಗಿ ಯೋಗನಿದ್ರೆಯಲ್ಲಿರುತ್ತಾನೆ. ಪ್ರಳಯಕಾಲ ಬಂದಾಗ ಎಲ್ಲಾ ಲೋಕಗಳನ್ನು ಕಬಳಿಸಿ, ತನ್ನ ಹೊಟ್ಟೆಯಲ್ಲಿ ಇಟ್ಟುಕೊಂಡು ರಕ್ಷಿಸುತ್ತಾನೆ. ಮತ್ತೆ ಸೃಷ್ಟಿ ಸಮಯ ಬಂದಾಗ ಅವುಗಳನ್ನು ಹೊರಕ್ಕೆ ತಂದು ಆಗಲೂ ಅವಕ್ಕೆ ರಕ್ಷಣೆ ಮಾಡುತ್ತಾನೆ. ಸರ್ವೇಶ್ವರನಾದ ಅವನ ಮಹಿಮೆಯನ್ನು ಇಷ್ಟೆಂದು ಎಣಿಕೆ ಮಾಡುವ ಬಗೆಯನ್ನು ನಾನು ಅರಿಯೆನು. ಸಂಪ್ರದಾಯ ಹೇಳಬಹುದಾದರೆ, ಎಲ್ಲಾ ಚೇತನ ಅಚೇತನ ವಸ್ತುಗಳಾಗಿ ಶೋಭಿಸುತ್ತಿರುವವನು ಅವನೇ!

10. யாவையும் யவரும் தானாய்
அவரவர் சமயந்தோறும்,
தோய்விலன் புலனைந்துக்கும்
சொலப்படானுணர்வின் மூர்த்தி,
ஆவிசேருயிரினுள்ளால்
ஆதுமோர் பற்றிலாத,
பாவனையதனைக் கூடில்
அவனையுங் கூடலாமே.

ಯಾವೈಯುಮ್ ಯವರುಮ್ ತಾನಾಯ್ ಅವರವರ್ ಶಮಯನ್ದೋರುಮ್,
ತೋಯ್ವಿಲನ್ಪುಲನೈನ್ದುಕ್ಕುಮ್ ಶೊಲಪ್ಪಡಾನುಣರ್ವಿನ್ ಮೂರ್ತಿ,
ಆವಿಶೇರುಯಿರಿನುಳ್ಳಾಲ್ ಆದುಮೋರ್ ಪಟ್ರಿಲಾದ,
ಪಾವನೈಯದನೈಕ್ಕೂಡಿಲ್ ಅವನೈಯುಙ್ ಕೂಡಲಾಮೇ.

Garani Srinivasan

யாவையுமாய் யாவையும் = ಎಲ್ಲಾ ಅಚೇತನವಸ್ತುಗಳೂ, ಯಾವ
ರುಮಾಯ್ யாவரும் = ಎಲ್ಲಾ ಚೇತನವಸ್ತುಗಳೂ, ತಾನ್ ಆಯ್ தான் ஆய் :
ತಾನೇ ಆಗಿ (ತಾನೇ ನಿರ್ವಾಹಕನಾಗಿ, ಅಂತರ್ಯಾಮಿಯಾಗಿ) ಅವರ್ ಅವರ್
அவர் அவர் = ಆಯಾ ವಸ್ತುಗಳ, ತಮಯುಮ್ (ತೋಯುಮ್) சமயம் தோறும்
= (ತತ್ತ್ವ) ಸ್ಥಿತಿಗಳೊಂದಿಗೆ, ತೋಯ್ವು தோய்வு = ಹೊಂದಿಕೆ (ಕೂಡಿ
ಕೆ, ಸೇರಿಕೆ), ಇಲನ್ இலன் = ಇಲ್ಲದವನಾಗಿ, ಪುಲನ್ (ಐಂದುಕ್ಕುಮ್)
புலன் ஐந்துக்கும் = ಇಂದ್ರಿಯಗಳು (ಐದಕ್ಕೂ), ಸೊಲಪ್ಪಡಾನ್
சொலப்படான் = (ವಿವರಿಸಲು) ಹೇಳಲಾರದವನು, ಉಣರ್ವಿನ್
ಮೂರ್ತಿ உணர்வின் மூர்த்தி = ಜ್ಞಾನಮೂರ್ತಿಯಾದ ಭಗವಂತನು,
ಆವಿ ஆவி = ಪ್ರಾಣದೊಡನೆ, ಸೇರ್ சேர் = ಕೂಡಿರುವ, ಉಯಿರಿ
ನುಳ್ಳಾಲ್ உயிரினுள்ளால் = ಆತ್ಮದೊಳಗೆ, ಆದುಮೋರ್
ஆதும் ஓர் = ಯಾವೊಂದು, ಪಱ್ಱು ಇಲಾದ பற்றிலாத =
ಸಂಬಂಧವಿಲ್ಲದ, (ಅದನೊಂದು), ಪಾವನೈ பாவனை = ಭಾವನೆಯಾದ, ಅದ
ನ್ನೈ அதனை = ಅದನ್ನು, (ಆ ಭಾವನೆಯನ್ನು), ಕೂಡಿಲ್ கூடில் = ಕೂಡಿ
ಕೊಂಡಿದ್ದರೆ (ಕೂಡಿ ಇದ್ದರೆ), ಅವನೈಯುಮ್ அவனையும் = ಅವನನ್ನೂ
(ಆ ಪರಮಾತ್ಮನನ್ನು), ಕೂಡಲಾಮ್ கூடலாம் = ಕೂಡಿ ಇರಬಹುದು.

ಜ್ಞಾನಮೂರ್ತಿಯಾದ ಭಗವಂತನು ಎಲ್ಲಾ ಅಚೇತನವಸ್ತುಗಳೂ ಎಲ್ಲಾ ಚೇತನವಸ್ತುಗಳೂ ತಾನೇ ಆಗಿ (ತಾನೇ ಅಂತರ್ಯಾಮಿಯಾಗಿ), ಆಯಾ ವಸ್ತುಗಳ ತತ್ತ್ವಸ್ಥಿತಿಗಳೊಂದಿಗೆ ಹೊಂದಿಕೆ ಇಲ್ಲದವನಾಗಿ, ಪಂಚೇಂದ್ರಿಯಗಳಿಂದ ಹೇಳಲಾರದವನಾಗಿದ್ದಾನೆ. ಪ್ರಾಣದೊಂದಿಗೆ ಕೂಡಿರುವ ಆತ್ಮನೊಳಗೆ (ಇದ್ದರೂ) ಯಾವೊಂದು ಸಂಬಂಧವೂ ಇಲ್ಲದವನು ಅವನಂಬ ಭಾವನೆಯನ್ನು ಕೂಡಿಕೊಂಡಿದ್ದರೆ, ಅವನನ್ನು (ಆ ಪರಮಾತ್ಮನನ್ನು) (10)
ಕೂಡ (ಸೇರ) ಬಹುದು.

ಇದು ತತ್ತ್ವಪೂರ್ಣವಾದ ಪಾಶುರ, ನಮ್ಮಲ್ಲೇ ಇರುವ ಭಗವಂತನನ್ನ ಕಂಡುಕೊಳ್ಳುವುದು ಹೇಗೆ ಎಂಬುದನ್ನು ಇಲ್ಲಿ ಹೇಳಲಾಗುತ್ತದೆ.

* "ಅವರವರ್ ತಮಯುಮ್ ತೋಯುಮ್" — ಆ ಚೇತನಾ ಚೇತನಗಳ ವಿವಿಧ ಅವಸ್ಥೆಗಳಲ್ಲಿಯೂ — ಎಂದರೆ, ಉದಾಹರಣೆಗೆ: ಚೇತನ ವಸ್ತುಗಳ ಸುಖ, ದುಃಖ, ರೋಗರುಜಿನ ಮುಂತಾದವುಗಳಲ್ಲಿ, ಆ ವಸ್ತುಗಳ ಬಾಲ್ಯ ಕೌಮಾರ, ಯೌವನ, ಮತ್ತು ಮುದಿತನ ಮುಂತಾದವುಗಳಲ್ಲಿ, ಅವುಗಳ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಮತ್ತು, ಸನ್ಯಾಸ ಮುಂತಾದವುಗಳೂ, ಅಚೇತನ ವಸ್ತುಗಳ ಕೆಲವು ಅವಸ್ಥೆಗಳಲ್ಲಿಯೂ — ಎಂಬಂತೆ.

"ಆವಿಶೇರ್ ಉಯಿರಿನುಳ್ಳಾಲ್ ಆದುಮೋರು ಪಟ್ರಿಲಾದ ಪಾವನೈ".

'ಆವಿ' ಎಂದರೆ 'ಪ್ರಾಣ'. ಜಡದೇಹವನ್ನು 'ಪ್ರಾಣ' ಚೇತನವಸ್ತುವನ್ನಾಗಿಸುತ್ತದೆ. 'ಉಯಿರ್' ಎಂದರೆ 'ಆತ್ಮ'. ಪ್ರಾಣವಿರುವ ದೇಹದಲ್ಲಿ ಈ 'ಆತ್ಮ' ಸೇರಿ, ಅಲ್ಲಿ ಬಂಧಿತನಾಗಿ, ಅದರ ಎಲ್ಲ ಅವಸ್ಥೆಗಳನ್ನು ತಾನೇ ಅನುಭವಿಸುತ್ತಿರುವಂತೆ ಬಾಧೆ ಪಡುತ್ತಿರುತ್ತದೆ. ಆತ್ಮನ ಜೊತೆಯಲ್ಲೇ ಅದರ ಅತ್ಯಂತ ಸಮೀಪವರ್ತಿಯಾಗಿ, ನಿಯಾಮಕನಾಗಿ, ಅಂತರ್ಯಾಮಿಯಾಗಿ ಪರಮಾತ್ಮನೂ ಇರುತ್ತಾನಾದರೂ ಈ ವಿಷಯವನ್ನು 'ಆತ್ಮ' ಅರಿತುಕೊಳ್ಳುವುದಿಲ್ಲ. 'ಆತ್ಮ' ಇಂದ್ರಿಯಗಳ ಮತ್ತು ಮನೋಬುದ್ಧಿಗಳ ವಶವಾಗದೆ, ತನ್ನ ನಿಯಾಮಕನೂ ಅಂತರ್ಯಾಮಿಯೂ ಆದ, ಶೇಷಿಸ್ವರೂಪಿಯೂ ಆದ, ಪರಮಾತ್ಮನ ಧ್ಯಾನದಲ್ಲಿ ತೊಡಗಬೇಕೆಂದು ತಿಳಿಯುವುದು ಈ 'ಭಾವನೆ'. ಇದರ ಮೂಲಕ 'ಆತ್ಮ' ಪರಮಾತ್ಮನ ಅರಿವನ್ನು ಪಡೆದು, ಅವನೊಡನೆ ಕೂಡಿ ಬಾಳುವ ಜ್ಞಾನವನ್ನು ಪಡೆದುಕೊಳ್ಳಬಹುದು.

ಹಿರಿಯರು ಹೇಳುತ್ತಾರೆ: ಭಗವಂತ ಜ್ಞಾನಸ್ವರೂಪಿ. ಅವನೇ ಎಲ್ಲ ಚೇತನ ಅಚೇತನ ವಸ್ತುಗಳಲ್ಲಿಯೂ, ಅವುಗಳ ಅಂತರ್ಯಾಮಿಯಾಗಿಯೂ ಇದ್ದಾನೆ. ಆದರೆ, ಆ ವಸ್ತುಗಳ ಸ್ಥಿತಿ (ಅವಸ್ಥೆ)ಗಳನ್ನು ಅವನು ಹೊಂದುವುದಿಲ್ಲ. ಅವುಗಳಿಂದ ಬೇರೆಯಾಗಿದ್ದಾನೆ. ಅವನನ್ನು ಪಂಚೇಂದ್ರಿಯಗಳು ವಿವರಿಸಲಾರವು. ಪ್ರಾಣದೊಂದಿಗೆ (ದೇಹದೊಡನೆ) ಕೂಡಿರುವ ಆತ್ಮನಲ್ಲಿ ಅವನಿದ್ದರೂ ಸಹ, ಆ ಪ್ರಾಣ, ಆತ್ಮದೊಡನೆ ಯಾವ ಸಂಬಂಧವಿಲ್ಲದಂತೆ ಪ್ರತ್ಯೇಕವಾಗಿದ್ದಾನೆ. ಈ ಭಾವನೆಯನ್ನು ನಾವು ಮನದಲ್ಲಿ ರೂಢಿಸಿಕೊಂಡೆವಾದರೆ, ಆ ಮೂಲಕ ಪರಮಾತ್ಮನನ್ನು ನಾವು ಕೂಡಬಹುದು.

11. கூடிவண்டறையும் தண்டார்க்
கொண்டல் வண்ணன் தன்னை,
மாடலர் பொழில் குருகூர்
வண் சடகோபன் சொன்ன,
பாடலோராயிரத்துள் இவையு
மொருபத்தும் வல்லார்,
வீடில போகமெய்தி
விரும்புவரமரர் மொய்த்தே.

ಕೂಡಿವಣ್ಡರೈಯುಮ್ ತಣ್ಡಾರ್ ಕೊಣ್ಡಲ್ ವಣ್ಣನ್ ತನ್ನೈ,
ಮಾಡಲರ್ ಪೊೞಿಲ್ ಕುರುಕೂರ್ ವಣ್ ಶಡಕೋಪನ್ ಶೊನ್ನ,
ಪಾಡಲೋರಾಯಿರತ್ತುಳ್ ಇವೈಯುಮೋರು ಪತ್ತುಮ್ ವಲ್ಲಾರ್,
ವೀಡಿಲ ಭೋಗಮೆಯ್ದಿ ವಿರುಮ್ಬುವರಮರರ್ ಮೊಯ್ತ್ತೇ.

ಕೂಡಿ கூடி = ಗುಂಪಾಗಿ, ವಣ್ಡು வண்டு = ದುಂಬಿಗಳು, ಅಱೈ
ಯುಮ್ அறையும் = ಝೇಂಕರಿಸುವ, ತಣ್ தண் = ಕಂಪಾದ, ತಾರ್
தார் = ಮಾಲೆಯನ್ನು ಧರಿಸಿದ, ಕೊಣ್ಡಲ್ ಪೋಲ್ ವಣ್ಣನ್ ತನ್ನೈ கொ
ண்டல் போல் வண்ணன் தன்னை = ಕಾಮುಗಿಲಂತೆ ಬಣ್ಣ
ವುಳ್ಳವನನ್ನು ಕುರಿತು, ಮಾಡು மாடு = ಸುತ್ತ ಮುತ್ತಲೂ, ಅಲರ್ அலர் =
ಹೂ ಬಿಟ್ಟಿರುವ, ಪೊழಿಲ್ பொழில் = ಉಪವನಗಳಿಂದ ಕೂಡಿದ, ಕುರು
ಕೂರ್ குருகூர் = ತಿರುಕ್ಕುರುಕೂರಿನ, ವಣ್ வண் = ಉದಾರಿಯಾದ,
ಶಟಕೋಪನ್ சடகோபன் = ಶಠಕೋಪನು, ಸೊನ್ನ சொன்ன =
ಹೇಳಿದ, ಪಾಡಲ್ பாடல் = ಹಾಡುಗಳುಳ್ಳ, ಓರ್ ಆಯಿರತ್ತುಳ್ ஓர்
ஆயிரத்துள் = ಒಂದು ಸಾವಿರದಲ್ಲಿ, ಇವೈಯುಮ್ இவையும்
= ಇವುಗಳನ್ನು, ಓರ್ ಪತ್ತುಮ್ ஓர் பத்தும் = ದೋಷವಿಲ್ಲದ ಈ
ಹತ್ತನ್ನು, ವಲ್ಲಾರ್ வல்லார் = ಬಲ್ಲವರು, ವೀಡು ಇಲ வீடில =
ಎಡೆಬಿಡದಂತೆ, ಪೋಕಮ್ போகம் = ಭೋಗವನ್ನು (ಭಗವದನು
ಗ್ರಹವನ್ನು), ಎಯ್ದಿ எய்தி = ಪಡೆದುಕೊಂಡು, ವಿರುಮ್ಬುವರ್ ವಿ
ரும்புவர் = ಆಶಿಸುವರು (ಹರ್ಷಿಸುವರು), ಅಮರರ್ அமரர் = ಅಮರ
ರೊಡನೆ, ಮೊಯ್ತ್ತೇ மொய்த்தே = ಕೂಡಿಕೊಂಡೇ.

ದುಂಬಿಗಳು ಗುಂಪುಗುಂಪಾಗಿ ಕೂಡಿ ಝೇಂಕರಿಸುವ, ಕಂಪಾದ ಹಾರವನ್ನು ಧರಿಸಿದ ಕಾಮುಗಿಲಂತೆ ಬಣ್ಣವುಳ್ಳವನನ್ನು ಕುರಿತು ಎಲ್ಲೆಡೆಗಳಲ್ಲೂ ಹೂಬಿಟ್ಟಿರುವ ಉಪವನಗಳಿಂದ ಕೂಡಿದ ತಿರುಕ್ಕುರುಕೂರಿನ ಉದಾರಿಯಾದ ಶಠಕೋಪನು (ನಮ್ಮಾಳ್ವಾರರು) ಹೇಳಿದ ಒಂದು ಸಾವಿರ ಹಾಡುಗಳಲ್ಲಿ ದೋಷವಿಲ್ಲದ ಈ ಹತ್ತನ್ನು ಬಲ್ಲವರು ಎಡೆಬಿಡದಂತೆ ಭಗವದನುಗ್ರಹವನ್ನು ಪಡೆದುಕೊಂಡು ಅಮರರೊಡನೆ ಕೂಡಿ ಕೊಂಡು ಹರ್ಷಿಸುವರು. (11)

ತಿರುಕ್ಕುರುಕೂರು ಉಪವನಗಳಿಂದಲೂ, ಅವುಗಳಲ್ಲಿ ಎಲ್ಲೆಲ್ಲೂ ಅರಳಿ ಮಳ ಪುಷ್ಪಗಳಿಂದಲೂ, ದುಂಬಿಗಳ ಮಧುರಗಾನದಿಂದಲೂ ತುಂಬಿ ತುಳು ಕುತ್ತಿರುವುದು. ದಿವ್ಯವಾದ ಮತ್ತು ಪ್ರಕೃತಿ ಸುಂದರವಾದ ತಿರುಕ್ಕುರುಕೂರಿನಲ್ಲಿ ನೆಲಸಿದ ಶಠಕೋಪನು (ನಮ್ಮಾಳ್ವಾರರು) ಕಾಮುಗಿಲಂತೆ ಬಣ್ಣವುಳ್ಳವನಾ ಗಿರುವ ಕಂಪಾದ ಮತ್ತು ಪರಿಮಳಭರಿತ ತುಳಸಿಯ ಹಾರವನ್ನು ಧರಿಸಿರುವವನಾದ ಭಗವಂತನನ್ನು ಕುರಿತು ಶ್ರೇಷ್ಠವಾದ ಒಂದು ಸಾವಿರ ಪಾಶುರಗಳನ್ನು ರಚಿಸಿ ಹಾಡಿದ್ದಾನೆ. ~~ಅವುಗಳಲ್ಲಿ~~ ಭಗವಂತನ ಅವತಾರವೈಭವನ್ನು ವಿವರಿಸಿದ ಹತ್ತು ಪಾಶುರಗಳನ್ನು ಮನನಮಾಡಿ ಕಂಠಸ್ಥಗೊಳಿಸಿದವರು, ಅವುಗಳ ಅಂತರಾರ್ಥವನ್ನರಿತವರು,

Garani Srinivasan

ಅಪ್ಸರಳನಿವಾರಣೆಗಾಗಿಯೂ ಇರುವ ವಿಷಯವನ್ನೂ, ಅವನನ್ನು ಹೊಂದಿ
ಕೊಳ್ಳುವ ಬಗೆಯನ್ನು ಆ ಸಾವಿರ ಪಾಶುರಗಳ ಪೈಕಿ ಈ ಹತ್ತು ಪಾಶುರಗಳ
ಲ್ಲಿ ಕರಣೀಯವನು ಬಲು ಸರಳ ವಾಗಿ, ಸಾರಸ್ವರೂಪವಾಗಿ ಹಾಡಿ ಹೇಳಿದ್ದಾರೆ.
ಈ ಹತ್ತು ಪಾಶುರಗಳನ್ನೇ ಚೆನ್ನಾಗಿ ಅರಿತುಕೊಂಡು, ಅನಂತರ ಅನುಷ್ಠಾನ
ಮಾಡುವವರು, ಅಮರರ ಜೊತೆ ಸೇರುತ್ತಾರೆ. ಮತ್ತು, ಭಗವಂತನ ನಿತ್ಯಸ್ತೋತ್ರ
ಯಾಗದಲ್ಲಿ ಸಂತರ ಭಾಗವತರು, ಆನಂದಿಸುತ್ತಾರೆ. ಹೀಗೆ ಇದರ ಫಲಶ್ರುತಿ.

1/1/84

— o —

3.1.84

- ಶ್ರೀಃ -   (72)   - ಶ್ರೀಮತೇ ನಮಃ -

ತಿರುವಾಯ್ಮೊಳಿ - ಮೂರನೆಯ ಪತ್ತು - ಐದನೆಯ ತಿರುವಾಯ್ಮೊಳಿ

திருவாய்மொழி - மூன்றாம் பத்து - ஐந்தாந் திருவாய்மொழி

5. ಮೊಯ್ಮ್ಮಾಮ್ಪೂಮ್ಪೊಳಿಲ್ : மொய்ம்மாம்பூம் பொழில்

1 மொய்ம்மாம் பூம் பொழிற் பொய்கை
முதலைச் சிறைபட்டு நின்ற,
கைம்மாவுக் கருள் செய்த கார்முகில் போல்
வண்ணன் கண்ணன்,
எம்மானைச் சொல்லிப் பாடி யெழுந்தும்
பறந்துந் துள்ளாதார்,
தம்மால் கருமமென் சொல்லீர்
தண்கடல் வட்டத் துள்ளீரே.

ಮೊಯ್ಮ್ಮಾಮ್ಪೂಮ್ ಪೊಳಿಲ್ ಪೊಯ್ಗೈ ಮುದಲೈಚ್ಚಿಱೈಪ್ಪಟ್ಟು ನಿನ್ಱ,
ಕೈಮ್ಮಾವುಕ್ಕರುಳ್ ಶೆಯ್ದ ಕಾರ್ಮುಗಿಲ್ ಪೋಲ್ ವಣ್ಣನ್ ಕಣ್ಣನ್,
ಎಮ್ಮಾನೈಚ್ಚೊಲ್ಲಿಪ್ಪಾಡಿಯೆಳುನ್ದುಮ್ ಪಱನ್ದುನ್ದುಳ್ಳಾದಾರ್,
ತಮ್ಮಾಲ್ ಕರುಮಮೆನ್ ಶೊಲ್ಲೀರ್ ತಣ್ಕಡಲ್ ವಟ್ಟತ್ತುಳ್ಳೀರೇ.

ಮೊಯ್ மொய் = ದಟ್ಟವಾದ, ಮಾ மா = ದೊಡ್ಡ, ಪೂ ಪೊಳಿಲ್ பூம்பொழில் = ಹೂಗಳ ಉದ್ಯಾನವನದಿಂದ ಕೂಡಿದ, ಪೊಯ್ಗೈ பொய்கை = ಸರೋವರದಲ್ಲಿ, ಮುದಲೈ முதலை = ಮೊಸಳೆಯಿಂದ, ಶಿಱೈಪ್ಪಟ್ಟು சிறைபட்டு = ಬಂಧಿಸಲ್ಪಟ್ಟು, ನಿನ್ಱ நின்ற = ನಿಂತಿದ್ದ, ಕೈಮ್ಮಾವುಕ್ಕು கைம்மாவுக்கு = ಗಜಕ್ಕೆ (ಗಜೇಂದ್ರನಿಗೆ), ಅರುಳ್ ಶೆಯ್ದ அருள் செய்த = ಕೃಪೆಮಾಡಿದ, ಕಾರ್ಮುಗಿಲ್ ಪೋಲ್ ವಣ್ಣನ್ கார் முகில் போல் வண்ணன் = ಕಾರ್ಮುಗಿಲಿನಂತೆ ಬಣ್ಣವುಳ್ಳ, ಕಣ್ಣನ್ கண்ணன் = ಶ್ರೀಕೃಷ್ಣನಾದ (ಆಶ್ರಿತಸುಲಭನಾದ), ಎಮ್ಮಾನೈ எம்மானை = ನಮ್ಮ ಸ್ವಾಮಿಯನ್ನು, ಶೊಲ್ಲಿ ಪಾಡಿ சொல்லிப் பாடி = ಸ್ತುತಿಸಿ ಹಾಡಿ, ಎಳುನ್ದುಮ್ எழுந்தும் = ಎದ್ದು, ಪಱನ್ದುಮ್ பறந்தும் = ಕುಣಿದಾಡಿಯೂ, ತುಳ್ಳಾದಾರ್ துள்ளாதார் ತಮ್ಮಾಲ್ தம்மால் = ಉತ್ಸಾಹಗೊಳ್ಳದವರಿಂದ, ಕರುಮಮ್ கருமம் = ಫಲ, ಎನ್ ಶೊಲ್ಲೀರ್ என் சொல்லீர் = ಏನೆಂದು ಹೇಳುವಿರಿ, ತಣ್ தண் = ತಂಪಾದ, ಕಡಲ್ கடல் = ಕಡಲಿನಿಂದ ಸುತ್ತುವರಿದ, ವಟ್ಟತ್ತುಳ್ಳೀರೇ வட்டத்துள்ளீரே = ಭೂಮಂಡಲದಲ್ಲಿರುವವರೇ.

ತಂಪಾದ ಕಡಲಿನಿಂದ ಸುತ್ತುವರಿಯುವ ಭೂಮಂಡಲವಾಸಿಗಳೇ, ದಟ್ಟವಾದ ದೊಡ್ಡ ಹೂವಿನ ತೋಟಗಳಿಂದ ಕೂಡಿದ ಸರೋವರದಲ್ಲಿ ಮೊಸಳೆಯಿಂದ ಬಂಧಿಸಲ್ಪಟ್ಟು ನಿಂತಿದ್ದ ಗಜಕ್ಕೆ ಕೃಪೆಮಾಡಿದ ಕಾರ್ಮುಗಿಲಿನಂತೆ

Garani Srinivasan

ಬಣ್ಣವುಳ್ಳ ಆಕಾಶಕ್ಕಾಗಾರಯಾದ ನಮ್ಮ ಸ್ವಾಮಿಯನ್ನು ಸ್ತುತಿಸಿ ಹಾಡುತ್ತ ಎದ್ದು ಕುಣಿದಾಟ ಉತ್ಸಾಹಗೊಳ್ಳದವರ ಸ್ಥಿತಿ ಏನೆಂದು ಹೇಳುತ್ತಾರೆ? (1)

ಇಂದಿನ ತಿರುವಾಯ್ಮೊಳಿಯಲ್ಲಿ ಭಗವಂತನನ್ನು ಅನುಭವಿಸುವ ಮಾರ್ಗವನ್ನು ಆಳ್ವಾರರು ಸೂಚಿಸಿದರು. ಭೂಲೋಕ ವಾಸಿಗಳಾದವರೆಲ್ಲ, ಭಗವಂತನ ಸೃಷ್ಟಿಯಾದ ಲೀಲಾ ವಿಭೂತಿಯನ್ನು ಕಣ್ಣಾರೆ ಕಾಣುತ್ತ, ಅವುಗಳಲ್ಲೆಲ್ಲಾ ಭಗವಂತನು ಅಂತರಾತ್ಮನಾಗಿ ನಿಯಮಿಸುತ್ತಿದ್ದಾನೆಂಬ ಭಾವನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಅವುಗಳನ್ನು ಆದರದಿಂದ ಅನುಭವಿಸುತ್ತ ಬಂದರೆ, ಆ ಮೂಲಕ ಭಗವಂತನ ಸಾನ್ನಿಧ್ಯವನ್ನು ಪಡೆದುಕೊಳ್ಳಬಹುದು ಎಂದು ಅವರು ಹೇಳಿದರು. ಭೂಮಿಯ ಮೇಲೆ ವಾಸಿಸುತ್ತ, ಭಗವಂತನ ವಿಶ್ವಸೃಷ್ಟಿಯಾದ ಎಲ್ಲಾ ಚೇತನಾಚೇತನ ವಸ್ತುಗಳನ್ನು ಕಾಣುತ್ತ, ಅವುಗಳ ಉಪಯೋಗವನ್ನು ಪಡೆಯುತ್ತ, ಭಗವಂತನನ್ನು ಮಾತ್ರ ಗಮನಿಸದೆ ಜೀವನ ನಡೆಸುವವರನ್ನು ಕುರಿತು ಆಳ್ವಾರರು ಕನಿಕರದಿಂದ ಮಾತನಾಡುತ್ತಿದ್ದಾರೆ.

ಆಳ್ವಾರರು ಹೇಳುತ್ತಾರೆ: ಭೂಲೋಕವಾಸಿಗಳೇ, ಭಗವಂತನಿಗೆ ತನ್ನ ಸೃಷ್ಟಿಯ ಎಲ್ಲಾ ಚೇತನಾಚೇತನ ವಸ್ತುಗಳ ವಿಷಯದಲ್ಲೂ ಅಪಾರವಾದ ಕನಿಕರ ಮಮತೆಯು ಬಾಯಿನ ಇದೆ. ದಟ್ಟವಾದ ಕಾಡಿನ ನಡುವೆ ಸರೋವರದಲ್ಲಿ ಮೊಸಳೆಯ ಬಾಯಿನ ಸಿಕ್ಕಿಬಿದ್ದು, ಬಿಡಿಸಿಕೊಳ್ಳಲು ಸಾಧ್ಯವಿಲ್ಲದೆ ನರಳುತ್ತಿದ್ದ ಗಜವನು ಭಕ್ತಿಯಿಂದ ಭಗವಂತನನ್ನು 'ಆದಿಮೂಲಾ' ಎಂದು ಕೂಗಿ, ದೀನನಾಗಿ ಮೊರೆಯಿಟ್ಟಾಗ, ಆ ಕ್ಷಣದಲ್ಲೇ ಭಗವಂತನು ಗರುಡಾರೂಢನಾಗಿ ಅಲ್ಲಿಗೆ ಧಾವಿಸಿ ಬಂದು, ತನ್ನ ಚಕ್ರಾಯುಧದಿಂದ ಮೊಸಳೆಯನ್ನು ಕತ್ತರಿಸಿ, ಗಜವನ್ನು ರಕ್ಷಿಸಿದನಲ್ಲ! ಪರಮ ಕಾರುಣಿಕನೂ, ಉದಾರಿಯೂ, ಆಕರ್ಷಣೀಯನೂ ಆದ ಅವನನ್ನು ಆದರದಿಂದ ಸ್ತುತಿಸದೆ, ಗುಣಗಾನಮಾಡದೆ, ವ್ಯರ್ಥವಾಗಿ ಕಾಲಕಳೆಯುವವರ ಸಮುದಾಯದ ಸ್ಥಿತಿ ಏನಾದರೂ ಇದೆಯೇ? ನೀವೇ ಯೋಚಿಸಿ.

ಭಗವತ್ಪ್ರೀತಿಯಾಗಿ, ಭಗವದರ್ಪಣಬುದ್ಧಿಯಿಂದ ಮಾಡುವ ಯಾವ ಕರ್ಮವಾದರೂ ಭಗವಂತನನ್ನು ಸೇರುತ್ತದೆ. ಹಾಗಲ್ಲದೆ, ಕರ್ಮ ಮಾಡಬೇಕೆಂಬ ಬುದ್ಧಿಯಿಂದ ಯಾಂತ್ರಿಕವಾಗಿ ಮಾಡುವ ಯಾವ ಕರ್ಮವಾದರೂ, ಅದಕ್ಕೆ ಬೆಲೆಯೆಲ್ಲಿಯದು?

2. தண் கடல் வட்டத்துள்ளாரைத்
தமக்கிரையாத் தடிந்துண்ணும்,
திண் கழற்கால சுரர்க்குத்
தீங்கிழைக்குந் திருமாலை,
பண்கள் தலைக்கொள்ளப்
பாடிப் பறந்துங் குனித்துழலாதார்,
மண் கொண்டுலகில் பிறப்பார்
வல்வினை மோதமலைந்தே.

Garani Srinivasan

ತಣ್ ಕಡಲ್ ವಟ್ಟತ್ತುಳ್ಳಾರೈ ತ್ತಮಕ್ಕಿರೈಯಾ ತ್ತಡಿನ್ದುಣ್ಣುಂ,
ತಿಣ್ ಕಳಲ್ ಕಾಲ್ ಅಸುರರ್ಕ್ಕು ತ್ತೀಙ್ಗಿಳೈಕ್ಕುಂ ತಿರುಮಾಲೈ,
ಪಣ್ ಕಳ್ ತಲೈಕ್ಕೊಳ್ಳ ಪ್ಪಾಡಿ ಪ್ಪಱನ್ದುಂ ಕುನಿತ್ತುಂ ಉಳಲಾದಾರ್,
ಮಣ್ ಕೊಳ್ ಉಲಗಿಲ್ ಪಿಱಪ್ಪಾರ್ ವಲ್ವಿನೈ ಮೋದ ಮಲೈನ್ದೇ.

ತಣ್ ಕಡಲ್ தண் கடல் = ತಂಪಾದ ಕಡಲಿನಿಂದ ಸುತ್ತುವರಿದ, ವಟ್ಟತ್ತುಳ್ಳಾರೈ வட்டத்துள்ளாரை = ಭೂಮಿಯ ಮೇಲಿರುವವರನ್ನು, ತಮಕ್ಕು தமக்கு = ತಮಗೆ, ಇರೈಯಾ இரையா = ಆಹಾರವಾಗಿ, ತಡಿನ್ದು தடிந்து = ಕೊಂದು, ಉಣ್ಣುಂ உண்ணும் = ತಿನ್ನುವ, ತಿಣ್ ಕಳಲ್ ಕಾಲ್ திண் கழல் கால் = (ಬಲಿಷ್ಠವಾದ) ವೀರ ಕಾಲಂದುಗೆಯುಳ್ಳ ಕಾಲುಗಳ, ಅಸುರರ್ಕ್ಕು அசுரர்க்கு = ಅಸುರರಿಗೆ, ತೀಙ್ಗು ಇಳೈಕ್ಕುಂ தீங்கு இழைக்கும் = ಕೇಡನ್ನು ನೀಗಿಸುವ, ತಿರುಮಾಲೈ திருமாலை = ಸರ್ವೇಶ್ವರನನ್ನು (ಶ್ರೀಶನ), ಪಣ್‌ಗಳ್ பண் கள் = ಹಾಡುಗಳನ್ನು, ತಲೈಕ್ಕೊಳ್ಳ தலைக்கொள்ள = ಬಹಳವಾಗಿ, (ಜೋರಾಗಿ) ಪಾಡಿ பாடி = ಹಾಡಿಯೂ, ಪಱನ್ದುಂ பறந்தும் = ಅಲೆದಾಡಿಯೂ, ಕುನಿತ್ತು குனித்து = ಕುಣಿದಾಡಿಯೂ (ನಲಿದಾಡಿಯೂ), ಉಳಲಾದಾರ್ உழலாதார் = ಎಲ್ಲೆಲ್ಲೂ ಸಂಚರಿಸದವರು, ಮಣ್ ಕೊಳ್ ಉಲಗಿಲ್ மண் கொள் உலகில் = ಭೂಲೋಕದಲ್ಲಿ. ಪಿಱಪ್ಪಾರ್ பிறப்பார் = ಹುಟ್ಟುತ್ತಾರೆ, (ಪುನರ್ಜನ್ಮವಡೆಯುತ್ತಾರೆ), ವಲ್ವಿನೈ வல் வினை = ಕ್ರೂರ ಪಾಪಗಳು, ಮೋದ ಮಲೈನ್ದೇ மோத மலைந்தே = ಸಂಕಟಗಳುಂಟಾಗುವಂತೆ ಮೇಲೆ ಬಿದ್ದು (ಅತಿಶಯವಾಗಿ ನಲುಗಿಸುವಂತೆ).

ತಂಪಾದ ಕಡಲಿನಿಂದ ಸುತ್ತುವರಿದ ಭೂಮಿಯ ಮೇಲಿರುವವರನ್ನು ತಮಗೆ ಆಹಾರವಾಗಿ ಕೊಂದು ತಿನ್ನುವ ವೀರ ಕಾಲ್ಗಡಗಗಳನ್ನು ಧರಿಸಿದ ಕಾಲುಗಳ ಅಸುರರಿಗೆ ಬರುವ ಕೇಡನ್ನು ನೀಗಿಸುವ ಲಕ್ಷ್ಮೀನಾಥನನ್ನು (ಶ್ರೀದೇವಿಯ ಪತಿಯನ್ನು, ಸರ್ವೇಶ್ವರನನ್ನು) ಕುರಿತು ಹಾಡಿ, ನರ್ತಿಸಿ, ಕುಣಿದಾಡಿ, ಎಲ್ಲೆಲ್ಲೂ ಅಲೆದಾಡದವರು ಈ ಭೂಲೋಕದಲ್ಲಿ ಕ್ರೂರ ಪಾಪಗಳು ಅವರ ಮೇಲೆ ಬಿದ್ದು (2)
ಸಂಕಟಗೊಳ್ಳುವಂತೆ ಮತ್ತೆ ಹುಟ್ಟುತ್ತಾರೆ.

ಹಿಂದಿನ ಪಾಶುರದಲ್ಲಿ ಭಗವಂತನನ್ನು ಭಜಿಸದ ಭೂಲೋಕವಾಸಿಗಳು ಅವರು ನಡೆಸುವ ಕರ್ಮಗಳಿಗೆ ಫಲವಿಲ್ಲವಾದುದು? ಎಂದು ಪ್ರಶ್ನೆ ಕೇಳಲಾಯಿತು. ಅದಕ್ಕೆ ಇಲ್ಲಿ ಸಮಂಜಸವಾದ ಉತ್ತರ ಬರುತ್ತದೆ.

"ತಮಕ್ಕಿರೈಯಾ ತ್ತಡಿನ್ದುಣ್ಣುಂ ..... ಅಸುರರ್ಕ್ಕು" — ಇಲ್ಲಿ 'ಅಸುರರು' ಎಂಬುದಕ್ಕೆ 'ರಾಕ್ಷಸರು' ಎಂಬ ನೇರವಾದ ಅರ್ಥವಲ್ಲ. 'ಆಸುರೀ ಸ್ವಭಾವವುಳ್ಳವರು' ಎಂಬ ಅರ್ಥವನ್ನು ಕೊಳ್ಳಬೇಕಾಗುತ್ತದೆ. ಮನುಷ್ಯರನ್ನು ಆಹಾರ

Garani Srinivasan

ಬರೆಯೂ, ಅವರವರ ಸ್ವಭಾವದಲ್ಲಿ ಅನುಸಾರವಾಗಿ, ಎಂದೆನ್ನುತ್ತಾರೆ. ಸ್ವೈಲ ಮಾನವರು – ಸತ್ವಗುಣ ಪ್ರಧಾನವಾಗಿ ಉಳ್ಳವರು – ಸಾತ್ವಿಕರು, ಮನುಷ್ಯರಾ ನವರು – ರಾಜಸೀ ಪ್ರವೃತ್ತಿಯುಳ್ಳವರು – ರಾಜಸರು, ಮತ್ತು, ತಾಮಸಗುಣ ಸಂಬಂಧ ನವರು – ಅಸುರ ಸ್ವಭಾವದವರು – ಅಸುರರು. ಈ ಬರೆಯುವಿಕೆಯನ್ನು ಭಾಗವತ್ತ ತೆಯಲ್ಲಿ ಬಹಳ ಸ್ಪಷ್ಟವಾಗಿ ವಿವರಿಸಲಾಗಿದೆ.

ಆಳ್ವಾರರು ಹೇಳುತ್ತಾರೆ: ಉತ್ತಮನಾದ ಸರ್ವೇಶ್ವರನು ಪರಮ ಕರುಣಾ ಮೂರ್ತಿ. ಭೂಲೋಕ ವಾಸಿಗಳನ್ನು – ಸಾತ್ವಿಕ, ರಾಜಸರನ್ನು ಮತ್ತು ತಾಮಸ ಜನರನ್ನು ಸಹ ಉದ್ಧರಿಸಲು – ಅಂತಹ ಸನ್ನಿವೇಶದಲ್ಲಿ ಭಗವಂತನು ಅವತರಿಸುತ್ತಾನೆ. ~~ಅವನಲ್ಲಿ ಭಕ್ತಿ ಮಾಡದವರ~~ ರಕ್ಷಿಸಲು* ಭಗವಂತನು ಅವತರಿಸುತ್ತಾನೆ. ಹೀಗೆ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ ಮೊದಲಾದ ಭಗವಂತನನ್ನು ಸ್ತುತಿಸಿ, ನಮಿಸಿ, ಕೀರ್ತಿಸಿ, ಸೇವಿಸಿ, ಪೂಜಿಸಿ ಉದ್ಧರಿಸಲ್ಪಡುತ್ತಾನೆ. ಹಾಗೆ ಆನಂದಿಸಿ ಅಲೆದಾಡುತ್ತಾರೋ ಅವರನ್ನು ತಪ್ಪದೆ ಸದ್ಗತಿಗೆ ಒಯ್ಯುತ್ತಾನೆ. ಹಾಗೆ ಮಾಡದೆ ಇರುವ ಜನರಿಗೆ, ಅವರ ಕರ್ಮಗಳಿಗೆ ನಿಷ್ಕೃತಿಯೇ ಇಲ್ಲ. ಅವರಿಗೆ ಮಾಡದೆ ಇರುವ ಜನರಿಗೆ, ಅವರ ಕರ್ಮಗಳಿಗೆ. ಪುನರ್ಜನ್ಮವೇ ಪ್ರಾಪ್ತ ಭೂಲೋಕದಲ್ಲಿ ದುಃಖ ಸಂಕಟಗಳು ತುಂಬಿರುವ ಪುನರ್ಜನ್ಮವೇ ಪ್ರಾಪ್ತ ವಾಗುತ್ತದೆ.

ಪುನರ್ಜನ್ಮದ ಸಂಕಟವನ್ನು, ಭೂಲೋಕ ವಾಸವನ್ನು ತಪ್ಪಿಸಿಕೊಳ್ಳ ಬೇಕಾದರೆ ಭಗವದ್ಭಕ್ತಿ. ಅದನ್ನು ಬಿಡದೆ ನಡೆಸುತ್ತಾ ದೃಢ ವ್ರತದಿಂದ ಕೂಡಿರುವುದೇ ಭಗವದ್ಭಕ್ತಿ. ಅದಕ್ಕೆ ತಕ್ಕ ಶೀಲವಾದ ಗುಣಗಳನ್ನೂ, ಭಕ್ತಿಯನ್ನು ಬೆಳೆಸಿಕೊಂಡರೆ, ಅದಕ್ಕೆ ತಕ್ಕ ಫಲವಾದ ಸಾಯುಜ್ಯವನ್ನೂ, ಭಗವತ್ಕೈಂಕರ್ಯವನ್ನು ಪಡೆಯುವುದು – ಎಂದರ್ಥ.

3\. மலையையெடுத்துக் கன்மாரி காத்துப்
பசுநிரை தன்னை,
தொலைவுதவிர்த்த பிரானைச்
சொல்லிச் சொல்லி நின்றெப்போதும்,
தலையினோடாதனந்தட்டத்
தடுக்குட்டமாய்ப் பறவாதார்,
அலைகொள் நரகத்தழுந்திக்
கிடந்துழக்கின்ற வம்பரே.

ಮಲೈಯೈ ಯೆಡುತ್ತುಕ್ಕನ್ಮಾರಿ ಕಾತ್ತುಪ್ಪಶು ನಿರೈ ತನ್ನೈ,
ತೊಲೈವುದವಿರ್ತ್ತ ಪಿರಾನ್ನೈ ಚ್ಚೊಲ್ಲಿ ಚ್ಚೊಲ್ಲಿ ನಿನ್ರೆಪ್ಪೋದುಮ್,
ತಲೈಯಿನೋಡಾದನನ್ತಟ್ಟತ್ತಡುಕ್ಕುಟ್ಟಮಾಯ್ಪ್ಪರವಾದಾರ್,
ಅಲೈಕೊಳ್ ನರಗತ್ತುಅೞುನ್ದಿಕ್ಕಿಡನ್ದುೞಕ್ಕಿನ್ರ ವಮ್ಬರೇ.

ಮಲೈಯೈ = ಬೆಟ್ಟವನ್ನು, ಎಡುತ್ತು = ಎತ್ತಿ ಹಿಡಿದು, [illegible] ಕಾತ್ತು = ಕಾಪಾಡಿ

Garani Srinivasan

ಪಶು ನಿರೈತನ್ನೈ ಪಱ್ಱಿನಾರ್ ಕಣ್ಣಿ = ದನಗಳ ಮಂದೆಗಳನ್ನು, ಕೋಲ್ತೈವ
ಲೆಕ್ಕಾಗಿಲು = ನಾಶವಾದವುದನ್ನು, ಕವಿರಿತ್ತ ಕಯಿರ್ಕ್ಕೆ = ಕಪ್ಪಿಸಿದ,
ಪಿರಾನೈ ಪಿರಾಗಿ = ಸ್ವಾಮಿಯನ್ನು, ಕೊಲ್ಲ ಕೊಲ್ಲ ... :
ಹೇಳುತ್ತಾ ಹೇಳುತ್ತಾ, ನಿನ್ನಯು ನಿನ್ನಱು = ಇದ್ದು, ಎಪ್ಪೋದುಮ್ ...
ಕುಂ = ಎಲ್ಲಾ ಕಾಲದಲ್ಲೂ, ಕಲ್ಲೆಯನೋದು ಕೈವಿಯಿಱೆರು = ಕಲೆಯಿಂದ,
ಅದನಮ್ ಅಕ್ಕಣಾಂ = ನೆಲವನ್ನು, ಕಬ್ಬ ಕಟ್ಟ = ಕಬ್ಬುವಂತೆ, ಕಬುಂಬುಮ್
ಇಯ ಕುರುಕುಟ್ಟಂ ಆಯ್ = ಕಲೆಕೆಳಗಾಗಿ, ವಿಲುವಾದಾರ್ ಬಱವಾಕ್ಕಾರ್ = ಪ್ರಿಯ
ಕಿಯ ಕುರುಕುಟ್ಟಂ ಆಯ್ = ಕಲೆಕೆಳಗಾಗಿ, ಅಲ್ಲೆಕೊಳ್ ಅವೆ... = (ಅಕ್ಕಿಂದಿರ) ಜೋರಳಾಗ
ಕ್ಕಿನದವರು (ಹಚ್ಚಿಸಿದವರು), ಅಲ್ಲೆಕೊಳ್ ಅವೆ... , ಅಲುಬ್ಬು ಅಕ್ಕುನ್ನೀ
ವ, (ಸಂಕಟಪಡುವ), ನರಕತ್ತು ನರಕತ್ತು = ನರಕದಲ್ಲಿ, ಉಬ್ಬೆಕ್ಕನ್ ಉಣ್ಣು ...
= ಮುಳುಗಿ, ಕಿಡನ್ದು ಕಿಡನ್ದು = ಬಿದ್ದು,
ಸಂಕಟಪಡುವ, ವಮ್ಬರೇ ... = ವೃದ್ಧರ್ ಮಾನವರೇ.

ಚೆಬ್ಬವನ್ನು ಎತ್ತಿ ಹಿಡಿದು, ಕಲ್ಲು ಮಳೆಯನ್ನು ತಡೆದು, ದನಗಳ ಮಂದೆಗಳು ನಾಶವಾದವುದನ್ನು ತಪ್ಪಿಸಿದ ಸ್ವಾಮಿಯನ್ನು ಕುರಿತು ಎಲ್ಲಾ ಕಾಲದಲ್ಲೂ ಹೇಳುತ್ತಾ, ಕಲೆಯು ನೆಲವನ್ನು ತಬ್ಬುವಂತೆ ಕಲೆಕೆಳಗಾಗಿ ಯಾದರೂ ಪ್ರಿಯುಕ್ತನದ ಹೇಳುತ್ತಾ, ಕಲೆಯು ನೆಲವನ್ನು ತಬ್ಬುವಂತೆ ಕಲೆಕೆಳಗಾಗಿ ಸಂಕಟಗೊಳ್ಳುವ ನರಕದಲ್ಲಿ ಮುಳುಗಿ ಬಿದ್ದು ವರು ಅಕ್ಕಿಂದಿರ ಜೋರಳಾಗಿ ಸಂಕಟಗೊಳ್ಳುವ ನರಕದಲ್ಲಿ ಮುಳುಗಿ ಬಿದ್ದು (3)
ಸಂಕಟಪಡುವ ವೃದ್ಧರ್ ಮಾನವರೇ (ಅನುಕ್ತಾರೆ).

ಕರುಣಾ ಸಾಗರನಾದ ಭಗವಂತನಲ್ಲಿ ನಿಶ್ಚಲವಾಗಿ ಮನಸ್ಸು ನಿಲ್ಲಲಾರದ ಭಕ್ತಿ ಮಾಡುವುದಕ್ಕೆ ಎಷ್ಟೇ ಶ್ರಮವಿದ್ದರೂ ಬೇಕಾಗಿಲ್ಲ. ಆ ಎಲ್ಲ ಪ್ರಯುಕ್ತ ವೃದ್ಧ ಕೆಳಗನು ನರಕಯಾತನೆಯನ್ನು ಅನುಭವಿಸುವುದನ್ನು ತಪ್ಪಿಸುತ್ತದೆ.
– ಇದು ಈ ಪಾಶುರದ ವಿಷಯ.

"ಮಲೈಯೈ ಎಡುತ್ತು . . . . . . ಕೊಲ್ಲೈವೃದ ವಿರಿತ್ತ ಪಿರಾನ್" – ಭಾಗವತದ ಶ್ರೀಕೃಷ್ಣಾವತಾರದ ಒಂದು ಅದ್ಭುತ ಪ್ರಸಂಗ ಇದು. ನಂದಗೋಕುಲದಲ್ಲಿ ಬಾಲಕೃಷ್ಣನು ಬೆಳೆಯುತ್ತಿದ್ದಾಗ, ವರ್ಷಕ್ಕೊಮ್ಮೆ ಗೋವಳರು ದೇವೇಂದ್ರ ಪೂಜೆಯನ್ನು ನಡೆಸಿ, ಭಾರಿಯಾದ ಎಡೆಯನ್ನು ಮಾಡಿ ದೇವೇಂದ್ರನಿಗೆ ಸಮರ್ಪಿಸುತ್ತಿದ್ದುದನ್ನು ಕಂಡನು. ದೇವೇಂದ್ರನು ಮಳೆಯನ್ನು ಕಾಲಕಾಲಕ್ಕೆ ಕೊಡುವನೆಂದೂ ದನಕರುಗಳಿಗೆ ಬೆಳೆಯುದನ್ನು ಮಾಡುವನೆಂಬುದಕ್ಕಾಗಿ ಈ ದೇವೇಂದ್ರ ಪೂಜೆ. ಬಾಲಕೃಷ್ಣನಿಗೆ ಈ ಪೂಜೆ ಸಮಂಜಸವೆನಿಸಲಿಲ್ಲ. ಅವನು ಗೋವಳರಿಗೆ ಉಪಾಯವನ್ನು ತಿಳಿಸಿ, ದೇವೇಂದ್ರನಿಗೆ ಬದಲಾಗಿ ತಮ್ಮ ಕಣ್ಣ ಮುಂದೆಯೇ ಇರುವ ಗೋವರ್ಧನಗಿರಿಗೆ ಪೂಜೆಯನ್ನು ಸಲ್ಲಿಸಬೇಕೆಂದೂ, ನಿಜವಾಗಿಯೂ ಅದೇ ಅವರಿಗೆ ಮಳೆ ಬೆಳೆಗೆ ಉತ್ತೇಜನ ಮಾಡುವುದೆಂದೂ ತಿಳಿಸಿದನು. ಅದರಂತೆ ಗೋವಳರು ಆ ವರ್ಷ 'ಗೋವರ್ಧನ ಪೂಜೆ' ನಡೆಸಿ, ಅದರ ಬದಲಲ್ಲಿ

ಭಾಗ ಎಡೆಯನ್ನು ನೀಡಿದನು. ಅವನಿಗೆ ಆಶ್ಚರ್ಯವಾಗುವಂತೆ, ಬೆಟ್ಟದಿಂದ ಒಬ್ಬ ವ್ಯಕ್ತಿ ಹೊರಬಂದು, ಅವರು ನೀಡಿದ್ದ ಎಡೆಯನ್ನೆಲ್ಲಾ ತಿಂದು, ಅವರನ್ನು ಹರಸಿ ಮಾಯವಾಯಿತು. ದೇವೇಂದ್ರನಿಗೆ ಇದು ತಿಳಿಯಿತು. ಗೋವಳರ ಅಹಂಕಾರಕ್ಕೆ ಅವನಿಗೆ ತುಂಬ ಕೋಪ ಬಂತು. ಇದಾದ ನಂತರ ಗೋಕುಲವನ್ನೇ ನಾಶಪಡಿಸಿ ಬಿಡುವುದಕ್ಕಾಗಿ, ಅವನು ಏಳು ದಿನಗಳ ಕಾಲ ನಿರಂತರ ಬಿರುಗಾಳಿ ಮಳೆಯನ್ನು ಸುರಿಸಿದನು. ಆಗ ಬಾಲಕೃಷ್ಣನು ಆ ಗೋವರ್ಧನಗಿರಿಯನ್ನೇ ಎತ್ತಿ, ಕೊಡೆಯಂತೆ ತನ್ನ ಕಿರುಬೆರಳ ಮೇಲೆ ಹಿಡಿದುಕೊಂಡು, ಅದರಡಿಯಲ್ಲಿ ಎಲ್ಲಾ ಗೋವುಗಳ ಮಂದೆಗಳನ್ನು, ಗೋವಳರನ್ನು ಇರಿಸಿಕೊಂಡು ಕಾಪಾಡಿದನು.

ಆಳ್ವಾರರು ಹೇಳುತ್ತಾರೆ: ಹಿಂದೆ, ಭಗವಂತನು ದೇವೇಂದ್ರನ ಕಲ್ಲು ಮಳೆಯಿಂದ ಗೋವುಗಳ ಮಂದೆಯನ್ನು ತಪ್ಪಿಸಲು ಮಾಡಿದ ಅದ್ಭುತ ಕಾರ್ಯದಿಂದ, ಅವನ ಔದಾರ್ಯವನ್ನು ತಿಳಿಯಬಲ್ಲರು. ಅವನ ನಾನಾ ಆಶ್ಚರ್ಯ ಪ್ರಸಂಗಗಳನ್ನು ಮೇಲಿಂದ ಮೇಲೆ ಹೇಳುತ್ತ, ಅವನ ನಾಮ ಸಂಕೀರ್ತನೆ ಮಾಡುತ್ತ, ಗುಣಗಾನ ಮಾಡುತ್ತ ಅವನಲ್ಲಿ ಭಕ್ತಿಯನ್ನು ವ್ಯಕ್ತಪಡಿಸಿಕೊಳ್ಳಬೇಕು. ಅದು ಎಷ್ಟೇ ಕಷ್ಟವಾದರೂ ಬಿಡಬಾರದು. ಪ್ರಯತ್ನವನ್ನು ಕಡಿಮೆ ಮಾಡಬಾರದು. ಇದು ಅವನ ಪ್ರೀತಿಗೆ ಎಂದೆಯಲ್ಲ. ಪ್ರಯತ್ನವನ್ನು ತಪ್ಪಿಸುವುದು. ನಮ್ಮನ್ನು ಬಳಸಿ ಮಾಡುವುದು. ಹಾಗೆ ಮಾಡದ ಮಾನವ ಜನ್ಮ ವ್ಯರ್ಥ.

4. வம்பவிழ் கோதை பொருட்டா
மால்விடை யேழுமடர்த்த,
செம்பவளத் திரள் வாயன்
ஸ்ரீதரன் தொல்புகழ்பாடி,
கும்பிடு நட்டமிட்டாடிக்
கோகு கட்டுண்டுழலாதார்,
தம்பிறப்பால் பயனென்னே
சாது சனங்களிடையே.

ವಮ್ಬವಿೞ್ ಕೋದೈ ಪೊರುಟ್ಟಾ ಮಾಲ್ ವಿಡೈಯೇೞುಮಡರ್ತ್ತ,
ಸೆಮ್ಬವಳತ್ತಿರಳ್ ವಾಯನ್ ಸ್ರೀದರನ್ ತೊಲ್ ಪುಗೞ್ ಪಾಡಿ,
ಕುಮ್ಬಿಡು ನಟ್ಟಮಿಟ್ಟಾಡಿ ಕ್ಕೋಕುಕಟ್ಟುಣ್ಡುೞಲಾದಾರ್,
ತಮ್ಬಿಱಪ್ಪಾಲ್ ಪಯನೆನ್ನೇ ಸಾದು ಸನಙ್ಗಳಿಡೈಯೇ.

ವಮ್ಮು ಉಮ್ಪು = ಪರಿಮಳವು, ಅವಿಲುಮ್ ಆಯ್ನ್ದ = ದರದುತ್ತಿರುವ (ಅರಳುತ್ತಿರುವ), ಕೋಳದ್ವ ಕೋದೈ = ಹೂಮಾಲೆಯ, ಪ್ಪೊರುಟ್ಟ ಉಬಾಗೆ ಟಗ = ನಮಿಸ್ತ್ರನಾಗ, ಮಾಲ್ ವಿತ್ತೈ ಮಾಲವಿಡೈ = ಬಲವಾದ ಗೂಳಿಗಳು, ಏಲುಮಾ ಏಳಿಂ = ಏಳನ್ನು, ಅಡರತ್ತ ಅಡರ್ತ್ತ = ಅದಮಿಸಿದ, ಕೆಮ ಪವಳವಾ ಏಚಮ್ ಪವಳಾಮ್ = ಕೆಂಪಾದ ಹವಳದ, ಕಿರಳ್ ಕಿರ್ರ = ಉಂಡೆ ಯುಂಕಿರುವ, ವಾಯನ್ ಮಾಯನ್ = ಕುಟಿಯುನ್ನುಳ್ಳವನಾದ, ಕೆಂಪಕನ್ ಕಿರಿ ಯುಂಕಿರುವ, ವಾಯನ್ ಮಾಯನ್ = ಕುಟಿಯುನ್ನುಳ್ಳವನಾದ, ಪುರಾತನನಾದ, ಕೂರನ್ = ಶ್ರೀಧರನ, ಕೋಲ್ ಪುಟೈ ಏಕಾಸ ಪುಕಳ್ = ಪುರಾತನನಾದ, ಪಾಡಿ ಪಾಡಿ = ಹಾಡುತ್ತಾ, ಕುಮ್ಬಿಡುಕುಮ್ಬಿಡು = ನಮಸ್ಕರಿ ಕಿಂಕರಿಯನ್ನು, ಪಾಡಿ ಪಾಡಿ = ಹಾಡುತ್ತಾ, ಇಟ್ಟು ಆಡಿಹಿಟ ಸುವ (ಕೈಮುಗಿಯುವ), ನಟ್ಟಮ್ ಕೂಟ್ಟಂ = ನೃತ್ಯವನ್ನು, ಇಟ್ಟು ಆಡಿ ಏತ್ತಿ = ರೂಪಿಸಿ ಆಡಿ, ಕೋಳ್ದು ಕೋಡು = ವಂಚನೆಯನ್ನು, ಉಡೈಯ ಉಕಟ್ಟು = ತೋರದು, ಉಣ್ಣು ಉಣ್ಣ = ಅನುಭವಿಸಿ, ಉಲಕಾಡಾರ್ ಉಲ್ಲಾಸಾಗಾರ್ = ಅಲೆದಾಡದವರು, ತಮ ಪಿಲುಮಾಲ್ ಕುಂಪಿರಪ್ಪಾಗ = ಫಲವೇನಿದೆ, = ತಮ್ಮ ಜನ್ಮದಿಂದ, ವಾಯನ್ ಎನ್ನೇ ಪಯನ್ ಆಣ್ಣಣೇ = ಸಾಧುಸಜ್ಜನರ, ಇನ್ಹ್ಯೆಯು ಕಾಡು ಕಯುನಕ್ಕಳ್ ಸಾತು ಸಯಣಾಗುಕಳ್ = ಸಾಧುಸಜ್ಜನರ, ಇಡೈಯು ಇಡೈ = ನಡುವೆಯೇ (ಇದ್ದಾಗ್ಲ).

ಪರಿಮಳವು (ಅರಳ) ದರದುತ್ತಿರುವ ಹೂವಿನ ಹಾರದ ನಿಮಿತ್ತವಾಗಿ ಬಲವಾದ ಏಳು ಗೂಳಿಗಳನ್ನು ಅದಮಿಸಿದ, ಕೆಂಪಾದ ಹವಳದ ಉಂಡೆಯುಂಕಿ ರುವ ಕುಟಿಯುನ್ನುಳ್ಳವನಾದ ಶ್ರೀಧರನ ಪುರಾತನನಾದ ಕಿಂಕರಿಯನ್ನು ಹಾಡುತ್ತಾ, ಕೈಮುಗಿಯುವ ನೃತ್ಯವನ್ನು ರೂಪಿಸಿ ಆಡುತ್ತಾ, ವಂಚನೆಯು ಕೋಡುತ್ತಾ ಅನುಭವಿಸುತ್ತಾ ಅಲೆದಾಡದವರು ಸಾಧುಸಜ್ಜನರ ನಡುವೆಯೇ ನ್ನ ತೋರದು, ಅನುಭವಿಸುತ್ತಾ ಅಲೆದಾಡದವರು ಸಾಧುಸಜ್ಜನರ ನಡುವೆ ಇದ್ದಾಗ್ಲ, ಅವರ ಜನ್ಮದಿಂದ ಫಲವೇನಿದೆ? (4)

ಸಾಧು ಸಜ್ಜನರ ಸಂಗದಲ್ಲಿ ಸದಾ ಇರುವವರು ಒಳ್ಳೆಯವರೇ ಆಗುತ್ತಾರೆ ಎಂದು ಹೇಳುವುದು ಸಹಜವಾದರೂ, ಅಂಥವರ ನಡುವೆ ಇದ್ದು ~~ಕೂಡ~~ ಭಕ್ತಿಜ್ಞಾನವನ್ನು ಕಲಿಯದ ಮನುಷ್ಯ ಜೀವನದಿಂದ ಸಾರ್ಥಕವಾದದ್ದೇನು ಎಂದು ಇಲ್ಲಿ ಹೇಳಲಾಗುತ್ತದೆ.

"ವಮ್ಪುವಿಲುಮ್ ಕೋಳದ್ವ ಪ್ಪೊರುಟ್ಟ ಮಾಲ್ ವಿತ್ತೈಯೇಲುಮಾ ಅಡರತ್ತ ...." ಭಗವಂತನು ಶ್ರೀಕೃಷ್ಣನಾಗಿ ಅವತರಿಸಿದಾಗ ನಡೆದ ಒಂದು ಅದ್ಭುತ ಪ್ರಸಂಗ ಇದು. ಗೋವಳರ ರಾಜನಾದ 'ಕುಂಭ'ನಿಗೆ ಒಬ್ಬ ಸುಂದರಿಯಾದ ಮಗಳು. ಅವಳು ನೀಳೆ ಅಥವಾ ನಪ್ಪಿನ್ನೈ. ಅವಳನ್ನು ಮದುವೆಯಾಗ ಬಯಸುವವನು, ತಾನು ಸಾಕಿ ಕೊಬ್ಬಿದ ಏಳು ಗೂಳಿಗಳನ್ನು ಒಬ್ಬನೇ ಎದುರಿಸಿ ಕಟ್ಟಿಹಾಕ ಬೇಕೆಂಬುದು ಆ ಕುಂಭನಾ ಪಣ. ಶ್ರೀಕೃಷ್ಣನು ಒಂಟಿಯಾಗಿ ಅವುಗಳನ್ನೆದುರಿಸಿ, ಅದಮಿಸಿ, ಕಟ್ಟಿಹಾಕಿ, ನಪ್ಪಿನ್ನೈಯನ್ನು ವರಿಸಿದನು.

Garani Srinivasan

ಆಳ್ವಾರರು ಹೇಳುತ್ತಾರೆ! ಭಗವಂತನು ಪರಮ ಶಕ್ತನು. ಅವನು ಶ್ರೀಕೃಷ್ಣನಾಗಿ ಅವತರಿಸಿದಾಗ, ಕೆಟ್ಟ ಬುದ್ಧಿ[illegible]ಗಳನ್ನು ಒಬ್ಬನೇ [illegible] ಹಾಕಿದನು. ಅವನು ಅತ್ಯಂತ ಸುಂದರ. ನಿತ್ಯಸೂರಿಗಳಿಗೆ ಒಡೆಯನಾದ ಶ್ರೀಪತಿಯು ಅವನೇ. ಅವನ ಕೀರ್ತಿಗೆ ಮಿತಿಯಿಲ್ಲ. ಅವುಗಳನ್ನೆಲ್ಲಾ ನೆನೆಯುತ್ತಾ, ಶುದ್ಧ ಮನಸ್ಸಿನಿಂದ ಭಕ್ತಿ ಮಾಡದ ಜನರು ಸಾಧುಸಜ್ಜನರ ನಡುವೆ ಇದ್ದಾಗಲೂ, ಅವರದು ವ್ಯರ್ಥ ಜೀವನವೇ!

5. சாது சனத்தை நலியுங்
கஞ்சனைச் சாதிப்பதற்கு,
ஆதியஞ் சோதியுருவை
அங்குவைத்திங்குப்பிறந்த,
வேதமுதல்வனைப் பாடி
வீதிகடோறுந் துள்ளாதார்,
ஓதியுணர்ந்தவர் முன்னா
என் சவிப்பார் மனிசரே.

ಶಾದು ಶನತ್ತೈ ನಲಿಯುಮ್ ಕಂಜನ್ನೈಚ್ ಚಾದಿಪ್ಪದರ್ಕು,
ಆದಿಯಂ ಜೋದಿಯುರುವೈ ಅಂಗುವೈತ್ತಿಂಗು ಪ್ಪಿರಂದ,
ವೇದಮುದಲ್ವನ್ನೈ ಪ್ಪಾಡಿ ವೀದಿಗಡೋಱುಂ ತುಳ್ಳಾದಾರ್,
ಓದಿಯುಣರ್ಂದವರ್ ಮುನ್ನಾ ಎನ್ ಚವಿಪ್ಪಾರ್ ಮನಿಶರೇ

ಶಾದು ಶನತ್ತೈ சாது சனத்தை = ಸಾಧುಜನರನ್ನು (ಸಾತ್ವಿಕ ಸ್ವಭಾವದವರನ್ನು), ನಲಿಯುಮ್ நலியும் = ಹಿಂಸಿಸುವ, ಕಂಜನ್ನೈ கஞ்சனை = ಕಂಸನನ್ನು, ಶಾದಿಪ್ಪದರ್ಕು சாதிப்பதற்கு = ಶಿಕ್ಷಿಸುವುದಕ್ಕಾಗಿ, ಆದಿ ஆதி = ಶಾಶ್ವತವಾದ (ನಿತ್ಯವಾದ), ಅಮ್ அம் = ಬಹಳ ಸುಂದರವಾದ, ಜೋದಿ ಉರುವೈ சோதி உருவை = ಜ್ಯೋತಿಸ್ವರೂಪವನ್ನು, ಅಂಗು ವೈತ್ತು அங்கு வைத்து = ಅಲ್ಲಿರುವ ನಾಡಿಯಲ್ಲೇ (ಪರಮಪದದಲ್ಲಿರುವ ನಾಡಿಯಲ್ಲೇ), ಇಂಗು இங்கு = ಇಲ್ಲಿ (ಭೂಲೋಕದಲ್ಲಿ), ಪಿಱನ್ದ பிறந்த = ಅವತರಿಸಿದ, ವೇದಮ್ வேதம் = ವೇದಗಳ, ಮುದಲ್ವನ್ನೈ முதல்வனை = ಒಡೆಯನನ್ನು (ವೇದಪ್ರತಿಪಾದ್ಯನನ್ನು), ಪಾಡಿ பாடி = ಕೀರ್ತಿಸುತ್ತಾ, ವೀದಿಗಳ್ (ಶೇರಿಯುಮ್) வீதிகள் தோறும் = ಬೀದಿಗಳಲ್ಲೆಲ್ಲಾ, ತುಳ್ಳಾದಾರ್ துள்ளாதார் = ನಲಿದಾಡದವರು (ಉತ್ಸಾಹದಿಂದ ಕುಣಿದಾಡದವರು), ಓದಿ ஓதி = ಶಾಸ್ತ್ರಗಳನ್ನು ಅಭ್ಯಾಸಮಾಡಿ, ಉಣರ್ಂದವರ್ ಮುನ್ನಾ உணர்ந்தவர் முன்னா = ಅರಿತುಕೊಂಡವರ ಮುಂದೆ ಹಾಗೆ, ([illegible]), ಎನ್ ಶವಿಪ್ಪಾರ್ என் சவிப்பார்

ನ ಏನನ್ನು ಜಪಿಸುತ್ತಾರೆ? (ಯಾವ ಜಪ ಮಾಡುತ್ತಾರೆ?), ಮನಿಶರೇ ಬಣ್ಣಿ ರೆ: ಅವರು ಮನುಷ್ಯರೇ?

ನಾಸ್ತಿಕ ಸ್ವಭಾವದವರನ್ನು ಹಿಂಬಾಲಿಸುವ ತಂದೆಯನ್ನು ಶಿಕ್ಷಿಸುವುದಕ್ಕಾಗಿ ಶಾಶ್ವತವೂ (ನಿತ್ಯವೂ) ಬಯ್ಯಬೇಕೆಂದರವೂ ಆದ ಜ್ಯೋತಿಷ್ಟಾನವನ್ನು ಪರಮಪದದಲ್ಲಿಯ ನಾನೆಯೇ ಭೂಲೋಕಕ್ಕೆ ತಂದು ಅವತರಿಸಿದ ವೇದಗಳ ಒಡೆಯನನ್ನು (ವೇದಪ್ರತಿಪಾದ್ಯನನ್ನು) ಕೀರ್ತಿಸುತ್ತಾ ಬಾಳಿಗಳೆಲ್ಲಾ ಸಲದಾಡದವರು (ಉತ್ಸಾಹದಿಂದ ಉನ್ಮತ್ತರಾಗಿ ಕುಣಿದಾಡದವರು) ಶಾಸ್ತ್ರಾದಿಗಳನ್ನು ಅಭ್ಯಾಸ ಮಾಡಿ ಜ್ಞಾನಿಗಳಾಗಿದ್ದರೂ ಸಹ ಯಾವ ಜಪ (5) ಮಾಡುತ್ತಾರೆ? ಅವರು ಮನುಷ್ಯರೇ?

ಸಾಧು ಸಜ್ಜನರ ಸಹವಾಸದಿಂದ ಏನನ್ನು ಕಲಿಯುವವರ ಜನ್ಮ ವ್ಯರ್ಥವಾದದ್ದು ಎಂದು ಹೇಳಿದ್ದು ಹಿಂದಿನ ಶ್ಲೋಕ. ಅಂಥ ನಾಸ್ತಿಕ ಜನರನ್ನು ಹಿಂಬಾಲಿಸುವವರ ಜೀವನವಾಗಲಿ, ತಮ್ಮ ಜ್ಞಾನಗಳಿಂದರ ಜೀವನವಾಗಲಿ ಹೇಗೆ ವ್ಯರ್ಥ ಸೂಚಿಸುವುದು ಈ ಶ್ಲೋಕ.

ನಾಸ್ತಿಕರ ಸಂಗದಿಂದ ಕಲಿಯುವ ಜನರನ್ನು ಕಂಡರೆ ಭಗವಂತನಿಗೆ ಯಾವ ಅಂತಃಕರಣವೂ ಇಲ್ಲ. ಅವರ ಮೇಲೆ ಕೋಪವೂ ಇಲ್ಲ. ಆದ್ದರಿಂದಲೇ ಅವರನ್ನು ತಾನೇ, ವ್ಯರ್ಥ ಜೀವನವನ್ನು ಕಳೆಯುವುದಕ್ಕೆ ಅವಕಾಶ ನೀಡುತ್ತಾನೆ. ಅವರು ಇಂಥ ಅನೇಕ ಜನ್ಮಗಳನ್ನೆತ್ತಿ ತಮ್ಮ ಉದ್ಧಾರ ಮಾರ್ಗವನ್ನು ತಾವೇ ಕಂಡುಕೊಳ್ಳುವಂತಾಗಲಿ ಎಂದು ಅವರನ್ನು ಬಿಟ್ಟುಬಿಡುತ್ತಾನೆ. ಆದರೆ, ನಾಸ್ತಿಕ ಜನರನ್ನು ಹಿಂಬಾಲಿಸುವ ಆಸುರೀ ಪ್ರವೃತ್ತಿಯುಳ್ಳ ಶತ್ರುಗಳ ವಿಷಯದಲ್ಲಿ ಭಗವಂತನಿಗೆ ಕೋಪ. ಅವರನ್ನು ಶಿಕ್ಷಿಸುವುದಕ್ಕೆ ಸ್ವಾಮಿಯು ಮಾಡಿದ ಕೆಲಸ.

'ಸಾಧು ಶಸ್ತ್ರೈರಲಯುಮಾ ಕಂಜವೈ ಶಾಂತಿಪ್ಪದಯಾಂ....' — ಭಗವಂತನು ಶ್ರೀಕೃಷ್ಣನಾಗಿ ಅವತರಿಸಿದ್ದೇಕೆ ಎಂಬುದನ್ನು ಇಲ್ಲಿ ಸಾರು ದಿಲ್ಲಿಗೆ. ಕಂಸಾಸುರನು ಕಡುದುಷ್ಟ. ತನ್ನ ತಂದೆಯಾದ ಉಗ್ರಸೇನನನ್ನೇ ಸೆರೆಯಲ್ಲಿಟ್ಟು ತಾನು ರಾಜನಾದ. ತನ್ನ ತಂಗಿಯಾದ ದೇವಕಿಯನ್ನು ವಸುದೇವನಿಗೆ ಕೊಟ್ಟು ಅದ್ದೂರಿಯಾಗಿ ಮದುವೆ ಮಾಡಿದನಾದರೂ, ಅವಳ ಎಂಟನೆಯ ಗರ್ಭದಲ್ಲಿ ಹುಟ್ಟುವವನು ಅವನಿಗೆ ಮೃತ್ಯುವಾಗುವನೆಂಬುದನ್ನು ಅಶರೀರವಾಣಿಯಿಂದ ಕೇಳಿದ ಕೂಡಲೇ, ಅವರಿಬ್ಬರನ್ನೂ ಸೆರೆಯಲ್ಲಿಟ್ಟನು. ಅಲ್ಲದೆ, ಅವರಿಗೆ ಹುಟ್ಟಿದ ಒಂದೊಂದು ಶಿಶುವನ್ನು ಆಗಲೇ ಕೊಂದು ಹಾಕುತ್ತಾ ಬಂದನು. ದೇವಕಿಯ ಎಂಟನೆಯ ಗರ್ಭವೂ ಬಂತು. ಆಗ

ಮನೆಯಲ್ಲೇ ಭಗವಂತನು ಕಾಣಿಸಿದ ಮೂರ್ತಿಯಾಗಿ ದೇವಕಿಯ ಮಗನಾಗಿ ಅವತರಿಸಿದನು. ಹುಟ್ಟಿದಾಗ ಪರಮಪದದಲ್ಲಿ ಕಾಣಿಸಿದ್ದಂತೆಯೇ ಎಂದರೆ, ಚತುರ್ಭುಜನಾಗಿ, ಕಿರೀಟ ಮಕರಕುಂಡಲಧಾರಿಯಾಗಿ, ಶಂಖಚಕ್ರಗದಾಪದ್ಮಧಾರಿಯಾಗಿ, ಪೀತಾಂಬರ ಧಾರಿಯಾಗಿ, ಪರಮ ಶೋಭಾಯಮಾನನಾಗಿ, ದಿವ್ಯ ಮಂಗಳ ವಿಗ್ರಹನಾಗಿ; ಆಶ್ಚರ್ಯಕರನಾಗಿ ದೇವಕೀ ವಸುದೇವರಿಗೆ ದರ್ಶನ ಕೊಟ್ಟನು. ಮತ್ತು, ಮುಂದೆ, ಹೇಗೆ ನಡೆಯಬೇಕೆಂಬುದನ್ನು ತಿಳಿಸಿ, ಸಾಮಾನ್ಯ ಶಿಶುವಾದನು. ಆ ಬಳಿಕ, ನಂದಗೋಕುಲದಲ್ಲಿ ಬಾಲಕೃಷ್ಣನಾಗಿ ಬೆಳೆಯುತ್ತಾ ಬಂದು, ಕಂಸನ ಎಲ್ಲಾ ಬಗೆಯ ವಂಚನೆಗಳಿಗೂ ಅವಕಾಶವಿಲ್ಲದಂತೆ, ಅವನು ಕಳುಹಿಸಿದ ಎಲ್ಲ ಶತ್ರುಗಳನ್ನು ನಾಶಗೊಳಿಸಿ, ಕಡೆಗೆ ಕಂಸನನ್ನು ಸದೆಬಡಿದನು. ಇದು ಭಾಗವತ ಕಥೆ.

" ಏಡಿದಹ ಹೋಯುನ್ನುಳ್ಳದಾರ್..... " — ಭಗವಂತನ ನಾಮ ಸ್ವಭಾವಗಳನ್ನು ಕೀರ್ತಿಸುತ್ತ, ಆ ಅನುಭವದಲ್ಲಿಯೇ ತನ್ಮಯರಾಗಿ, ಮೈಮರೆತು ಕುಣಿಕುಣಿದಾಡುತ್ತ ಬೀದಿಬೀದಿಗಳಲ್ಲಾ ಅಲೆದಾಡುವವರು ಭಕ್ತಿಭಾವದಿಂದ ತುಂಬಿ ತುಳುಕುವ ಜನ.

" ಓದಿಯುಣಾರ್ಂದವರ್...." ವೇದ ಮತ್ತು ಶಾಸ್ತ್ರಗಳನ್ನು ಸಂಪೂರ್ಣವಾಗಿ ಅಭ್ಯಾಸ ಮಾಡಿ, ಭಗವದ್ವಿಷಯ ಜ್ಞಾನವನ್ನು ಪಡೆದುಕೊಂಡವರು.

ಆಳ್ವಾರರು ಹೇಳುತ್ತಾರೆ: ದುಷ್ಟರನ್ನು ಶಿಕ್ಷಿಸುವವನೂ, ಶಿಷ್ಟರನ್ನು ರಕ್ಷಿಸುವವನೂ, ವೇದ ಪ್ರತಿಪಾದ್ಯನೂ, ನಿತ್ಯನೂ (ಶಾಶ್ವತನು), ಜ್ಯೋತಿಸ್ವರೂಪನೂ, ದಿವ್ಯಸುಂದರನೂ ಆದ ಭಗವಂತನನ್ನು ಕುರಿತು ವೇದಶಾಸ್ತ್ರಗಳಲ್ಲಿ ವಿವರಿಸುವಂತೆಯೇ ಅರಿತುಕೊಂಡು ಉತ್ತಮಜ್ಞಾನಿಗಳಾಗಿದ್ದರೂ, ಭಕ್ತಿಪರವಶರಾಗಿ ಭಗವಂತನ ನಾಮಸ್ವಭಾವಗಳನ್ನು ಅದ್ಭುತಕರ ಅವನ ಲೀಲೆಗಳನ್ನು ಕೀರ್ತಿಸುತ್ತಾ ಬೀದಿಬೀದಿಗಳಲ್ಲಿ ಮೈಮರೆತು ಕುಣಿಯುತ್ತಾ ಅಲೆದಾಡುತ್ತ ಕಾಲಕಳೆಯುವ ಜನರ ಜ್ಞಾನವೆಲ್ಲವೂ ವ್ಯರ್ಥವೇ. ಅವರ ಜಪತಪಗಳು, ಸಾಧನೆಗಳು, ಜ್ಞಾನಧ್ಯಾನಗಳು ಫಲವೇ ಇಲ್ಲ.

ಜ್ಞಾನಕ್ಕಿಂತಲೂ ಭಕ್ತಿ ಮೇಲು ಎಂದು ಆಳ್ವಾರರು ಹೇಳುತ್ತಿದ್ದಾರೆಂಬುದು ತಿಳಿಯುತ್ತದೆ.

6. மணிசரும் மற்றும்முற்றுமாய்
மாயப்பிறவி பிறந்த,
தனியன் பிறப்பிலி தன்னைத்
தடங்கடல் சேர்ந்த பிரானை,
கனியைக் கரும்பின் சாற்றைக்
கட்டியைத் தேனை யமுதை,
முனிவின்றி யேத்திக் குனிப்பார்
முழுதுணர் நீர்மையினாரே.

ಮನಿಶರುಮ್ ಮಟ್ರುಮ್ ಮುಟ್ರುಮಾಯ್ ಮಾಯಪ್ಪಿರವಿ ಪಿರನ್ದ,
ತನಿಯನ್ ಪಿರಪ್ಪಿಲಿ ತನ್ನೈತ್ತಡಙ್ಗಡಲ್ ಶೇರ್ನ್ದ ಪಿರಾನೈ,
ಕನಿಯೈಕ್ಕರುಮ್ಬಿನ್ ಶಾಟ್ರೈಕ್ಕಟ್ಟಿಯೈತ್ತೇನೈಯಮುದೈ,
ಮುನಿವಿನ್ರಿ ಯೇತ್ತಿಕ್ಕುನಿಪ್ಪಾರ್ ಮುೞುದುಣರ್ ನೀರ್ಮೈಯಿನಾರೇ.

ಮನಿಶರುಮ್ மணிசரும் = ಮನುಷ್ಯರೂ, ಮಟ್ರುಮ್ மற்றும் = ಮತ್ತು, ಮುಟ್ರುಮ್ ಆಯ್ முற்றும் ஆய் = ಇತರ ಎಲ್ಲಾ ವಸ್ತುಗಳೂ ಆಗಿ, ಮಾಯಮ್ ಪಿರವಿ மாயம் பிறவி = ಆಶ್ಚರ್ಯಕರವಾದ ಜನ್ಮಗಳಲ್ಲಿ, ಪಿರನ್ದ பிறந்த = ಜನಿಸಿದ, ತನಿಯನ್ தனியன் = ಜೋಡಿಯಿಲ್ಲದವನೂ, ಪಿರಪ್ಪು ಇಲಿ ತನ್ನೈ பிறப்பு இலி தன்னை = ಹುಟ್ಟುವಿಕೆಯೆಂಬುದೇ ಇಲ್ಲದವನಾ, ತಡಮ್ தடம் = ವಿಸ್ತಾರವಾದ, ಕಡಲ್ கடல் = ಕಡಲನ್ನು, ಶೇರ್ನ್ದ ಪಿರಾನೈ சேர்ந்த பிரானை = ಸೇರಿದ ಸ್ವಾಮಿಯನ್ನು, ಕನಿಯೈ கனியை = ಮಧುರವಾದ ಹಣ್ಣನ್ನು (ಹಣ್ಣಿನಂತಿರುವವನನ್ನು), ಕರುಮ್ಬಿನ್ ಶಾಟ್ರೈ கரும்பின் சாற்றை = ಕಬ್ಬಿನ ಸಾರವನ್ನು (ಕಬ್ಬಿನ ಹಾಲನ್ನು), ಕಟ್ಟಿಯೈ கட்டியை = ಕಲ್ಲುಸಕ್ಕರೆಯನ್ನು, ತೇನೈ தேனை = ಜೇನುತುಪ್ಪವನ್ನು (ಮಧುವನ್ನು), ಅಮುದೈ அமுதை = ಅಮೃತವನ್ನು, ಮುನಿವು ಇನ್ರಿ முனிவு இன்றி = ಪ್ರಯತ್ನವಿಲ್ಲದೆಯೇ (ಎಡೆಬಿಡದಂತೆ), ಏತ್ತಿ ஏத்தி = ಸ್ತುತಿಸಿ, ಕುನಿಪ್ಪಾರ್ குனிப்பார் = ಆಡಿ ಕುಣಿಯುವವರು (ಕುಣಿದಾಡುವವರು), ಮುೞುದು முழுது = ಪೂರ್ಣವಾದ, ಉಣರ್ உணர் = ತಿಳುವಳಿಕೆಯು, ನೀರ್ಮೈಯಿನಾರೇ நீர்மையினாரே = ಸ್ವಭಾವದವರೇ ಆಗುತ್ತಾರೆ.

ಮನುಷ್ಯರೂ ಮತ್ತು ಇತರ ಎಲ್ಲಾ ವಸ್ತುಗಳೂ ಆಗಿ, ಆಶ್ಚರ್ಯಕರವಾದ ಜನ್ಮಗಳಲ್ಲಿ ಜನಿಸಿದ ಜೋಡಿಯಿಲ್ಲದವನೂ, ಹುಟ್ಟುವಿಕೆಯೆಂಬುದೇ ಇಲ್ಲದವನಾದ ವಿಸ್ತಾರವಾದ ಕಡಲನ್ನು ಸೇರಿದ ಸ್ವಾಮಿಯನ್ನು, ಮಧುರವಾದ ಹಣ್ಣನ್ನು, ಕಬ್ಬಿನ ಹಾಲನ್ನು, ಕಲ್ಲುಸಕ್ಕರೆಯನ್ನು, ಜೇನುತುಪ್ಪವನ್ನು, ಅಮೃತವನ್ನು,

ಅಪ್ರಯತ್ನವಾಗಿಯೇ (ಎಡೆಬಿಡದಂತೆ), ನಿತ್ಯ, ಅಡ್ಡಬೀಳುವವರು, (ಹೊರ ದಾಟುವವರು) ಪೂರ್ಣವಾದ ತಿಳುವಳಿಕೆಯನ್ನುಳ್ಳ ಸ್ವಭಾವದವರೇ ಆಗಿರು (6) ತ್ತಾರೆ.

ಇಂದಿನ ಪಾಠದ ವಿಷಯವನ್ನು ಇಲ್ಲಿಯೂ ಮುಂದುವರಿಸಲಾಗುತ್ತದೆ. ಭಗವಂತನನ್ನು ಎಡೆಬಿಡದಂತೆ ಚಿಂತಿಸುತ್ತ, ಸ್ತುತಿಸುತ್ತ ಇರುವ ಭಕ್ತರಾದ ಪೂರ್ಣಜ್ಞಾನಿಗಳಿಗೆ ನಮಃ ಎನ್ನಲಾಗುತ್ತದೆ.

ಸಾಮಾನ್ಯವಾಗಿ ಅರಿತುಕೊಳ್ಳಲಾರದ ಮಾತುಗಳಿಂದ ಎಂದರೆ ಜ್ಞಾನಿಗಳಿಗೆ ಮಾತ್ರವೇ ಅರ್ಥವಾಗುವಂಥ ಮಾತುಗಳಿಂದ ಭಗವಂತನನ್ನು ಹೊಗಳುವುದರಿಂದ ಪಡೆಯುವ ಸವಿ ಕಡಿಮೆಯೇ. ಬಳಕೆಯ ವಸ್ತುಗಳ ಹೆಸರಿನಿಂದ ಭಗವಂತನನ್ನು ಸ್ತುತಿಸುವುದರಿಂದ, ಎಂದರೆ, ಅಂಥ ವಸ್ತುಗಳಿಗೆ ಭಗವಂತನನ್ನು ಹೋಲಿಸಿ ಹೇಳುತ್ತಿರುವುದರಿಂದ, ಭಗವಂತನನ್ನು ಸುಲಭವಾಗಿ ಅರಿತುಕೊಂಡು ಆನಂದಿಸಬಹುದು ಎಂದು ಹೇಳುವುದು ಇಲ್ಲಿನ ವಿವರಣೆಯ ವೈಶಿಷ್ಟ್ಯ.

“ಮುನಿಶರಮಾ . . . . ಪಿಬನ್ತ” – ದುಷ್ಟನಿಗ್ರಹಕ್ಕಾಗಿ, ಸಜ್ಜನ ಪಾಲನೆಗಾಗಿ, ಧರ್ಮಸಂರಕ್ಷಣೆಗಾಗಿ ಭಗವಂತನು ನಾನಾ ಅವತಾರಗಳನ್ನೆತ್ತಿದನಷ್ಟೆ. ಅವುಗಳನ್ನು ಇಲ್ಲಿ ಸಂಗ್ರಹಿಸಿ ಹೇಳಲಾಗಿದೆ. ವಾಮನ, ರಾಮ, ಕೃಷ್ಣ ಅವತಾರಗಳು ಮಾನವರೂಪಗಳು. ಮತ್ಸ್ಯ, ಕೂರ್ಮ, ವರಾಹ ಅವತಾರಗಳು ಕೆಳಪ್ರಾಣಿಗಳ ರೂಪಗಳು. ನರಸಿಂಹ ಹಯಗ್ರೀವ ಅವತಾರಗಳು ವಿಚಿತ್ರವಾದ 'ನರ-ಮೃಗ' ರೂಪಗಳು. ಹಂಸ ಅವತಾರವು ವಿಸ್ಮಯವಾದದ್ದು. ತ್ರಿವಿಕ್ರಮ ಅವತಾರವಂತೂ ಮಹಾದ್ಭುತವಾದ ವಿರಾಟ್ ಸ್ವರೂಪವೇ. ಹೀಗೆ ಭಗವಂತನ ನಾನಾ ಅವತಾರಗಳು ಅವುಗಳ ನಿಮಿತ್ತಗಳಿಗೆ ಅನುಗುಣವಾಗಿ ಬಂದವು.

ಸರ್ವವ್ಯಾಪಕತ್ವ, ಸರ್ವಜ್ಞತ್ವ, ಸರ್ವಶಕ್ತತ್ವ, ನಿರ್ದೋಷತ್ವ, ಆಕರ್ಷಕತ್ವ, ಸೌಂದರ್ಯ, ಕಾರುಣ್ಯ ಮುಂತಾದ ಗುಣಗಳಿಂದ ಶೋಭಿಸುವ ಭಗವಂತನು ಎಲ್ಲ ರೀತಿಯಲ್ಲೂ ಸಾಟಿಯಿಲ್ಲದವನೇ. ಅವನಿಗೆ ಹುಟ್ಟು ಎಂಬುದಿಲ್ಲ. ಅವನು ನಿತ್ಯ, ಶಾಶ್ವತ. ಇಡೀ ಸೃಷ್ಟಿಗೇ ಕಾರಣ. ಎಲ್ಲದರಲ್ಲೂ ನಿರ್ಲಿಪ್ತನಾಗಿ ಸರ್ವದಾ ಯೋಗನಿದ್ರೆಯಲ್ಲಿರುವವನು – ಹೀಗೆ ಭಗವಂತನನ್ನು ವರ್ಣಿಸಿ ಹೇಳುವ ಮಾತುಗಳೆಲ್ಲವೂ ನಮಗೆ ಅರಿತುಕೊಳ್ಳಲು ಆಗದಿದ್ದರೆ ಅವುಗಳ ಗೊಡವೆಗೆ ಹೋಗುವುದು ಬೇಡ. ಎಲ್ಲರಿಗೂ ಸುಲಭವಾಗಿ, ಆಸೆಯಿಂದ, ಸವಿದು, ಆನಂದಿಸುವಂಥ, ಎಲ್ಲರೂ

ತಿಳಿದಿರುವ 'ಹಣ್ಣು', 'ಕಬ್ಬಿನಹಾಲು', 'ಬೆಲ್ಲ', 'ಕಲ್ಲುಸಕ್ಕರೆ', 'ಜೇನುತುಪ್ಪ' ಮುಂತಾದ ಮಾತುಗಳಿಂದಲೇ ಭಗವಂತನನ್ನು ವರ್ಣಿಸಿ, ಆ ಮಾಲನ್, ಆನಂದಪಡುವರು — ಎನ್ನಲಾಗುತ್ತದೆ.

'ಅಮೃತತ್ವ' ವನ್ನು, ಎಂದರೆ, 'ಸಾವಿಲ್ಲದ ಸ್ಥಿತಿ'ಯನ್ನು ಉಂಟುಮಾಡುವ ದಿವ್ಯ ವಸ್ತುವೇ 'ಅಮೃತ'. ಭಗವಂತನನ್ನು ದ್ರಾಕ್ಷಾ ಆಸ್ವಾದಿಸುವುದರಂತೆ ಬರುವ ಫಲವೇ ಅಮೃತತ್ವ (ಅಮರತ್ವ).

ಆಳ್ವಾರರು ಹೇಳುತ್ತಾರೆ: ಭಗವಂತನು ಲೋಕರಕ್ಷಣೆಗಾಗಿಯೇ ಆಶ್ಚರ್ಯಕರವಾದ ನಾನಾ ಅವತಾರಗಳನ್ನು ಎತ್ತುತ್ತಾನೆ. ಆದರೆ ಅವನಿಗೆ ಹುಟ್ಟು ಎಂಬುದೇ ಇಲ್ಲ. ಅವನು ಹುಟ್ಟಿದಲ್ಲಿ ಪವಡಿಸಿಯೂ ನಿದ್ದೆಯಲ್ಲಿರತಕ್ಕವನು. ಅವನಿಗೆ ಸಾವಿಯೂ ಇಲ್ಲ. ಅವನು ಹಣ್ಣಿನಂತೆ, ಕಬ್ಬಿನಹಾಲಿನಂತೆ, ಕಲ್ಲುಸಕ್ಕರೆಯಂತೆ, ಜೇನುತುಪ್ಪದಂತೆ ಬಲು ಸಿಹಿ. ಸಾವಿಲ್ಲದ ಸ್ಥಿತಿಯನ್ನು ಕೊಡುವ ಅಮೃತವೇ ಅವನು. ಅವನನ್ನು ಒಳಗೆ ಅನುಭವಿಸಿಂದು, ಎಡೆಬಿಡದಂತೆ, ಅಪ್ರಯತ್ನವಾಗಿಯೇ, ಸ್ತುತಿಸುತ್ತಾ, ಭಕ್ತಿಯಿಂದ ಮೈಮರೆತು ಕುಣಿಯುತ್ತಾ ನಮಸ್ಕರಿಸುತ್ತಾ ಆನಂದಿಸುವವರು ಬ್ರಹ್ಮಜ್ಞಾನಿಗಳಿಗೆ ಸಮಾನರು.

7. நீர்மையில் நூற்றுவர் வீய
ஐவர்க்கருள் செய்து நின்று,
பார்மல்கு சேனையவித்த
பரஞ்சுடரை நினைந்தாடி,
நீர்மல்கு கண்ணினராகி
நெஞ்சம் குழைந்து நையாதே,
ஊன்மல்கி மோடு பருப்பார்
உத்தமர்கட்கென் செய்வாரே?

ನೀರ್ಮೈಯಿಲ್ ನೂಟ್ರುವರ್ ವೀಯ ಐವರ್ಕ್ಕರುಳ್ ಶೆಯ್ದು ನಿನ್ರು,
ಪಾರ್ ಮಲ್ಗು ಶೇನೈಯವಿತ್ತ ಪರಂಜುಡರೈ ನಿನೈಂದಾಡಿ,
ನೀರ್ ಮಲ್ಗು ಕಣ್ಣಿನರಾಗಿ ನೆಂಜಮ್ ಕುೞೈಂದು ನೈಯಾದೇ,
ಊನ್ ಮಲ್ಗಿ ಮೋಡು ಪರುಪ್ಪಾರ್ ಉತ್ತಮರ್ಕಟ್ಕೆನ್ ಶೆಯ್ವಾರೇ?

ನೀರ್ಮೈ ಇಲ್ நீர்மையில் = ಕಾರುಣ್ಯವಿಲ್ಲದ (ಸತ್ಸ್ವಭಾವವಿಲ್ಲದ), ನೂಟ್ರುವರ್ நூற்றுவர் = ನೂರ್ವರು, ವೀಯ வீய = ನಾಶವಾಗುವಂತೆ, ಐವರ್ಕ್ಕು ஐவர்க்கு = ಐವರಿಗೆ, ಅರುಳ್ ಶೆಯ್ದು அருள் செய்து = ಕೃಪೆಮಾಡಿ, ನಿನ್ರು நின்று = (ಅವರಿಗೆ ಸಹಾಯಕನಾಗಿ) ನಿಂತು, ಪಾರ್ பார் = ಭೂಮಿಯು [illegible] ಮಲ್ಗು மல்கு = ತುಂಬಿರುವ, ಶೇನೈ சேனை = ಸೇನೆಗಳನ್ನು

ಅವಿತ್ತ ಅಯಿಕ್ಕನ್ನು = ನಾಶವಿಲ್ಲದ, ಪರಮ ಸುಡರ್ಕ್ಕೆ பரஞ்சுடரை = ಪರಂಜ್ಯೋತಿ ಸ್ವರೂಪಿಯನ್ನು, ನಿನ್ನೆದು நினைந்து = ನೆನೆದು (ಚಿಂತಿಸಿ), ಆಟಿ ஆடி = ಕುಣಿದಾಡಿ, ನೀರ್ ಮಲ್ಕು நீர் மல்க = ನೀರು ತುಂಬಿದ, ಕಣ್ಣಿನರ್ ಆಗಿ [illegible] ನಿನ್ಣನ் = ಕಣ್ಣುಳ್ಳವರಾಗಿ, ನೆಂಜಮ் ನಿನೈ = ಮನಸ್ಸು ಕರಗಿ, ಕಲಕಿಹೋಗಿ), ನೈಯಾದೇ ಉಡಲ್ = ದೇಹವನ್ನು, ಕುಲುಕ್ಕಿನು = ದ್ರವಿಸಿ (ಕರಗಿ, ಕಲಕಿಹೋಗಿ), ನೈಯಾದೇ ಊನ್ ಮಲ್ಕಿ ಉಡಲ್ = ದೇಹವನ್ನು ತುಂಬಿಸಿ, ಪೆರುಕಿಪಿದದೆ, ಉನ್ ಮಲ್ಗಿ ஊன் மல்கி = ದೇಹವನ್ನು ತುಂಬಿಸಿ, ಪಾಡುವಾರ್ பாடுவார் = ಹೇಳುವವರು, ಮೋದು ಮೋಡು = ಹೊಟ್ಟೆಯನ್ನು, ವಿಡುಪ್ಪಾರ್ ಪಡುಪ್ಪಾರ್ = ಹೇಳುವವರು, ಮೋಡು மோடு = ಹೊಟ್ಟೆಯನ್ನು, ಎನ್ ಕಣ್ = ಏನನ್ನು, ಉತ್ತಮರ್ಕ್ಕು ಉತ್ತಮರ್ಕಳ್ = ಉತ್ತಮರು, ಎನ್ ಕಣ್ = ಏನನ್ನು, ಉತ್ತಮರ್ಕಳ್ ಉತ್ತಮರ್ ಕಟ್ಕು = ಉತ್ತಮರು,
ಶೆಯ್ವಾರ್ ಶೆಯ್ವಾರ್ = ಮಾಡಬಲ್ಲರು?

ಕಾರುಣ್ಯವಿಲ್ಲದ (ದಡ್ಡತನವಿಲ್ಲದ) ಸೂರ್ಯನು ನಾಶವಾದಂತೆ (ವಿವರ) ಕೃಪೆ ಮಾಡಿ, (ಅವರ ಬೆಂಬಲದಾಗಿ) ನಿಂತು, ಭಗವಂತನ ಮೇಲೆ ತುಂಬಿರುವ (ಅಪಾರವಾದ) ಜ್ಞಾನಿಗಳನ್ನು ನಾಶವಿಲ್ಲದ ಪರಂಜ್ಯೋತಿ ಸ್ವರೂಪಿಯನ್ನು ಚಿಂತಿಸಿ, ಕುಣಿದಾಡಿ, ನೀರು ತುಂಬಿದ ಕಣ್ಣುಳ್ಳವರಾಗಿ, ಮನಸ್ಸು ಕರಗಿ (ಕಲಕಿ ದವರಾಗಿ), ಪೆರುಕಿಪಿದದೆ, ದೇಹವನ್ನು ತುಂಬಿಸಿ, ಹೊಟ್ಟೆಯನ್ನು ಹೇಳುವವರು (7)
ಉತ್ತಮರಿಗೆ ಏನನ್ನು ಮಾಡಬಲ್ಲರು?

ಭಗವದ್ಭಕ್ತಿಯುಳ್ಳವರು ಎಂಬುದನ್ನು ಗುರುತಿಸುವ ಬಗೆಯನ್ನು. ಭಗವದ್ಭಕ್ತಿಯುಳ್ಳವರು ಎಂಬುದನ್ನು ಸಾಮಾನ್ಯ ಜನರ ಸ್ವಭಾವವನ್ನು (ಭಕ್ತನ ಲಕ್ಷಣಗಳನ್ನು), ಇದಲ್ಲದ ಸಾಮಾನ್ಯ ಜನರ ಸ್ವಭಾವವನ್ನು ಇಲ್ಲಿ ಸೂಚಿಸಲಾಗಿದೆ. ಅವರಿಬ್ಬರ ನಡುವೆ ಹೊಂದಿರುವುದು ಬಲ್ಲವೆಂಬುದನ್ನು ಇಲ್ಲಿ ಸೂಚಿಸಲಾಗಿದೆ.

ಸ್ವರ್ಣಸಮುದ್ರನಾದ ಭಗವಂತನನ್ನು ಎದೆಬಡಿದಂತೆ ಚಿಂತಿಸುತ್ತಾ, ಆನಂದದ ಕಣ್ಣೀರನ್ನು ಸುರಿಸುತ್ತಾ, ಕೀರ್ತಿಸುತ್ತಾ, ಮೈಮರೆತು ಕುಣಿದಾಡುತ್ತಾ, ಆನಂದದ ಕಣ್ಣೀರನ್ನು ಸುರಿಸುತ್ತಾ, ಮನಸ್ಸನ್ನು ಕಲಕಿ, ಕರಗಿಸಿ, ಪೆರುಕಪಿಸುವವರು "ಉತ್ತಮರು" - ಸುರಿಸುತ್ತಾ, ಮನಸ್ಸನ್ನು ಕಲಕಿ, ಕರಗಿಸಿ,
ಅವರೇ ಭಕ್ತಶಿಖಾಮಣಿಗಳು.

ಉತ್ತಮರ ಯಾವೊಂದು ಸ್ವಭಾವವನ್ನು [illegible] ಅನುಸರಿಸದೆ, ಅವರ ಯಾವ ವಿಷಯವನ್ನು ಮನಸ್ಸಿಗೆ ಹಚ್ಚಿಕೊಳ್ಳದೆ, ತಮ್ಮ ಹೊಟ್ಟೆಯನ್ನು ತುಂಬಿಸುತ್ತಾ ದೇಹವನ್ನು ಬೆಳೆಸುವುದರಲ್ಲೇ ಸದಾ ನಿರತರಾಗಿರುವವರು "ಅಧಮರು" - ಕೀಳು ಬುದ್ಧಿಯ ಪ್ರಾಣಿಗಳಂತೆ ಜೀವನ ನಡೆಸುವವರು.

"ನೀರ್ಮೈಯಿಲ್ ನುಟ್ರುವರ್ . . . . . . ಎನ್ನಾಯು" - ಕೆಲವರು ಸೂಕ್ತರು. ಪಾಂಡವರು ಅಂತವರು. ಕೌರವರಿಗೆ ಪಾಂಡವರ ವಿಷಯದಲ್ಲಿ ಅಸೂಯೆ ಕರುಣೆಯಿಲ್ಲ. [illegible] ಅವರನ್ನು ಹಿಂಸಿಸುವುದು, ಕಷ್ಟಕೊಡುವುದು ಕೌರವರ ಮುಖ್ಯ ಕೆಲಸವಾಗಿತ್ತು. ಪಾಂಡವರು ಭಕ್ತರು. ಸಜ್ಜನರಾಗಿದ್ದರು. ಭಗವಂತನನ್ನು ಆಶ್ರಯಿಸಿದವರು. ದುಷ್ಟರಾದ ಕೌರವರನ್ನು ಸಜ್ಜನರಿಗೆ ಕರಲು

Garani Srinivasan

ಬಿಟ್ಟಿಲಗೊಂಡದ್ದರಿಂದ, ಭಗವಂತನು ಅವರನ್ನು ತನ್ನ ಅನುಸಾರನು. ಶಾಂತವಾಗಿ ರಕ್ಷಣೆಯ ಶ್ರೀಪಾದ, ಅವರ ಬೆಂಬಲಕ್ಕನಾಗಿ ನಿಂತು, ಅವರಿಗೆ ಬೇಕು ನಡೆಸಿಕೊಳ್ಳುವನು.

"ಪಾರ್ ಮಲ್ಲು ಶೆನ್ನೈಯುತ್ತ" – ಭಗವಂತನಿಗೆ ನಾಲ್ಕು ಕೆಲಸಗಳು: ದುಷ್ಟ ಶಿಕ್ಷಣ, ಶಿಷ್ಟ ರಕ್ಷಣ, ಧರ್ಮ ಸಂಸ್ಥಾಪನ, ಭೂಭಾರ ಹರಣ. ಇವುಗಳು ಯಾವಾಗಲೂ ಇರುತ್ತವೆ. ಮಹಾಭಾರತ ಯುದ್ಧ ರಚನೆಯನ್ನು ಕಂಡರೆ ಅರ್ಥವಾಗುವುದು. ಯುದ್ಧವನ್ನು ಕೂಡದೆ, ಅಲ್ಲಿ ನಿಂತವರ ಎಲ್ಲ ಆಯುಧಗಳ ಶಸ್ತ್ರಗಳನ್ನು, ತೇರನ್ನು ಓಡಿಸುವ ಆಯುಧಗಳ ಶಸ್ತ್ರಗಳನ್ನು ನಾಶಪಡಿಸಿದ ಈ ಕಾರ್ಯ ಭಗವಂತನ ನಾಲ್ಕು ಕಾರ್ಯಗಳು ಅಲ್ಲಿ ನಡೆಯಿತು!

ಆಳ್ವಾರರು ಹೇಳುತ್ತಾರೆ: ನಿಷ್ಠೆಯುಳ್ಳವರು, ಸಂಸಾರದಲ್ಲಿ ಬೇಸರಗೊಂಡ ಶ್ರೀವೈಷ್ಣವರು ನಾಮ ಸಂಕೀರ್ತನೆ, ನಿಜವಾದ ಭಾಗವತರ ಕೈಂಕರ್ಯ ಮಾಡುವ ಭಗವಂತನಲ್ಲಿ ಅವರ ಬೆಂಬಲಕ್ಕನಾಗಿ ನಿಂತ ಪರಂಜ್ಯೋತಿ ಸ್ವರೂಪವಾದ ಭಗವಂತನಲ್ಲಿ ಭಕ್ತಿ ಮಾಡುವ ಉತ್ತಮರ ನಡುವೆ ತಮ್ಮ ಹೊಣೆಯನ್ನು ಬಿಡುವುದರಿಂದ ಭಕ್ತಿ ಮಾಡುವ ಉತ್ತಮರ ನಡುವೆ ಅಧಮರು ಇದ್ದರೂ ಪ್ರಯೋಜನವಿಲ್ಲ. ಉತ್ತಮರೊಡನೆ ಅವರಿಂದ ಲಾಭ ಸಿಕ್ಕಿ, ಅವರು ಸ್ವತಃ ಏನನ್ನೂ ಕಲಿಯರು. ಉತ್ತಮರಲ್ಲಿ ಅವರಿಂದ ಯಾವ ಪ್ರಯೋಜನವೂ ಇಲ್ಲ.

೮. வார்புனலந் தண்ணருவி
வடதிருவேங் கடத்தெந்தை,
பேர்பலசொல்லிப் பிதற்றிப்
பித்தரென்றே பிறர்கூற,
ஊர்பலபுக்கும் புகாதும்
உலோகர் சிரிக்கநின்றாடி,
ஆர்வம் பெருகிக் குனிப்பார்
அமரர் தொழப்படுவாரே.

ವಾರ್ಪುನಲನ್ದಣ್ಣರುವಿ ವಡತ್ತಿರುವೇಙ್ಗಡತ್ತೆನ್ದೈ,
ಪೇರ್ ಪಲ ಶೊಲ್ಲಿಪ್ಪಿದಱ್ಱಿ ಪ್ಪಿತ್ತರೆನ್ಱೇ ಪಿಱರ್ ಕೂಱ,
ಊರ್ ಪಲ ಪ್ಪುಕ್ಕುಮ್ ಪ್ಪುಗಾದುಮ್ ಉಲೋಗರ್ ಶಿರಿಕ್ಕ ನಿನ್ಱಾಡಿ,
ಆರ್ವಮ್ ಪೆರುಗಿಕ್ಕುನಿಪ್ಪಾರ್ ಅಮರರ್ ತೊೞಪ್ಪಡುವಾರೇ

ವಾರ್ வார் = ಹರಿಯುವ, (ಶ್ರೇಷ್ಠವಾದ), ಪುನಲ್ புனல் = ತೀರ್ಥಗಳನ್ನು (ನೀರಿನ ಝರಗಳನ್ನು), ಅಮ್ அம் = ಅಂದವಾದ, ತಣ್ தண் = ತಂಪಾದ, ಅರುವಿ அருவி = ಬೆಟ್ಟದ ಝರಿಗಳನ್ನುಳ್ಳ, ವಡ ತಿರುವೇಙ್ಗಡತ್ತು வட திருவேங்கடத்து = ಉತ್ತರದ ತಿರುವೇಂಕಟಗಿರಿಯ, ಎನ್ದೈ எந்தை = ಸ್ವಾಮಿಯ, ಪೇರ್ ಪಲ பேர் பல = ಅನೇಕ ನಾಮಗಳನ್ನು, ಶೊಲ್ಲಿ சொல்லி = ಹೇಳುತ್ತ,

ಪಿದಟ್ರು பிதற்றி = ವಟಗುಟ್ಟಿ, (ಮನಸ್ಸಿಗೆ ಬಂದದ್ದನ್ನ ಒದರಿ), ಪಿತ್ತರ್ ಎನ್ಱೇ
பித்தர் என்றே = ಹುಚ್ಚರು ಎಂತಲೇ, ಪಿಱರ್ பிறர் = ಇತರರು, ಕೂಱ
கூற = ಹೇಳುತ್ತಿರಲು, ಊರ್ ಪಲ ஊர் பல = ಹಲವಾರು ಊರುಗಳನ್ನೂ
ಪುಕ್ಕುಮ್ ಪುಗಾದುಮ್ புக்கும் புகாதும் = ಪ್ರವೇಶಿಸಿಯೂ, ಪ್ರವೇಶಿಸ
ದೆಯೂ, ಉಲೋಗರ್ உலோகர் = ಲೋಕರು, ಶಿರಿಕ್ಕ சிரிக்க =
ನಗುವಂತೆ (ನಗುತ್ತಿರಲು), ನಿನ್ಱು ஆடி நின்று ஆடி = ನಿಂತು, ಕುಣಿದಾಡಿ,
ಪೆರುಮ್ ಪೇಱು = ಉತ್ಕೃಷ್ಟ,
ಆರ್ವಮ್ ஆர்வம் = ಆಶೆಯನ್ನು, ಅಮರರ್ அமரர் = ಅಮರ
ಕುನಿಪ್ಪಾರ್ குனிப்பார் = ನಮಸ್ಕರಿಸುವವರು, ತೊழப்படுவாரே = ನಮಸ್ಕರಿಸಲ್ಪಡುವ
[illegible]ರಿಂದ, ಕೇಳು ಪಡುವಾರೆ ತொழப்படுவாரே (ಕೇಳುವವರೇ ಆಗುತ್ತಾರೆ).
ವರೇ ಆಗುತ್ತಾರೆ. (ಪೂಜೆ ಪಡೆಯುವವರೇ ಆಗುತ್ತಾರೆ).

ನಾಲುಗಟ್ಟಿರುವ ಶ್ರೇಷ್ಠವಾದ ಶೀರ್ಷಿಕೆಗಳನ್ನು, ಅಂದವಾದ ಮುತ್ತು ಶಿಂಧಾದ ಚೆಲುವ ಗುಣಗಳನ್ನು ಉಳ್ಳ, ಉತ್ತರದ ತಿರುವೇಂಕಟನಾಯ ಹುಚ್ಚರು ಸ್ವಾಮಿಯ ಅನೇಕ ಹೆಸರುಗಳನ್ನು ಹೇಳುತ್ತಾ, ಮನಸ್ಸಿಗೆ ಒದರುತ್ತಾ, ಹುಚ್ಚರು ಎಂದೇ ಇತರರು ಹೇಳುವಂತೆ, ಹಲವಾರು ಊರುಗಳನ್ನು ಪ್ರವೇಶಿಸಿಯೂ, ಪ್ರವೇಶಿಸದೆಯೂ, ಲೋಕರು ನಗುವಂತೆ (ನಗುತ್ತಿರಲು) ನಿಂತು ಕುಣಿದಾಡಿ, ಆಶೆಯನ್ನು ಉತ್ಕೃಷ್ಟ ನಮಸ್ಕರಿಸುವವರು, ಅಮರರಿಂದ ಪೂಜೆ ಪಡೆಯುವವರೇ ಆಗುತ್ತಾರೆ. (8)

ಭಕ್ತಿಯನ್ನು ವೃದ್ಧಿಯಾಗ ಬೆಳೆಸಿಕೊಂಡಿರುವ, ಯಾವಾಗಲೂ ಎಲ್ಲರ ಕಣ್ಣಿಗೆ ಭಕ್ತಿ ಪರವಶರಾಗಿ ಆವೇಶಗೊಂಡು ಹುಚ್ಚರಂತೆ ನಡೆದುಕೊಳ್ಳುವ ಭಕ್ತರ ಬಗ್ಗೆ ಇಲ್ಲಿ ಹೇಳಲಾಗುತ್ತದೆ.

[illegible] ಪವಿತ್ರ ಜನರ ಒಳ್ಳೆಯ ಗುಣವನ್ನು ಇಲ್ಲಿ ಹೇಳಲಾಗುತ್ತದೆ.

ಸಾಮಾನ್ಯ ಜನರ ಕಣ್ಣಿಗೆ ಭಕ್ತರು ಹುಚ್ಚರಾಗಿ ಕಾಣುತ್ತಾರೆ. ಅವರ ಒಂದೊಂದು ನಡತೆಯೂ, ಒಂದೊಂದು ಕೆಲಸವೂ ಹುಚ್ಚರನ್ನು ನೆನಪಿಸುತ್ತದೆ. ಭಗವನ್ನಾಮವನ್ನು ಜಪಿಸುವುದಾಗಲಿ, ಕೀರ್ತಿಸುವುದಾಗಲಿ, ಪುಣ್ಯಕ್ಷೇತ್ರಗಳನ್ನು ನೆನೆಸುವುದಾಗಲಿ, ತಿರುಗುವುದಾಗಲಿ, ಪ್ರೇಮದಿಂದ ಭಕ್ತಿ ಭಾವದಿಂದ ಅಲ್ಲಲ್ಲಿ ಕುಣಿದಾಡುವುದಾಗಲಿ, ಎಲ್ಲವೂ ಬೇರೆಯವರ ಕಣ್ಣಿಗೆ ವಿಚಿತ್ರವಾಗಿಯೇ ಇರುತ್ತದೆ. ಕಂಡವರು ನಗುತ್ತಾರೆ, ಹಾಸ್ಯ ಮಾಡುತ್ತಾರೆ, ಬಾಯಿಗೆ ಬಂದಂತೆ ಅಣಕಿಸುತ್ತಾರೆ, ಬೈಯುತ್ತಾರೆ. ಆದರೂ ಅವರು ಯಾವುದನ್ನೂ ಲಕ್ಷ್ಯವಿಡದೆ ಇರುತ್ತಾರೆ. ಲೋಕಜನರ ಅಪಹಾಸ್ಯದ ಕಡೆಗೆ, ಯಾವುದನ್ನೂ ಲಕ್ಷ್ಯವಿಡದೆ ಇರುತ್ತಾರೆ. ಅಂಥ ಹೊಗಳಿಕೆಯಾಗಲಿ, ತೆಗಳಿಕೆಯಾಗಲಿ ಅವರನ್ನು ಬದಲಾಯಿಸುವುದಿಲ್ಲ. ಅಂಥ ಭಕ್ತಿಯ ಶಕ್ತಿಯುಳ್ಳವರನ್ನು ಅಮರರೂ ಸಹ ಪೂಜೆ ಮಾಡಿ ನಮಸ್ಕರಿಸುತ್ತಾರೆ.

ಆಳ್ವಾರರು ಹೇಳುತ್ತಾರೆ: ಶಂಖದ ಕಿವಿಗಳಂತ ಸುಂದರವಾದ ಚಕ್ಷ್ರ ಘುಂಗಳಿಂದಲೂ, ನಾಲು ನಾಲುಗರುವ ಶ್ರೇಷ್ಠವಾದ ಶಿಲ್ಪಗಳಿಂದಲೂ, ಪ್ರಕೃತಿ ರಮ್ಯವಾಗಿಯೂ ಇರುವುದು ತಿರುವೆಂಕಟಾಚಲ. ಅದರ ಶಿಖರದಲ್ಲಿ ನೆಲೆಸಿರುವ ಸ್ವಾಮಿಯ ದಿವ್ಯನಾಮಗಳನ್ನು ಮನಸ್ಸಿನಲ್ಲಿ ಬಂದ ಹಾಗೆ ಓದುತ್ತಾ, ಜಪಿಸುತ್ತಾ, ಜನಶುಂಬದ ಊರುಗಳನ್ನು ಜನ ಸಂಚಾರವಿಲ್ಲದ ಕಾಡುಗಳನ್ನು ಲೆಕ್ಕಿಸದಂತೆ ಆನಂದದಿಂದ ನಗುತ್ತ, ಕುಣಿದು, ಹಾಡಿ, ತಮ್ಮ ಭಕ್ತಿಯನ್ನು ಪ್ರಕಟಿಸುತ್ತಾರೆ. ಲೋಕದವರೆಲ್ಲಾ ಅವರನ್ನು ಹುಚ್ಚರೆಂದು ನಕ್ಕು ಹಾಸ್ಯ ಮಾಡುತ್ತಿರುವಾಗಲೂ, ಜ್ಞಾನದೃಷ್ಟಿಯುಳ್ಳ ಕಾಲಕಳೆಯುವ ಜನರು ಭಕ್ತಿ ಮಾಡುತ್ತಿರುವಾಗಲೂ, ಅವರನ್ನು ಮೇಲಣ ಲೋಕದವರು ಪೂಜಿಸಿ, ಅವರಿಗೆ ವಂದನೆ ಮಾಡುತ್ತಾರೆ.

9\. அமரர் தொழப்படுவானை
அனைத்துலகுக்கும் பிரானை,
அமர மனத்தினுள் யோகு புணர்ந்து
அவன் தன்னோடொன்றாக,
அமரத் துணிய வல்லார்கள் ஒழிய
அல்லாதவரெல்லாம்,
அமரநினைந்தெழுந்தோடி
அலற்றுவதே கருமமே.

ಅಮರರ್ ತೊಳಪ್ಪಡುವಾನ್ನೈ ಅನೈತ್ತುಲಗುಕ್ಕುಮ್ ಪಿರಾನ್ನೈ,
ಅಮರಮನತ್ತಿನುಳ್ ಯೋಗು ಪುಣರ್ನ್ದು ಅವನ್ದನ್ನೋಡೊನ್ರಾಗ,
ಅಮರತ್ತುಣಿಯ ವಲ್ಲಾರ್ಗಳ್ ಒಳಿಯ ಅಲ್ಲಾದವರೆಲ್ಲಾಮ್,
ಅಮರನಿನೈನ್ದೆಳುನ್ದೋಡಿ ಅಲರ್ರುವದೇ ಕರುಮಮೇ.

ಅಮರರ್ அமரர் = ಅಮರರಿಂದ (ದೇವತೆಗಳು, ನಿತ್ಯಸೂರಿಗಳು ಮುಂತಾದವರಿಂದ), ತೊಳಪ್ಪಡುವಾನ್ನೈ தொழப்படுவானை = ಸೇವಿಸಲ್ಪಡುವವನನ್ನು, ಅನೈತ್ತು அனைத்து = ಎಲ್ಲಾ, ಉಲಗುಕ್ಕುಮ್ உலகுக்கும் = ಲೋಕಗಳಿಗೂ, ಪಿರಾನ್ನೈ பிரானை = ಸ್ವಾಮಿಯನ್ನು, ಅಮರ அமர = ಚೆನ್ನಾಗಿ ಸ್ಥಿರವಾಗಿ (ಅಚಲಂಬದಂತೆ), ಮನತ್ತಿನುಳ್ மனத்தினுள் = ಮನಸ್ಸಿನಲ್ಲಿ (ಮನಸ್ಸಿನ ಒಳಗಡೆ, ಎಂದರೆ, ಚಿತ್ತದಲ್ಲಿ), ಯೋಗು யோகு = ಯೋಗವನ್ನು, ಪುಣರ್ನ್ದು புணர்ந்து = ನಡೆಸಿ, ಅವನ್ அவன் = ಆ ಸ್ವಾಮಿಯು, ತನ್ನೋಡು (ಅವನ್ ತನ್ನೋಡು = ಅವನೊಡನೆ), ತನ್ನೊಡನೆ, ಒನ್ರಾಗ (ಒಂದಾಗಿ) ஒன்றாக ಒಂದಾಗುವಂತೆ, ಅಮರ அமர = ಶಾಶ್ವತವಾಗಿ, ತುಣಿಯವಲ್ಲಾರ್ಗಳ್ ಒಳಿ

ತುಣಿಯ ವಲ್ಲಾರ್ಗಳ್ ತಾಳಿಯ = ಪ್ರಯತ್ನಿಸುವವರನ್ನು ಕೂಡ (ಮುನ್ನ ಸ್ಲುವವರನ್ನು ಬಿಟ್ಟು), ಅಲ್ಲಾದವರ್ ಎಲ್ಲಾರುಮ್ ಅಲ್ಲಾತವರ್ ಎಲ್ಲಾಮ್ = ಸಾಧಿಸಲ್ಲದವರೆಲ್ಲರಾ, ಅಮರ ಅಮರ = ಶಕ್ತರಾಗಲು (ಭಗವಂತನೊಡನೆ ಒಂದಾಗುವುದಕ್ಕೆ), ನನ್ನನ್ನು ನಿನೈಂದು = ನೆನೆದು (ಚಿಂತಿಸಿ), ಎಲುಮ್ಬುಮ್ ಉರುಗು = ಎಲ್ಬು, ಆಡಿ ಆಡ್ = ಕುಣಿದಾಡಿ, ಅಲಱ್ಱುವದೇ ಅಲಱ್ಱುವದೇ = ಒದರುತ್ತಿರುವುದೇ, ಕರುಮುಮೇ ಕರುಮಮೇ = ಕೆಲಸವಾಗುತ್ತದೆ.

ಅಮರರಾದ ಶೀಲ ಸಿರಿಯುವವನನ್ನು, ಎಲ್ಲಾ ಲೋಕಂಗಳನ್ನು ಸ್ವಾಮಿಯಾಗಿರುವವನನ್ನು ಮನಸ್ಸಿನ ಒಳಗಡೆ (ಚಿತ್ತದಲ್ಲಿ) ಯೋಗವನ್ನು ನಡೆಸಿ ಅವನೊಡನೆ ಒಂದಾಗುವಂತೆ ಶಕ್ತರಾಗಲು ಪ್ರಯತ್ನಿಸಿ ಮುನ್ನುವವರನ್ನು ಕೂಡ ಇತರರೆಲ್ಲರಾ (ಭಗವಂತನೊಡನೆ ಒಂದಾಗಲು) ಶಕ್ತರಾಗುವುದಕ್ಕೆ ಚಿಂತಿಸಿ, ಎಲ್ಬು, ಆಡಿ, ಒದರುತ್ತಿರುವುದೇ ಕೆಲಸವಾಗುತ್ತದೆ (ಕರ್ತವ್ಯವಾ 9 ಗುತ್ತದೆ).

ಇಲ್ಲಿ, ಯೋಗ ನಿಷ್ಠೆಯೆಂಬುದು ಕಠಿಣಸಾಧ್ಯವೆಂದಾ, ಉತ್ತಮ ಕೆಲಸ ಎಂದೂ ಭಗವಂತನ ಕೃಪೆ ಮಾತ್ರವೇ ಆ ಮೂಲಕ ಸಾಧ್ಯ ಎಂದು ತಿಳಿಸುವುದರಿಂದ, ಜನರಾಗ ನಾನಿ ಮುಖ್ಯವೇ ಸಾಧಕರುಗಳಿಗೆ ಭಕ್ತಿ ಮಾರ್ಗವೇ ಲೇಸೆಂದು ಹೇಳುತ್ತದೆ.

ವಿಷಯಗಳ ಕಡೆ ಮನಸ್ಸನ್ನು ಸೆಳೆಯುವ ಇಂದ್ರಿಯಗಳನ್ನು ನಿಗ್ರಹಿಸಿ, ಚಂಚಲವಾದ ಮನಸ್ಸನ್ನು ಸ್ಥಿರಗೊಳಿಸಿ, ಒಂದೆಡೆ ಸೇರಿಸಿ, ಮನಸ್ಸನ್ನು ಅಂತರ್ಮುಖಗೊಳಿಸಿ, ಅಂತರಾತ್ಮನೊಡನೆ ಸೇರಿಸುವುದಕ್ಕೆ, ಅವನೊಡನೆ ಕಲೆಸಿ ನಿಲ್ಲುವುದಕ್ಕೆ 'ಯೋಗ' ಎನ್ನಲಾಗುತ್ತದೆ.

ಆಳ್ವಾರು ಹೇಳುತ್ತಾರೆ: ಯೋಗವನ್ನು ನಡೆಸುತ್ತಾ ಭಗವಂತನೊಡನೆ ಒಂದಾಗುವುದಕ್ಕೆ ಉತ್ತಮ ಕೆಲವರಿಗೆ ಮಾತ್ರವೇ ಸಾಧ್ಯ. ಅಂಥವರಿಗೆ ದೃಢವಾದ ಮನಸ್ಸು, ಕಠಿಣವಾದ ಪ್ರಯತ್ನವೂ, ಛಲವೂ, ಉತ್ಸಾಹವೂ ಇರಬೇಕು. ಭಗವಂತನನ್ನು ಕುರಿತು ಚಿಂತಿಸಿ, ಮತ್ತೆಲ್ಲ ಜನರಿಗೆ ಭಕ್ತಿಯೊಂದೇ. ಭಗವಂತನನ್ನು ಕುರಿತು ಚಿಂತಿಸುವುದು, ನಾಮ ಜಪ ಮಾಡುವುದು, ಕುಣಿಯುವುದು, ಭಜಿಸುವುದು, ಸಂಕೀರ್ತನೆ ಮಾಡುವುದು, ಇತ್ಯಾದಿಗಳಿಂದಲೇ ಭಗವಂತ ಅನನ್ಯ ಭಕ್ತರನ್ನು ಕುರಿತು ಆನಂದಿಸುವುದು, ಇವೆಲ್ಲಾ ಭಗವಂತನಲ್ಲಿ ಒಂದಾಗುವುದಕ್ಕೆ ಅವರಿಗೆ ಶಕ್ಯ ಮಾರ್ಗ.

10. கருமமும் கருமபலனுமாகிய
காரணன் தன்னை,
திருமணிவண்ணனைச் செங்கண்
மாலினைத் தேவபிரானை,
ஒருமை மனத்தினுள் வைத்து
உள்ளம் குழைந்தெழுந்தாடி,

Garani Srinivasan

பெருமையும் நாணும் தவிர்ந்து
பிதற்றுமின் பேதைமை தீர்ந்தே.

ಕರುಮಮುಮ್ ಕರುಮ ಪಲನುಮ್ ಆಯ ಕಾರಣನ್ ತನ್ನೈ,
ತಿರುಮಣಿ ವಣ್ಣನೈ ಚ್ಚೆಂಗಣ್ ಮಾಲಿನೈ ತ್ತೇವ ಪಿರಾನೈ,
ಒರುಮೈ ಮನತ್ತಿನುಳ್ ವೈತ್ತು ಉಳ್ಳಮ್ ಕುಳೈನ್ದೆಳುನ್ದಾಡಿ,
ಪೆರುಮೈಯುಮ್ ನಾಣುಮ್ ತವಿರ್ನ್ದು ಪಿದಟ್ರುಮಿನ್ ಪೇದೈಮೈ ತೀರ್ನ್ದೇ

ಕರುಮಮುಮ್ கருமமும் = ಕರ್ಮವೂ, ಕರುಮ ಪಲನುಮ್ கரும பலனும் = ಕರ್ಮಗಳಿಂದ ಬರುವ ಫಲವೂ, ಆಯ ஆகிய = ಆಗಿರುವ, ಕಾರಣನ್ ತನ್ನೈ காரணன் தன்னை = ಆದಿಕಾರಣನನ್ನು, ತಿರುಮಣಿ ವಣ್ಣನೈ திருமணி வண்ணனை = ಶ್ರೇಷ್ಠವಾದ ರತ್ನದ ಬಣ್ಣದವನನ್ನು, ಶೆಮ್ ಕಣ್ ಮಾಲಿನೈ செம் கண் மாலினை = ಸುಂದರವಾದ (ಕೆಂಪನೆ ಯ) ಕಣ್ಣುಗಳ ಸ್ವಾಮಿಯನ್ನು, ತ್ತೇವ ಪಿರಾನೈ தேவ பிரானை = ದೇವತೆಗಳ ಒಡೆಯನನ್ನು, (ದೇವದೇವನನ್ನು), ಒರುಮೈ ஒருமை = ಏಕಾಗ್ರತೆಯುಳ್ಳ, ಮನತ್ತಿನ್ மனத்தின் = ಮನಸ್ಸಿನ, ಉಳ್ ವೈತ್ತು உள் வைத்து = ಒಳಗಡೆ ಇಟ್ಟುಕೊಂಡು, ಉಳ್ಳಮ್ ಕುಳೈನ್ದು உள்ளம் கு-ழைந்து = ಮನಸ್ಸು ಕರಗಿ (ಅಂತಃಕರಣವು ಕರಗಿ), ಎಳುನ್ದು ಆಡಿ எழுந்து ஆடி = ಎದ್ದು ಕುಣಿದಾಡಿ, ಪೆರುಮೈಯುಮ್ பெருமையும் = ಹಿರಿಮೆಯನ್ನು (ಅಹಂಕಾರವನ್ನು), ನಾಣುಮ್ நாணும் = ನಾಚಿಕೆಯನ್ನು, ತವಿರ್ನ್ದು தவிர்ந்து = ಬಿಟ್ಟು, ಪಿದಟ್ರುಮಿನ್ பிதற்றுமின் = (ಭಗವನ್ನಾಮ ಸಂಕೀರ್ತನೆಯನ್ನು ಮಾಡಿರಿ) ಒದರುತ್ತಿರಿ, ಪೇದೈಮೈ பேதைமை = ಅಜ್ಞಾನವನ್ನು, ತವಿರ್ನ್ದು தவிர்ந்து = ಬಿಟ್ಟು (ತೊಲಗಿ)

ಕರ್ಮವೂ ಕರ್ಮಫಲವೂ ಆಗಿರುವ ಆದಿಕಾರಣನನ್ನು, ಶ್ರೇಷ್ಠವಾದ ರತ್ನದ ಬಣ್ಣದವನನ್ನು, ಸುಂದರವಾದ (ಕೆಂದಾವರೆಯಂತೆ) ಕಣ್ಣುಳ್ಳ ಸ್ವಾಮಿಯನ್ನು, ದೇವದೇವನನ್ನು, ಏಕಾಗ್ರತೆಯುಳ್ಳ ಮನಸ್ಸಿನ ಒಳಗೆ ಇಟ್ಟುಕೊಂಡು, ಅಂತಃಕರಣವನ್ನು ಕರಗಿಸಿ, ಎದ್ದು ಕುಣಿದಾಡಿ, ಹಿರಿಮೆಯನ್ನು (ಅಹಂಕಾರವನ್ನು) ನಾಚಿಕೆಯನ್ನು ಅಜ್ಞಾನವನ್ನು ಬಿಟ್ಟುಕೊಟ್ಟು ಒದರುತ್ತಿರಿ (ಭಗವನ್ನಾಮ ಸಂಕೀರ್ತನೆ ಮಾಡುತ್ತಿರಿ). (10)

ಜನಸಾಮಾನ್ಯರಿಗೆ ಆಳ್ವಾರರ ಉಪದೇಶ ಇಲ್ಲಿದೆ.

ಆಳ್ವಾರರು ಹೇಳುತ್ತಾರೆ: ಭಗವಂತನು ಎಲ್ಲಕ್ಕೂ ಆದಿ ಮತ್ತು ಕಾರಣನು.

Garani Srinivasan

ಪುಣ್ಯರೂಪವಾದ ಎಲ್ಲಾ ಬಗೆಯ ಕರ್ಮಗಳೂ ಅವನೇ. ಆ ಕರ್ಮಗಳ ಫಲರೂಪವೂ ಅವನೇ. ಅವನು ಶ್ರೇಷ್ಠವಾದ ನೀಲಮಣಿಯ ಬಣ್ಣವುಳ್ಳವನು. ಕೆಂದಾವರೆಯ ಎಸಳಿನಂತೆ ವಿಶಾಲವೂ ಆಕರ್ಷಕವೂ ಆದವು ಅವನ ಕಣ್ಣುಗಳು. ಬ್ರಹ್ಮಾದಿ ಎಲ್ಲಾ ದೇವತೆಗಳಿಗೂ ಅವನು ದೇವನು. ಇಂತಹ ಸ್ವಾಮಿಯನ್ನು ಪ್ರೀತಿಯಿಂದ ತುಂಬಿದ ಚಿತ್ತದೊಳಗೆ ಇಟ್ಟುಕೊಂಡು, ಅಜ್ಞಾನವನ್ನು ಬದಿಗೊತ್ತಿ, ನಾಚಿಕೆ ಮುಜುಗರಗಳನ್ನು ಬಿಡು, ಅಂತಃಕರಣವನ್ನು ಭಕ್ತಿಭಾವದಿಂದ ಕರಗಿಸಿ, ಭಗವನ್ನಾಮೋಚ್ಚಾರಣೆ ಮಾಡುತ್ತಾ, ನಲಿದಾಡುತ್ತಾ ಬನ್ನಿ. ನಿಮ್ಮ ಉಜ್ಜೀವನಕ್ಕೆ ಇದೇ ಮಾರ್ಗ!

11. தீர்ந்த வடியவர் தம்மை
திருத்திப் பணிக்கொள்ளவல்ல,
ஆர்ந்த புகழச்சுதனை
அமரர் பிரானையெம்மானை,
வாய்ந்த வளவயல்சூழ்
தண் வளங்குருகூர்ச்சடகோபன்,
நேர்ந்தவோராயிரத்திப்பத்து
அருவினை நீறுசெய்யுமே.

ತೀರ್ನ್ದ ವಡಿಯವರ್ ತಮ್ಮೈ ತಿರುತ್ತಿಪ್ಪಣಿಕ್ಕೊಳ್ಳವಲ್ಲ,
ಆರ್ನ್ದ ಪುಗಳಚ್ಚುದನೈ ಅಮರರ್ ಪಿರಾನೈಯೆಮ್ಮಾನೈ,
ವಾಯ್ನ್ದ ವಳವಯಲ್ ಶೂಳ್ ತಣ್ ವಳಙ್ಗುರುಗೂರ್ ಚಟಕೋಪನ್,
ನೇರ್ನ್ದ ವೋರಾಯಿರತ್ತಿಪ್ಪತ್ತು ಅರುವಿನೈ ನೀಱುಶೆಯ್ಯುಮೇ.

ತೀರ್ನ್ದ தீர்ந்த = ನಿವಿಷ್ಟಗೊಂಡ, ಅಡಿಯವರ್ ತಮ್ಮೈ அடியவர் தம்மை = ಭಕ್ತರನ್ನು, ತಿರುತ್ತಿ திருத்தி = ಸರಿಪಡಿಸಿ, ಪಣಿಕೊಳ್ಳವಲ್ಲ பணிகொள்ளவல்ல = ನಿತ್ಯಕೈಂಕರ್ಯವನ್ನು ಸ್ವೀಕರಿಸಬಲ್ಲ (ಶಕ್ತನಾದ), ಆರ್ನ್ದ ಪುಗಳ್ ஆர்ந்த புகழ் = ತುಂಬಿದ ಕೀರ್ತಿಯನ್ನುಳ್ಳ, ಅಚ್ಚುದನೈ அச்சுதனை = ನಾಶರಹಿತನನ್ನು (ಅಚ್ಯುತ ಎಂಬ ಹೆಸರುಳ್ಳವನನ್ನು), ಅಮರರ್ ಪಿರಾನೈ அமரர்பிரானை = ದೇವದೇವನನ್ನು, ಎಮ್ಮಾನೈ எம்மானை = ನಮ್ಮ ಸ್ವಾಮಿಯನ್ನು, ಸುಂದರ, ವಾಯ್ನ್ದ வாய்ந்த = ಸುಪ್ರಸಿದ್ಧವಾದ, ವಳಮ್ வளம் = ಸುಂದರವಾದ (ಸಮೃದ್ಧವಾದ), ವಯಲ್ வயல் = ಗದ್ದೆ ಬಯಲುಗಳಿಂದ, ಶೂಳ್ சூழ் = ಸುತ್ತುವರಿದ, ತಣ್ தண் = ತಂಪಿನ, ವಳಙ್ಗು வளங்கு = ಬೆಳಗುವ, ಕುರುಗೂರ್ குருகூர் = ತಿರುಕ್ಕುರುಗೂರಿನ, ಚಟಕೋಪನ್ சடகோபன் = ಶಠಕೋಪನು, ನೇರ್ನ್ದ நேர்ந்த = ಹೇಳಿದ, ಓರ್ ಆಯಿರತ್ತು ஓர் ஆயிரத்து.

Garani Srinivasan

ಒಂದು ಪಾಶುರದಲ್ಲಿ, ಇ ಪತ್ತು ಇ ಪತ್ತು = ಈ ಹತ್ತು (ಪಾಶುರಗಳು), ಅಲ ವಿನೈ ಅ(ಗ್ರ)ವಿಲಿಣ = ಕ್ರೂರವಾದ ಪಾಪಗಳನ್ನು, ನೀಲಾಂ ಕೊಯ್ಯುವೇ. ನ್ರೋಯ್ ತೆಯ್ಯುಮೇ = ಭಸ್ಮವಾಗಿಸುತ್ತವೆ.

ಪರಿಪಕ್ವಗೊಂಡ ಭಕ್ತರನ್ನು ಸಂಪಾದಿಸಿ, (ಅವರಿಂದ) ನಿತ್ಯಕೈಂಕರ್ಯ ವನ್ನು ಸ್ವೀಕರಿಸಬಲ್ಲ ಪಾರವಿಲ್ಲದ (ಕೊನೆಯಿಲ್ಲದ) ಕೀರ್ತಿಯುಳ್ಳ ನಾರಾಯಣ ನನ್ನು, ದೇವದೇವನನ್ನು, ನಮ್ಮ ಸ್ವಾಮಿಯನ್ನು ಕುರಿತು ಸುಪ್ರಸಿದ್ಧವಾದ ಗದ್ದೆಬಯಲುಗಳಿಂದ ಸುತ್ತುವರಿದ ಕಂಪನ್ನು ಬೀರುವ ತೋಟಗಳ ಕುರು ಕೂರಿನ ಶಠಕೋಪನು ಹೇಳಿದ ಒಂದು ಪಾಶುರದಲ್ಲಿ ಈ ಹತ್ತು ಕಟುಂ ಕ್ರೂ 11
ರವಾದ ಪಾಪಗಳನ್ನು ಭಸ್ಮಗೊಳಿಸುತ್ತವೆ.

ಈ ತಿರುವಾಯ್ಮೊಳಿಯ ಕಡೆಯ ಪಾಶುರವಿದು. ಭಕ್ತರು ಯಾರು? ಭಕ್ತಿಭಾವವನ್ನು ಬೆಳೆಸುವುದು ಹೇಗೆ? ಭಕ್ತಿಯ ವೈಶಿಷ್ಟ್ಯವೇನು? ಭಕ್ತನಿಗೆ ಇದರಿಂದ ಪ್ರಯೋಜನವೇನು? ಇತ್ಯಾದಿ ವಿಷಯಗಳನ್ನು ವಿಶದೀಕರಿಸುವುದು ಈ ತಿರುವಾಯ್ಮೊಳಿ.

ಭಗವಂತನು ದಯೆ ನೀಡಿರುವ ಇಂದ್ರಿಯಗಳ ಮೂಲಕ ಭಗವದ್ಗು ಣಾನುಭವವನ್ನು ಅನುಭವಿಸಿ ಆನಂದಿಸುವ ಭಾಗ್ಯವಂತನೇ 'ಭಕ್ತ' ಎನ್ನುವನು. ಆ ಆನಂದದಲ್ಲಿ ಅವನು ಇಳೆಯ ಮೇಲೂ ಒಂದು ಕಡೆಯಲ್ಲಿ ಸ್ಥಿಮಿತವಾಗಿ ನಿಲ್ಲಲಾರದವನಾಗುತ್ತಾನೆ. ಭಗವಂತನ ಲೀಲಾ ವಿನೋದಗಳನ್ನು ಮನಸ್ಸಿಗೆ ತಂದುಕೊಂಡಕೂಡಲೇ ಅವನ ಕಂಠ ಬಿಗಿಯುತ್ತದೆ. ಮಾತು ಗದ್ಗದವಾಗುತ್ತದೆ. ಮೈನವಿರೇಳುತ್ತದೆ. ಮನಸ್ಸು ಉದ್ವೇಗಗೊಳ್ಳುತ್ತದೆ. ಆಗ, ಮನಬಂದಂತೆ ಅವನು ಭಗವನ್ನಾಮಗಳನ್ನು ಕೀರ್ತಿಸುತ್ತ, ಮೈಮರೆತು, ಕುಣಿದಾಡುತ್ತ, ಉನ್ಮತ್ತನಂತೆ ನಡೆದುಕೊಳ್ಳುತ್ತಾನೆ. ಅವನಿಗೆ ತಾನು ಯಾರು ಎಂದು ಮೊದಲಾದ ದೇಹಾಭಿಮಾನದ ಪರಿವೆಯೂ ಇರುವುದಿಲ್ಲ. ನಾಚಿಕೆಯೂ ಉಂಟಾಗುವುದಿಲ್ಲ. ಹೀಗೆ ಇಂದ್ರಿಯಗಳನ್ನು ತನ್ನ ಉಜ್ಜೀವನಕ್ಕಾಗಿಯೇ ಬಳಸುತ್ತ, ವಿಷಯಗಳ ಕಡೆಗೆ ಅವು ಹರಿಯದಂತೆ ತಡೆದು, ಅವುಗಳಿಂದ ಉಂಟಾಗುವ ಅನರ್ಥಗಳನ್ನು, ನಾನಾಜನ್ಮಗಳನ್ನು, ಕ್ರೂರಪಾಪಗಳನ್ನು ತನ್ನನ್ನು ಹಿಂಸಿಸದಂತೆ ಮಾಡಬೇಕು. ಭಕ್ತಿ ಭಾವದಿಂದ ಪಕ್ವಗೊಂಡವನಲ್ಲಿ ಭಗವಂತನಿಗೆ ತನ್ನದೇ ಆದರವುಂಟಾಗುತ್ತದೆ.

ಆಳ್ವಾರರು ಹೇಳುತ್ತಾರೆ: ಭಗವಂತನು ತನ್ನನ್ನು ಅವಲಂಬಿಸಿಯೂ, ಭಕ್ತಿಮಾರ್ಗದಲ್ಲಿ ಪರಿಪಕ್ವಗೊಂಡಿರುವ ಭಕ್ತರನ್ನು ಪ್ರಿಯರಾಗಿ ಕಾಣುತ್ತಾನೆ. ಅವರ ಜೀವನದಲ್ಲಿ ಕಂಡುಬರುವ ಏರುಪೇರುಗಳನ್ನು ನಿವಾರಿಸುತ್ತಾನೆ.

Garani Srinivasan

ಮತ್ತು, ಅವರನ್ನು ತನ್ನ ಸಮೀಪಕ್ಕೆ ಬರಮಾಡಿಕೊಳ್ಳುತ್ತಾನೆ. ಅವರಿಂದ ನಿತ್ಯಕೈಂಕರ್ಯವನ್ನು ಸ್ವೀಕರಿಸುತ್ತಾನೆ. ಭಗವಂತನು ನಾರಾಯಣನು. ದೇವದೇವನು. ಆ ಸ್ವಾಮಿಯನ್ನು ಕುರಿತು ಸುಂದರವೂ, ಪ್ರಸ್ತುತವೂ, ಗಂಭೀರವೂ ಮಧುರವೂ ಆದ ತಿರುಪ್ಪಳ್ಳಿಯೆಳುಚ್ಚಿಯನ್ನು [illegible] (ನಮ್ಮಾಳ್ವಾರ ಭಕ್ತಿಪೂರ್ಣವಾದ ಹತ್ತು ಪಾಶುರಗಳನ್ನು ರಚಿಸಿ, ಹಾಡಿದ್ದಾನೆ. ಅವುಗಳಲ್ಲಿ ಈ ಚಿತ್ತವನ್ನು ಚೆನ್ನಾಗಿ ಅರಿತುಕೊಂಡು, ಅನುಷ್ಠಾನಮಾಡುವವರು ಪೂರ್ಣಭಕ್ತರಾಗಿ ಭಗವಂತನ ಕೃಪೆಗೆ ಪಾತ್ರರಾಗುತ್ತಾರೆ. ಅವರ ಕಡುಕ್ರೂರ ಪಾಪಗಳೆಲ್ಲವೂ ಭಸ್ಮಗೊಳ್ಳುತ್ತವೆ. ಎಂದರೆ, ಅವರು ಪರಿಶುದ್ಧರಾಗಿ, ಭಗವತ್ಸನ್ನಿಧಿಯನ್ನು ಸೇರಲು ಯೋಗ್ಯರಾಗುತ್ತಾರೆ. ಅಲ್ಲಿ, ಅವರಿಗೆ ಆನಂದವೂ, ಪರಮಪದವೂ, ಭಗವಂತನ ನಿತ್ಯಕೈಂಕರ್ಯವೂ ಲಭಿಸುತ್ತದೆ.

[illegible] ಈ ತಿರುನಾಯನ ಮಹಿಮೆಯು [illegible] 19.1.84.

— o —

తిరువాయ్‌మొళి - మూన్ఱామ్ పత్తు - ఆఱామ్ తిరువాయ్‌మొళి

திருவாய்மொழி - மூன்றாம் பத்து - ஆறாம் திருவாய்மொழி

6. శెయ్యతామరైక్కణ్ణనాయ్ - செய்ய தாமரைக் கண்ணனாய்

1. செய்ய தாமரைக் கண்ணனாய்
உலகேழுமுண்டவன் கண்டீர்,
வையம் வானம் மனிசர் தெய்வம்
மற்றும் மற்றும் மற்றும் முற்றுமாய்,
செய்ய சூழ் சுடர் ஞானமாய்
வெளிப்பட்டிவை படைத்தான், பின்னும்,
மொய்கொள் சோதியோடாயினான்
ஒரு மூவராகிய மூர்த்தியே.

శెయ్యతామరైక్కణ్ణనాయ్ ఉలకేళుముణ్డవన్ కణ్డీర్,
వైయమ్ వానమ్ మనిశర్ దెయ్వమ్ మట్రుమ్ మట్రుమ్
మట్రుమ్ ముట్రుమాయ్,
శెయ్య శూళ్ శుడర్ ఞానమాయ్ వెళిప్పట్టివై పడైత్తాన్,
పిన్నుమ్,
మొయ్‌క్కొళ్ శోదియొడాయినాన్ ఒరు మూవరాకియ
మూర్త్తియే.

శెయ్యతామరైక్కణ్ణన్ ఆయ్ செய்ய தாமரைக் கண்ணன்
ஆய் = శెందామరవంటి (విశాలమై ఆకర్షణీయమైన) కన్నులుకలవ
వా, ఉలకు ఏళుమ్ உலகேழும் = ఏడులోకములను, ఉణ్డ
உண்ட = తిన్నటువంటి (మ్రింగిన), అవన్ அவன் = అతడు, కణ్డీర్
கண்டீர் = కండిరా, వైయమ్ வையம் = భూమియున్ను,
వానమ్ வானம் = మేలులోకములున్ను, మనిశర్ மனிசர் =
మనుష్యులు, దెయ్వమ్ தெய்வம் = దేవతలు, మట్రుమ్ மற்றும்
= ఇతర, మట్రుమ్ மற்றும் = ఇతర, మట్రుమ్ மற்றும் = ఇతర
ఇతర వస్తువులున్ను, ముట్రుమ్ முற்றும் = ఎల్లవు, ఆయ్ ஆய் =
ఆగి, శెయ్య செய்ய = దివ్యమైన, శూళ్ சூழ் = ఎల్లెడల వ్యాపించిన
శుడర్ சுடர் = తేజోమయమైన, ఞానమ్ ஞானம் = జ్ఞానము
ఆయ్ ஆய் = ఆగి, వెళిప్పట్టు வெளிப்பட்டு = తోరగ్గు (ప్రకట
మై), ఇవై இவை = ఇవన్నిటిని, పడైత్తాన్ படைத்தான் =
సృజించెను (సృష్టించెను), పిన్నుమ్ பின்னும் = ఆ బళిక,

Garani Srinivasan

ಮೊಯ್ಮ್ ಕೊಳ್ ಞಾಯಿಱಾನ್ = ವಿಲಕ್ಷಣ ಸಮರ್ಥನಾದ, ಶೋದಿ-ಯೋಡು ಒಕಾತ್ತಿಯೋಡು = ತೇಜಸ್ಸಿನ ಸ್ವರೂಪದಿಂದ, ಆಯಿನಾನ್ ಆಯಿಱಾನ್ = ಆಗಿರುವವನು (ಭಗವಂತನು), ಒರು ಕಾಲ್ = ಸಾಟಿಯಿಲ್ಲದ, ಮೂವರ್ ಆಯಿರ್ = ಮೂರು ಮಂದಿ, ಆಕಿಯ ಆಕ್ಕಿಯ = ಆದ, ಮೂರ್ತ್ತಿಯೇ ಮೂರ್ತ್ತಿಯೇ = ಮೂರ್ತಿಗಳೇ.

ಕೆಂದಾವರೆಯಂತೆ ಅರುಣವರ್ಣವೂ ವಿಶಾಲವೂ ಆದ ಕಣ್ಣುಗಳುಳ್ಳವನಾಗಿ, ಏಳು ಲೋಕಗಳನ್ನು ನುಂಗಿದ ಅವನು, ಭೂಮಿಯೂ ಮೇಲಣ ಲೋಕಗಳೂ ಮನುಷ್ಯರೂ ದೇವತೆಗಳೂ ಮತ್ತು ಇತರ ಇತರ ಇತ್ತರರ ವಸ್ತುಗಳೆಲ್ಲವೂ ಆಗಿ, ಎಲ್ಲೆಲ್ಲೂ ವ್ಯಾಪಿಸಿರುವ ತೇಜೋಮಯವಾದ ದಿವ್ಯವಾದ ಜ್ಞಾನವೂ ಆಗಿ, ಪ್ರಕಟಗೊಂಡು, ಇವುಗಳನ್ನು ಸೃಷ್ಟಿಸಿದನು; ಆ ಬಳಿಕ ವಿಲಕ್ಷಣವಾದ ಸಮರ್ಥವಾದ ತೇಜಸ್ಸ್ವರೂಪದಿಂದ ಸಾಟಿಯಿಲ್ಲದ ಮೂವರೂ ಆಗಿರುವ ಮೂರ್ತಿಗಳೇ ಅವನು ಕಂಡಿರಾ! (1)

ಭಗವಂತನು ತೇಜೋಮಯ ಮೂರ್ತಿಯಾಗಿ, ತನ್ನಿಷ್ಟಕ್ಕೆ ತಾನು ಹೇಗೆ ಇದನ್ನು ನಿರ್ಮಿಸಲಾರ ಬಾರದೇ? ಈ ಜಗತ್ಪ್ರಪಂಚವನ್ನು ಅವನೇಕೆ ತನ್ನ ಶಕ್ತಿಗಳಿಂದ ಬೇಕು? ತಾನೇ ನಾನಾ ರೂಪಗಳಾಗಿ, ವಸ್ತುಗಳಾಗಿ, ಬಂದು, ನಾನಾ ಬಗೆಯ ಕರ್ಮಗಳನ್ನೆಲ್ಲ ಆಡುತ್ತಾ, ಅವುಗಳ ನಿರ್ವಹಣೆಯ ಭಾರವನ್ನು ಹೊರುವುದಾದರೂ ಏಕೆ? ಸಂಕಲ್ಪಮಾತ್ರದಿಂದಲೇ ಇದೆಲ್ಲವನ್ನು ಸಾಧಿಸಿಕೊಳ್ಳಬಲ್ಲ ಅವನೇ ಮತ್ತೆ ಮೂರು ರೂಪಗಳಾಗಿ ಒಡೆದು ನಿಂತಿರುವುದಾದರೂ ಏಕೆ? – ಇದನ್ನೇ ಭಗವಂತನ ವಿಚಿತ್ರ ಲೀಲಾವಿನೋದ ಎನ್ನುವುದು! ಎಲ್ಲವನ್ನೂ ಸೃಷ್ಟಿಸಿ, ನಡೆಸುತ್ತಾ, ಸಾಕ್ಷಿಭೂತನಾಗಿ ನೋಡುತ್ತಾ, ಎಲ್ಲವನ್ನೂ ಒಂದು ನಿಯಮದಲ್ಲಿ ತಾನೇ ನುಂಗಿ, ಆ ಬಳಿಕವೂ ಅದನ್ನು ರಕ್ಷಿಸುವುದು! ಎಂಥ ಸೌಲಭ್ಯಗುಣ ಭಗವಂತನದು!

"ವೈಯಮೂ ವಾನಮೂ ಮಾನಿತರ್ ದೆಯ್ವಮೂ ಮಱ್ಱುಮೂ ಮುಱ್ಱುಮಾಯ್ ಮಱ್ಱುಮೂ ಮುಱ್ಱುಮೂ ಆಯ್' – ಸೃಷ್ಟಿಯಲ್ಲಿ ಕಂಡುಬರುವ ಎಲ್ಲಾ ವಸ್ತುಗಳನ್ನು ಸಂಪೂರ್ಣವಾಗಿ ಸೂಚಿಸುವ ಮಾತು. 'ವೈಯಮೂ', ಎಂದರೆ ಭೂಮಿ, 'ವಾನಮೂ' ಎಂದರೆ ಆಕಾಶ. ಇವೆರಡರ ನಡುವೆ ಇರುವುದು ನೀರು, ಗಾಳಿ, ತೇಜಸ್ಸು – ಇವುಗಳು, ಭಗವಂತನು ಪಂಚಭೂತಗಳನ್ನು ಸೃಷ್ಟಿಸಿದನು. ಆ ಪಂಚಭೂತಗಳೂ ಅವನೇ. 'ಮಾನಿತರ್' ಎಂದರೆ ಮನುಷ್ಯರು, 'ದೆಯ್ವಮೂ' ಎಂಬುದರಲ್ಲಿ ದೇವತೆಗಳು ಮತ್ತು ಅವರಲ್ಲಿರುವ ನಾನಾ ಪಂಗಡಗಳು – ಯಕ್ಷರು, ಸಿದ್ಧರು, ಸಾಧ್ಯರು, ಗಂಧರ್ವರು, ಕಿನ್ನರರು, ಕಿಂಪುರುಷರು – ಇತ್ಯಾದಿಗಳು.

Garani Srinivasan

